


ಜಾತಿ ವ್ಯವಸ್ಥೆಗೆ ಸವಾಲಾದ ಶರಣರು

ರಂಜಾನ್ ದರ್ಗಾ

ಚಿಕ್ಕಗೌಡ್ರ ನಾಗನಗೌಡ – ಶಿವಮ್ಮ ದತ್ತಿ – ಎಂಟನೇ ಪ್ರಕಟಣೆ

ಜಾತಿ ವ್ಯವಸ್ಥೆಗೆ ಸವಾಲಾದ ಶರಣರು

ರಂಜಾನ್ ದರ್ಗಾ

ಲೋಹಿಯಾ ಪ್ರಕಾಶನ
ಬಳ್ಳಾರಿ

JATI VYAVASTHEGE SAVALADA SHARANARU
A Collection of Articles by
RAMJAN DARGA
Chief Administrative Officer
Sarvajna Group of Educational Institutions
High Court Ring Road, GULBARGA -585102
Mobile : 9242470384, 8050026840

Published by
LOHIYA PRAKASHANA
'Kshitija', Kappagallu Road
Gandhinagar, Bellary - 583103
Tel : 08392-257412

ISBN : 978-81-87731-43-6

First Impression : 2013

Pages : 88

Price : Rs. 30

Cover Design : Sudhakara Darbe

ಜಾತಿ ವ್ಯವಸ್ಥೆಗೆ ಸವಾಲಾದ ಶರಣರು
ರಂಜಾನ್ ದರ್ಗಾ

ಪ್ರಕಾಶಕರು :
ಲೋಹಿಯಾ ಪ್ರಕಾಶನ
'ಕ್ಷಿತಿಜ', ಕಪ್ಪಗಲ್ಲು ರಸ್ತೆ
ಗಾಂಧಿನಗರ, ಬಳ್ಳಾರಿ–583103

ಬೆಲೆ : ರೂ. ೩೦

ಸ್ವಾನ್ ಪ್ರಿಂಟರ್ಸ್
www.svanprinters.com
☎ 080-26742233

ನಿವೇದನೆ

ಬಸವ ಜಯಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಕೆಲ ವಿಪರೀತ ಸಂಶೋಧಕರು ಭಾರತದಲ್ಲಿ ಜಾತಿಗಳೇ ಇಲ್ಲ ಎಂಬ ವಿತಂಡವಾದವನ್ನು ಮುಂದಿಟ್ಟಿದ್ದಾರೆ. ಅವರು ಏನಾದರೂ ಹೇಳಲಿ, ಅದು ಅವರಿಗೆ ಬಿಟ್ಟಿದ್ದು. ಆದರೆ ಅವರು ವಚನ ಸಾಹಿತ್ಯ ಮತ್ತು ಚಳವಳಿಗೆ ತಳಕು ಹಾಕಿಕೊಂಡು ತಮ್ಮ ವಾದ ಮಂಡನೆ ಮಾಡುತ್ತಿರುವುದರಿಂದ ಮತ್ತು ಆ ಮೂಲಕ ಮಧ್ಯಯುಗದ ಅನನ್ಯವಾದ ಜನಪರ ವಚನ ಚಳವಳಿಯ ಪಂಜನ್ನು ವೈದಿಕರ ಅಧ್ಯಾತ್ಮ ಎಂಬ ಕೊಳೆತು ನಾರುತ್ತಿರವ ನೀರಲ್ಲಿ ಅದ್ದಿ ತೆಗೆಯಲು ಪ್ರಯತ್ನಿಸುತ್ತಿರುವುದರಿಂದ, ವಚನ ಚಳವಳಿಯ ಬೆಳಕಲ್ಲಿ ಮಾನವ ಜನಾಂಗದ ಸುಂದರ ಭವಿಷ್ಯವನ್ನು ಕಂಡುಕೊಳ್ಳಲು ಹಂಬಲಿಸುತ್ತಿರುವವರು ಅವರ ಹೀನಕೃತ್ಯವನ್ನು ಒಕ್ಕೊರಲಿನಿಂದ ವೈಚಾರಿಕವಾಗಿ ವಿರೋಧಿಸುವುದು ನೈತಿಕ ಜವಾಬ್ದಾರಿಯಾಗಿದೆ.

ಬಹುಪಾಲು ಸ್ವಾಮಿಗಳು ಮತ್ತು ಲಿಂತವಂತರು ಏನೂ ನಡೆದೆ ಇಲ್ಲವೆಂಬಂತೆ ಇರುವುದು ಸಖೇದಾಶ್ಚರ್ಯ ಹುಟ್ಟಿಸುತ್ತಿದೆ. ಎಲ್ಲರಿಗೂ ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಆ ಅಭಿಪ್ರಾಯಗಳು ತಪ್ಪೆನಿಸಿದಾಗ ಮತ್ತು ಅವು ಮಾನವರ ಅಭ್ಯುದಯಕ್ಕೆ ಹಾನಿಯನ್ನುಂಟು ಮಾಡುವಂಥವು ಎಂಬುದು ಕಂಡು ಬಂದಾಗ ದಾಖಲೆ ಮತ್ತು ಆಧಾರಗೊಳಿಂದಿಗೆ ಅಲ್ಲಗಳೆಯುವುದು ಅನಿವಾರ್ಯವಾಗುತ್ತದೆ.

ಜಾತಿಗಳೇ ಇಲ್ಲವೆಂದಮೇಲೆ, ಶೋಷಣೆಯೇಇಲ್ಲ. ಈ ಕಾರಣದಿಂದ ಶರಣರ ಚಳವಳಿಗೆ ಅರ್ಥವೇ ಇಲ್ಲ ಎಂಬ ತರ್ಕಕ್ಕೆ ಸಮಾಜ ಜೋತು ಬೀಳುವಂತೆ ಮಾಡಲು ಪಟ್ಟಭದ್ರ ಹಿತಾಸಕ್ತಿಗಳು ಸದಾ ಪ್ರಯತ್ನಿಸುತ್ತಲೇ ಬಂದಿವೆ. ಕೆಲ ಬುದ್ಧಿಜೀವಿಗಳು ತಮ್ಮ ಸನಾತನ ಪ್ರಜ್ಞೆಯನ್ನು ಹೀಗೆ ಹರಿಬಿಡುತ್ತ ಪಟ್ಟಭದ್ರ ಹಿತಾಸಕ್ತಿಗಳ ಯಥಾಸ್ಥಿತಿ ವಾದವನ್ನು ಬೆಂಬಲಿಸುವ ಪ್ರಸಂಗಗಳನ್ನು ಎದುರಿಸುತ್ತಲೇ ಬಂದಿದ್ದೇವೆ.

'ಲಿಂಗಾಯತರು ಎನ್ನುವ ಪದ ವಚನಗಳಲ್ಲಿ ಇಲ್ಲವೇ ಇಲ್ಲ. ವಚನಕಾರರು ಲಿಂಗವಂತ ಪದ ಬಳಸಿದ್ದಾರೆ. ಅದು ವೀರಶೈವಕ್ಕೆ ಪರ್ಯಾಯವಾಗಿದೆ. ವೀರಶೈವವು ಹಿಂದುಧರ್ಮದ ಭಾಗವೇ ಆಗಿದೆ. ಆದ್ದರಿಂದ ಲಿಂಗಾಯತರು ಹಿಂದುಗಳೇ ಆಗಿದ್ದಾರೆ'

ಎಂದು ಸ್ವಯಂಸೇವಕ ಮೂರ್ತಿಗಳು ಮೊದಲಿನಿಂದಲೂ ವಾದಿಸುತ್ತಿದ್ದಾರೆ. ಈಗ ಭಾರತದಲ್ಲಿ ಜಾತಿಗಳು ಇವೆಯೆ? ಎಂದು ತಮ್ಮದೇ ಆದ ಸಂಶೋಧನೆಯ ಮೂಲಕ ಪ್ರಶ್ನಿಸುವವರು ಹುಟ್ಟಿಕೊಂಡಿದ್ದಾರೆ. ಇದು ವಿಚಿತ್ರ ಆದರೂ ಸತ್ಯ. ದಲಿತರ, ಹಿಂದುಳಿದವರ ಮತ್ತುದುಡಿಯುವ ವರ್ಗದ ಚಳವಳಿಗಳಿಗೆ ಹಿನ್ನಡೆಯನ್ನುಂಟು ಮಾಡುವುದೇ ಇಂಥ ಚಿಂತನೆಗಳ ಉದ್ದೇಶವಾಗಿರುತ್ತದೆ. ಲಿಂಗಾಯತರು ತಮ್ಮ ಮೂಲವನ್ನು ದಲಿತ, ಹಿಂದುಳಿದ, ಕಾಯಕಜೀವಿಗಳಲ್ಲಿ ಮತ್ತು ಜಾತಿವಿರೋಧಿ ಪರಂಪರೆಯಲ್ಲಿ ಗುರುತಿಸಿಕೊಳ್ಳದೆ ಹೋದರೆ ಐತಿಹಾಸಿಕ ಸತ್ಯವನ್ನು ಮರೆಮಾಚಿದಂತಾಗುತ್ತದೆ. ಎಲ್ಲ ಜನಾಂಗಗಳನ್ನು ಒಂದುಗೂಡಿಸುವ ಮಹಾನ್ ಉದ್ದೇಶದೊಂದಿಗೆ ಗುಡಿಗಳಿಲ್ಲದ ಏಕದೇವೋಪಾಸನೆಯನ್ನು ಬಸವಣ್ಣನವರು ಜಾರಿಗೊಳಿಸಿದರು. ದೇವರು ಪ್ರತಿಯೊಬ್ಬರ ಜೊತೆಯಲ್ಲಿದ್ದಾನೆ. ಪೂಜಾರಿಗಳೆಂಬ ಮಧ್ಯವರ್ತಿಗಳಲ್ಲದೆ ನೇರವಾಗಿದೇವರ ಪೂಜೆಯಲ್ಲಿ ತೊಡಗಲು ಸಾಧ್ಯವಾಗುವಂಥ ಇಷ್ಟಲಿಂಗವನ್ನು ಬಸವಣ್ಣನವರು ಸೃಷ್ಟಿಸಿದರು.

ಪಂಚಾಂಗ, ಸ್ಥಾವರ ಪೂಜೆ ಮತ್ತು ಕಾಲುಬೀಳುತ್ತ ತಿರುಗುವುದನ್ನು ವಿರೋಧಿಸಿದರು. ಮಜ್ಜನಕ್ಕೆರೆದುದು ಪಾದೋದಕ ಎಂದು ಹೇಳಿದರು. ಆ ಮೂಲಕ ಲಿಂಗಜಲದ ಆಯುರ್ವೇದೀಯ ಮಹತ್ವವನ್ನು ಸೂಚಿಸಿದರು. ಪಾದಪೂಜೆ ಎಂಬುದಕ್ಕೆ ಜ್ಞಾನಪೂಜೆ ಎಂಬರ್ಥವಿದೆ. ಪಾದವೆಂದರೆ ಕಿರಣ, ಜ್ಞಾನ, ಹೊಳೆಹು ಮುಂತಾದ ಅರ್ಥಗಳಿವೆ. ಶರಣರಧರ್ಮ 'ಶರಣು ಶರಣಾರ್ಥಿಧರ್ಮ' ಎಂಬುದನ್ನು ತಿಳಿದುಕೊಳ್ಳುವುದು ಈ ಕಾಲದ ಅವಶ್ಯಕತೆಯಾಗಿದೆ. ಗೊಡ್ಡು ಸಂಪ್ರದಾಯದ ಪ್ರತೀಕವಾದ ಪಾದಪೂಜೆ ಮತ್ತು ಪಾದೋದಕ ಬಿಟ್ಟು ಬಸವಣ್ಣನವರ ಜ್ಞಾನ ಪರಂಪರೆಯ ಪಾದಪೂಜೆ ಮತ್ತು ಪಾದೋದಕ ಜಾರಿಗೆ ತರಬೇಕಾದುದು ವಿರಕ್ತ ಮಠಗಳ ಸ್ವಾಮಿಗಳ ನೈತಿಕಜವಾಬ್ದಾರಿಯಾಗಿದೆ. ಬಸವ ಧರ್ಮದ ಪೂಜಾವಿಧಾನದಲ್ಲಿ ತೆಂಗಿನಕಾಯಿಗೆ ಸ್ಥಾನವೇ ಇಲ್ಲ. ಗದ್ದುಗೆ ಪೂಜೆಗೆತೆಂಗಿನ ಕಾಯಿಗಳ ಉಪಯೋಗವನ್ನು ನಿಲ್ಲಿಸಬೇಕಾಗಿದೆ. ಗದ್ದುಗೆಗಳಲ್ಲಿನ ಪೂಜೆಯ ಬದಲಿಗೆ ಸ್ವಚ್ಛತೆ ಕಾಪಾಡಿಕೊಂಡು ವಚನ ಪಠಣ ಮಾಡುವುದು ಮತ್ತು ವಚನ ಚಿಂತನೆ ಮಾಡುವುದು ಅವಶ್ಯವಾಗಿದೆ. ಲಿಂಗವಂತರಿಗೆ ಇಷ್ಟಲಿಂಗ ಪೂಜೆ ಬಿಟ್ಟರೆ ಬೇರಾವ ಪೂಜೆಯ ಅವಶ್ಯಕತೆ ಇಲ್ಲ ಎಂದು ಭಕ್ತರಿಗೆ ತಿಳಿಹೇಳುವುದು. ಎಲ್ಲರೂ ಶಿವಸ್ವರೂಪಿಗಳೇ ಆಗಿರುವುದರಿಂದ 'ಶರಣು' ಮತ್ತು 'ಶರಣಾರ್ಥಿ' ಪದ್ಧತಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಇಲ್ಲದಿದ್ದರೆ ಮುಂಬರುವ ಜನಾಂಗ ಕಾಲುಬೀಳುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಈ ಧರ್ಮದಿಂದಲೇ ದೂರಾಗುವ ಸಂಭವವಿದೆ. ಹೀಗೇ ಮುಂದುವರಿದರೆ ಈ ಕ್ರಾಂತಿಕಾರಿಧರ್ಮ ನಿಷ್ಕ್ರಿಯಧರ್ಮವಾಗಿ ಮನುಧರ್ಮದೊಳಗೆ ಕರಗಿಹೋಗುವ ಅಪಾಯವಿದೆ. ವೈದಿಕ ಬುದ್ಧಿಜೀವಿಗಳು ಈಗಾಗಲೇ ಇಂಥ ಪ್ರಯತ್ನಗಳನ್ನು ಮಾಡುತ್ತಿರುವ ಬಗ್ಗೆ ಲಿಂಗಾಯತ ಸ್ವಾಮಿಗಳು ತಿಳಿದುಕೊಳ್ಳಲೇ ಬೇಕಾಗಿದೆ. ತಿಳಿದುಕೊಳ್ಳಲು ಬಹಳೇ ತಡವಾಗಿರುವ ಕಾರಣ ಬಹುಪಾಲು ಲಿಂಗಾಯತರು ತಮ್ಮಧರ್ಮದ ಮೂಲತತ್ತ್ವಗಳನ್ನು ಮರೆತು ಗುಡಿಗುಂಡಾರ ಸುತ್ತುವುದು,

ಮೂಢನಂಬಿಕೆಗಳಿಗೆ ಬಲಿಯಾಗುವುದು, ಪಂಚಾಂಗವನ್ನು ನಂಬಿ ಬದುಕುವುದು. ಜಾತೀಯತೆಯ ಆಚರಣೆ ಮಾಡುವುದು. ಲಿಂಗಾಯತ ಸಮಾಜದಲ್ಲಿ ಶರಣರಿಗೆ ಗೊತ್ತಿರದ ಉಪಜಾತಿಗಳು ಸೃಷ್ಟಿಯಾಗಿದ್ದನ್ನು ರಕ್ಷಿಸಿಕೊಂಡು ಮುಂದುವರಿಯುವುದು ನಡೆದೆ ಇದೆ. ಎಲ್ಲ ಕಡೆಗಳಲ್ಲಿ ಲಿಂಗವಂತ ಪ್ರಜ್ಞಾವಂತರು ಈ ಅನಿಷ್ಟಗಳನ್ನು ಮೀರಿ ನಡೆಯುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಸ್ವಾಮಿ ಇಂಥವರನ್ನು ಪ್ರೋತ್ಸಾಹಿಸುವ ಮೂಲಕ ಲಿಂಗಾಯತರು ಮತ್ತೆ ವೈಚಾರಿಕವಾಗಿ ಸಮಾಜಕ್ಕೆ ಮಾರ್ಗದರ್ಶಕರಾಗಿ ಬೆಳೆಯುವಂತೆ ಮಾಡುವುದು ಅವಶ್ಯವಾಗಿದೆ. ಇಲ್ಲದಿದ್ದರೆ ವಿತಂಡವಾದಿ ಸಂಶೋಧಕರು ಮತ್ತು ಬುದ್ಧಿಜೀವಿಗಳು ಹೆಚ್ಚಾಗಿ ಈ ಧರ್ಮದ ಮಹತ್ವವನ್ನೇ ಅಲ್ಲಗಳೆಯುವ ದಿನಗಳು ದೂರವಿಲ್ಲ.

ಕಾಯಾ, ವಾಚಾ, ಮನಸಾ ಕಟ್ಟಕಡೆಯ ಮನುಷ್ಯರಾಗಿಅವರ ನೋವನ್ನು ಅನುಭವಿಸದೆ ಲಿಂಗವಂತರಾಗಲು ಸಾಧ್ಯವಿಲ್ಲ. ಬಸವಣ್ಣನವರು ಮಾನಸಿಕವಾಗಿ ಕಟ್ಟಕಡೆಯ ಮನುಷ್ಯರನ್ನು ಗುರುತಿಸುವವರಾಗಿದ್ದರಿಂದಲೇ ಅನೈತಿಕ ಸಂಬಂಧದಿಂದ ಹುಟ್ಟಿದ ಮಕ್ಕಳ ದುಃಖದ ಅರಿವು ಆಯಿತು. ದಲಿತರ ನೋವಿನ ಅರಿವಾಯಿತು. ಈ ಅಂತಃಕರಣದ ಅರಿವೇ ಇಷ್ಟಲಿಂಗವಾಯಿತು. ಅವರು ಈ ಅಂತಃಕರಣವನ್ನೇ ಇಷ್ಟಲಿಂಗ ರೂಪದಲ್ಲಿ ಧರಿಸಿದರು ಮತ್ತು ಲೋಕದ ಜನರಿಗೆ ಧರಿಸಲುಕೊಟ್ಟರು. ಆದ್ದರಿಂದ ಇಷ್ಟಲಿಂಗ ಧರಿಸುವ ಮೊದಲು ಅನಾಥರ ಮತ್ತುದಲಿತರ ನೋವನ್ನುಅನುಭವಿಸುತ್ತ ಪವಿತ್ರರಾಗಬೇಕು. ಹೀಗೆ ಪವಿತ್ರವಾದ ನಂತರವೇ ಲಿಂಗವಂತರಾಗಲು ಯೋಗ್ಯತೆ ಬರುವುದು. ಬಸವಣ್ಣನವರು ಅನಾಥರ ದಲಿತರ ಬಡವರ ಹೆಣ್ಣುಮಕ್ಕಳ ಹಾಗೂ ಎಲ್ಲ ಕಾಯಕಜೀವಿಗಳ ನೋವನ್ನು ಮತ್ತು ಅಸಹಾಯಕತೆಯನ್ನು ನಿವಾರಿಸಿ ಮಾನವಘನತೆಯಿಂದ ತುಂಬಿದ ಮತ್ತು ಎಲ್ಲ ರೀತಿಯಿಂದಲೂ ಸಮಾನತೆಯನ್ನು ಹೊಂದಿದ ಶರಣ ಸಂಕುಲವನ್ನು ನಿರ್ಮಿಸಿ ಇಡೀ ಲೋಕಕ್ಕೆ ಮಾದರಿಯಾದರು.

ಈ ಕಾರಣದಿಂದಲೆ ಬಸವೇಶ್ವರರು ಮಹಾನುಭಾವಿ ಎನಿಸಿದರು.ಆ ಮೂಲಕ ಜಗಜ್ಯೋತಿಯಾದರು. 'ಬಸವಣ್ಣನವರ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚನ್ನಬಸವಣ್ಣನವರು ಹೇಳಿದ್ದಾರೆ. ಅಂದರೆ ಇಷ್ಟಲಿಂಗವು ಬಸವಣ್ಣನವರ ಅಂತಃಕರಣದಿಂದ ಕೂಡಿದ ಅರಿವಿನ ಸಂಕೇತವಾಗಿದೆ. ಅಂಥ ಜೀವಕಾರುಣ್ಯವಿಲ್ಲದೆ ಇಷ್ಟಲಿಂಗವಿಲ್ಲ ಎಂಬುದು ಬಸವಾದಿ ಪ್ರಮಥರದೃಢ ನಿಲವು ಆಗಿದೆ. ಅಪ್ಪ ನಮ್ಮ ಮಾದಾರಚನ್ನಯ್ಯ, ಬೊಮ್ಮ ನಮ್ಮ ಡೋಹಾರಕಕ್ಕಯ್ಯ ಎಂದು ಹೇಳುವುದರ ಮೂಲಕ ಬಸವಣ್ಣನವರು ತಾವು ಮಾನಸಿಕವಾಗಿ ಕೆಳಜಾತೀಕರಣಕ್ಕೆ ಒಳಗಾಗಿರುವುದನ್ನು ಸಾಬೀತು ಪಡೆಸಿದ್ದಾರೆ.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಎಲ್ಲ ಜಾತಿ ಜನಾಂಗಗಳ ಬಡವರನ್ನು ಒಂದುಗೂಡಿಸಿದರು; ಸಂಘಟಿಸಿದರು. ಅವರಿಗೆ ಹೊಸ ಬದುಕಿನ ಪಾಠ ಕಲಿಸಿದರು. ಹೊಸ ಸಮಾಜಕ್ಕಾಗಿ ಹೋರಾಡುವ ಶಕ್ತಿಯನ್ನು ತುಂಬಿದರು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಆ ಹೊಸ ಸಮಾಜ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಿಲ್ಲ. ದುಡಿಯುವ ವರ್ಗದಿಂದ ಬಂದ ಶರಣರ ಕಗ್ಗೊಲೆ ಮಾಡಿದರು. ಹೀಗಾಗಿ

ಬಸವಣ್ಣನವರು ಮಾಡಬೇಕಾಗಿದ್ದ ಸಮಗ್ರಕ್ರಾಂತಿಗೆ ಹಿನ್ನಡೆಯಾಯಿತು. ನಾವು ಇಂದು ಆ ಸಮಗ್ರ ಕ್ರಾಂತಿಯನ್ನು ಮುನ್ನಡೆಸಬೇಕಿದೆ. ಬಸವಣ್ಣನವರು ಹೇಳಿದಂತೆ ಬಡವರನ್ನು ಒಂದುಗೂಡಿಸಬೇಕಿದೆ. ಸಮಾನತೆ ಸಮಾಜಕ್ಕಾಗಿ ಹೋರಾಡಬೇಕಿದೆ.

ಏನೂ ಇಲ್ಲದವರ ಬಳಿ ಜಗತ್ತನ್ನು ಬದಲಿಸುವ ಶಕ್ತಿ ಇರುತ್ತದೆ ಎಂಬುದನ್ನು ಮೊದಲಿಗೆ ಕಂಡು ಹಿಡಿದವರು ಬಸವಣ್ಣನವರು. ಇದೇ ಬಸವಧರ್ಮದ ವೈಶಿಷ್ಟ್ಯ. ಯಾವುದೇ ಆರ್ಥಿಕ ಸಾಮರ್ಥ್ಯ ಇಲ್ಲದ ಬಡ ಕಾಯಕಜೀವಿಗಳನ್ನು ಬಸವಣ್ಣನವರು ಒಂದುಗೂಡಿಸಿದ್ದು ವಿಶ್ವದಲ್ಲೇ ಮಹತ್ವದ ಸಾಧನೆಯಾಗಿದೆ.

ಬಸವಳಿದವರೊಳಗಿನ ಬದಲಾವಣೆಯ ಶಕ್ತಿಯನ್ನು ಅರಿತ ಬಸವಣ್ಣನವರು ಅವರ ಸಂಘಟನೆಯ ಮೂಲಕ ನವಸಮಾಜದ ಮಾದರಿಯನ್ನು ನಿರ್ಮಿಸಿ ತೋರಿಸಿದರು. ಇಷ್ಟಲಿಂಗ ಈ ನವಸಮಾಜ ನಿರ್ಮಾಣಕ್ಕೆ ಪೂರಕವಾಯಿತು.

ಪ್ರಜ್ಞಾವಂತರು ಈ ಧರ್ಮದ ಮಾನವೀಯ ಮೌಲ್ಯಗಳನ್ನು ಎಲ್ಲೆಡೆ ಪ್ರಚಾರ ಮಾಡಿದರೆ ವಚನಗಳು ಮಾನವಕುಲದ ಸಂವಿಧಾನ ಎಂಬುದನ್ನು ಜಗತ್ತು ಅರಿತುಕೊಳ್ಳುವ ದಿನಗಳು ದೂರವಿಲ್ಲ. ಮಾನವಕುಲ ನೆಮ್ಮದಿಯಿಂದ ಬದುಕಲೆಂದು ಶರಣರು ವಚನಗಳನ್ನು ಬರೆದಿದ್ದಾರೆ. ಹೀಗಾಗಿ ವಚನಗಳು ಸಹಜವಾಗಿಯೇ ಜಗತ್ತಿನ ಎಲ್ಲ ದೇಶಗಳ ಸಂವಿಧಾನದ ಭಾಗವಾಗಿವೆ. ಈ ಕಾರಣದಿಂದಲೇ 'ವಚನ ಸಂವಿಧಾನ' ಎಂದು ಶರಣರ ವಚನಗಳನ್ನು ಕರೆಯಲಾಗುತ್ತಿದೆ. ಜಗತ್ತಿನ ಎಲ್ಲ ಸಂವಿಧಾನಗಳು, ಶರಣರ ವಚನಗಳ ನಂತರವೇ ಹುಟ್ಟಿದವುಗಳಾಗಿವೆ. ಆಶ್ಚರ್ಯವೆಂದರೆ ಈ ಎಲ್ಲ ಸಂವಿಧಾನಗಳು ವಚನಗಳಲ್ಲಿನ ಮಾನವೀಯ ಮೌಲ್ಯಗಳನ್ನೇ ತಮ್ಮ ಆದರ್ಶವಾಗಿರಿಸಿಕೊಂಡಿವೆ. ಈ ಸತ್ಯವನ್ನು ಜಗತ್ತಿಗೆ ಸಾರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ವಿವಿಧ ದೇಶಗಳ ತಜ್ಞರು ವಚನಗಳನ್ನು ಓದಿಯೇ ಸಂವಿಧಾನ ರಚಿಸಿದರು ಎಂಬುದು ಇದರರ್ಥವಲ್ಲ. ಆದರೆ ವಚನಕಾರರು ವಿಶ್ವಮಾನವನ ಪರಿಕಲ್ಪನೆಯಲ್ಲಿ ವಚನಗಳನ್ನು ರಚಿಸಿದ್ದಾರೆ. ಆ ಮೂಲಕ ಮಾನವ ಸಂಸ್ಕೃತಿ, ಸಂಸ್ಕಾರ, ನಾಗರೀಕತೆ ಮತ್ತು ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ.ಆದ್ದರಿಂದ ಸಹಜವಾಗಿಯೇ ಭಾರತವೂ ಸೇರಿದಂತೆ ಯಾವುದೇ ದೇಶದ ಸಂವಿಧಾನದ ಆಶಯಗಳು ವಚನಗಳ ಆದರ್ಶಗಳನ್ನು ಕಡೆಗಣಿಸಿಲ್ಲ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ವರ್ಗ, ವರ್ಣ, ಜಾತಿ, ಧರ್ಮ ಮತ್ತು ಲಿಂಗಭೇದವಿಲ್ಲದೆ ಮಾನವ ಹಕ್ಕುಗಳನ್ನು ಎತ್ತಿ ಹಿಡಿಯುವ ಕ್ರಮವನ್ನು ವಚನಗಳು ತಿಳಿಹೇಳುತ್ತವೆ. ಅಲ್ಲದೆ ಈ ನಿಟ್ಟಿನಲ್ಲಿ ಸಾಗುವ ಮಾರ್ಗದ ಕಡೆಗೆ ನಾವು ಹೋಗುವಂತೆ ಮಾಡುತ್ತವೆ.

ಶರಣರು ನುಡಿದಂತೆ ನಡೆದರು. ಅವರ ಅರಿವು ಮತ್ತು ಆಚರಣೆಯಲ್ಲಿ ಯಾವುದೇ ವ್ಯತ್ಯಾಸವಿರಲಿಲ್ಲ. ಅವರು ತಮ್ಮ ಜೀವಿತಾವಧಿಯಲ್ಲೇ ಮಾನವೀಯ ಮೌಲ್ಯಗಳನ್ನು ಆಚರಣೆಯಲ್ಲಿ ತಂದು ತೋರಿಸಿದರು.

ಹುಟ್ಟಿನಿಂದ ಯಾರೂ ದೊಡ್ಡವರಲ್ಲ, ಹಣದಿಂದ ಯಾರೂ ದೊಡ್ಡವರಲ್ಲ, ಪುರುಷರಾಗಿ ಹುಟ್ಟಿದ ಕಾರಣ ಯಾರೂ ದೊಡ್ಡವರಲ್ಲ, ಪಾಂಡಿತ್ಯದಿಂದ ಯಾರೂ ದೊಡ್ಡವರಲ್ಲ. ಸಕಲ ಜೀವಾತ್ಮರಿಗೆ ಒಳ್ಳೆಯದನ್ನು ಬಯಸುವವರು ಮತ್ತು ಬಯಸಿದಂತೆ ನಡೆದು ತೋರಿಸುವವರು ದೊಡ್ಡವರು. ಕಾಯಕ ಮಾಡುತ್ತ, ಕಾಯಕದಿಂದ ಬಂದುದನ್ನು ದೇವರ ಪ್ರಸಾದವೆಂದು ಸ್ವೀಕರಿಸುತ್ತ, ಹಾಗೆ ಸ್ವೀಕರಿಸಿದ್ದನ್ನು ದಾಸೋಹ ಪ್ರಜ್ಞೆಯೊಂದಿಗೆ ಸಮಾಜ ಸೇವೆ ಮಾಡುತ್ತ ಬದುಕುವವರೇ ದೊಡ್ಡವರು. ಇವರೇ ಶರಣರು.

ಆದರೆ ಶರಣರು ತಮ್ಮನ್ನು ಎಂದೂ ದೊಡ್ಡವರೆಂದು ಭಾವಿಸಲಿಲ್ಲ. ಅವರು ಮಕ್ಕಳಿಗೂ ಶರಣು ಎಂದು ಬದುಕಿದವರು. ಈ ಕಾರಣದಿಂದಲೇ ಶರಣರ ವಚನಗಳು ಆದರ್ಶಗಳ ಆಗರವಾಗಿವೆ. ಬಡವರ, ಎಲ್ಲ ಕಾಯಕಜೀವಿಗಳ, ಎಲ್ಲ ರೀತಿಯ ಶೋಷಣೆಗೆ ಒಳಗಾದವರ ಮತ್ತು ಮಹಿಳೆಯರ ಘನತೆಯನ್ನು ಎತ್ತಿಹಿಡಿಯುವ ಶಕ್ತಿಯನ್ನು ಹೊಂದಿವೆ. ಆ ಮೂಲಕಇಡೀ ಮಾನವಕುಲದ ಸಂಪತ್ತಾಗಿವೆ.

ಅಕ್ಷಯವಾಗಿರುವಂಥ ಈ ಜ್ಞಾನ ಸಂಪತ್ತನ್ನು ವಿಶ್ವಕ್ಕೆ ಹಂಚುವ ಜವಾಬ್ದಾರಿ ನಮ್ಮ ಮೇಲೆ ಇದೆ. ಎಲ್ಲಕ್ಕೂ ಮೊದಲು ನಮ್ಮ ಪೀಳಿಗೆ ಈ ವಚನ ಸಂಪತ್ತಿನ ವಾರಸುದಾರರಾಗಬೇಕಿದೆ. ಅವರು ಹೆಚ್ಚು ಹೆಚ್ಚು ವಚನ ಪಠಣ ಮಾಡುವುದರ ಮೂಲಕ ವಚನ ಸಂಬಂಧವನ್ನು ಬೆಳೆಸಿಕೊಳ್ಳಬೇಕಿದೆ. ಹೀಗೆ ಬೆಳವಣಿಗೆ ಸಾಧಿಸುತ್ತ ವಚನ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಬೇಕಿದೆ. ಜಗತ್ತಿಗೆ ವಚನದ ಮಹತ್ವವನ್ನು ಸಾರಬೇಕಿದೆ. ಇಂಥ ಕಾಳಜಿಯನ್ನಿಟ್ಟುಕೊಂಡೆ ಈ ಪುಸ್ತಕವನ್ನು ರಚಿಸಲಾಗಿದೆ.

ನಾನು ಮತ್ತು ಲೋಹಿಯಾ ಪ್ರಕಾಶನದಅಣ್ಣ ಸಿ.ಚನ್ನಬಸವಣ್ಣನವರು ಕೂಡಿ ಕೆಲವರ್ಷಗಳಿಂದ ಈ ನಿಟ್ಟಿನಲ್ಲಿ ಒಂದಿಷ್ಟು ಅಳಿಲು ಸೇವೆಯನ್ನು ಮಾಡುತ್ತಿದ್ದೇವೆ. ನನ್ನ ಪುಸ್ತಕಗಳ ಪ್ರಕಟಣೆಯಿಂದ ಅವರಾಗಲಿ ನಾನಾಗಲಿ ಯಾವುದೇ ಆರ್ಥಿಕ ಲಾಭ ಪಡೆದಿಲ್ಲ ಎಂದು ಹೇಳಲು ಸಂತೋಷವೆನಿಸುತ್ತದೆ. ನನಗೆ ಹಾನಿಯೂಆಗಿಲ್ಲ. ಆದರೆ ಅವರಿಗೆ ಆರ್ಥಿಕವಾಗಿ ಹಾನಿಯಾಗಿಲ್ಲ ಎಂದು ಹೇಳಲು ಬರುವುದಿಲ್ಲ. ಅಷ್ಟೊಂದು ಪ್ರೀತಿಯಿಂದ ಅವರು ನನ್ನ ಪುಸ್ತಕಗಳನ್ನು ಪ್ರಕಟಿಸಿ ಕಡಿಮೆ ಬೆಲೆ ಇಟ್ಟು ಮಾರುತ್ತ ಆನಂದಪಡುತ್ತಾರೆ. ಆ ಮೂಲಕ ನನಗೆ ಲಕ್ಷಾಂತರ ಸಹೃದಯರನ್ನು ಗಳಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾನು ಋಣಿಯಾಗಿದ್ದೇನೆ.

ನನ್ನ ಹಿಂದಿನ ಕೃತಿಗಳನ್ನು ಪ್ರೀತಿಯಿಂದ ಸ್ವೀಕರಿಸಿದಂತೆ ಸಹೃದಯರು ಈ ಕೃತಿಯನ್ನೂ ಸ್ವೀಕರಿಸುವರು ಎಂಬ ಆಶಾಭಾವವನ್ನು ಹೊಂದಿದ್ದೇನೆ.

ಈ ಕೃತಿ ಹೊರಬರಲು ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ಗುಲ್ಬರ್ಗಾ
೦೧.೦೭.೨೦೧೩

ರಂಜಾನ್ ದರ್ಗಾ

ಪ್ರಕಾಶಕರ ನುಡಿ

ಮಾನವ ಜಾತಿಯ ಸ್ವಾತಂತ್ರ್ಯ ಮತ್ತು ಸಮಾನತೆಯ ತಳಹದಿಯ ಮೇಲೆ, ಲಿಂಗಭೇದರಹಿತ ಹೊಸ ಸಮಾಜ ಕಟ್ಟಲು ಹನ್ನೆರಡನೇ ಶತಮಾನದಲ್ಲೇ ಶ್ರಮಿಸಿದ ಶರಣರ ಪ್ರಯತ್ನ/ಚಳವಳಿ ಜಗತ್ತಿನ ಇತಿಹಾಸದಲ್ಲೇ ದಾಖಲಾಗುವಂಥದ್ದು. ಆದರೆ ಇತ್ತೀಚಿಗೆ ಕೆಲ ಸಂಶೋಧಕರೆಂದುಕೊಂಡವರು ಭಾರತದಲ್ಲಿ ಜಾತಿಗಳೇ ಇಲ್ಲ ಎಂಬ ವಿತಂಡವಾದವನ್ನು ಮುಂದಿಟ್ಟಿದ್ದಾರೆ. ಇದು ಸುಳ್ಳು ಎಂದು ಹೇಳಲು ಈ ಕೆಳಕಾಣಿಸಿರುವ ವಚನದ ದೃಷ್ಟಾಂತ ಒಂದೇ ಸಾಕು.

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲುಗೆವಂತರಾಗಿ ಒಳಗೈದಾರೆ
ಆನುದೇವಾ ಹೊರಗಣವನು.
ಸಂಬೋಳಿ ಸಂಬೋಳಿ ಎನ್ನುತ್ತ ಇಂಬಿನಲ್ಲಿ ಇದೇನೆ.
ಕೂಡಲ ಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು.

ಎಂದು ಹೇಳುವಲ್ಲಿ ಜಾತೀಯತೆ, ಹೇಗೆ ಸ್ಫಟಿಕದಂತೆ ಇತ್ತು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಬಸವಣ್ಣನವರು ಬ್ರಾಹ್ಮಣ ಕುಲದಲ್ಲಿ ಜನಿಸಿದ ಕಾರಣಕ್ಕೆ ದೇವಾಲಯ ಪ್ರವೇಶಕ್ಕೆ ಅವಕಾಶವಿದ್ದರೂ, ಒಳಹೋಗದೆ ಅನಾಮಿಕ (ದಲಿತ)ರ ಜೊತೆ ಹೊರನಿಂತು, ಆನುದೇವಾ ಹೊರಗಿನವನು ಎಂದು ಘೋಷಣೆ ಕೂಗಿ ಹೇಳುತ್ತಾರೆ. ದೇವಾಲಯದ ಒಳಗಡೆ ಸಲುಗೆಯಿಂದ ಇರುವವರಿಗೆ, ಅಸ್ಪೃಶ್ಯರ ಜೊತೆನಿಂತು ಎಚ್ಚರ ಎಚ್ಚರ ಎಂದು ಹೇಳುತ್ತಾರೆ. ಸಾಮಾಜಿಕ ನ್ಯಾಯ ಎಂಬುದು ಮನುಧರ್ಮದ ನ್ಯಾಯಕ್ಕೆ ವಿರುದ್ಧವಾದುದು ಎಂಬುದನ್ನು ತೋರಿಸುತ್ತಾರೆ.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಎಂಟುನೂರು ವರ್ಷಗಳ ಹಿಂದೆ ಭಾರತೀಯ ಸಮಾಜದಲ್ಲಿ ಜಾತೀಯತೆ, ಅಸ್ಪೃಶ್ಯತೆ ಹೇಗೆ ಶೋಷಣೆಗೆ ಕಾರಣವಾಗಿತ್ತು ಎಂಬುದನ್ನು ಎತ್ತಿ ತೋರಿಸುತ್ತಾ ಬಸವಣ್ಣನವರ ತತ್ತ್ವಗಳಿಂದ ತಾವು ಹೇಗೆ ಪ್ರಭಾವಿತರಾಗಿದ್ದರು ಎಂಬುದನ್ನು ಅವರದೇ ಮಾತುಗಳಲ್ಲಿ "It has not been possible for me to practice all the precepts of Basaveshwara which he taught 800 years ago, and which he also practiced. I have adopted

a few of them. I am yet a seeker in this aspect and not an accomplished one. Eradication of untouchability and diginity of labour were among his core precepts. One does not find even shades of castism in him. Had he lived during our times, he would have been a saint worthy of worship. If you, his followers, practice his precepts, you could uplift not jut Bharat, but the world."

ಹೀಗೆ ಶರಣರು ಬಸವಣ್ಣನವರ ನೇತೃತ್ವದಲ್ಲಿ ಜಾತಿ ವ್ಯವಸ್ಥೆಗೆ ಸವಾಲಾಗಿದ್ದರು. ನಮ್ಮ ದಲಿತ ಕವಿ ಸತ್ಯಾನಂದ ಪಾತ್ರೋಟ ಶರಣರ ಬಗ್ಗೆ ಹೀಗೆ ಹೇಳುತ್ತಾರೆ.

ಶರಣರು :

ಮಠ ಕಟ್ಟಲಿಲ್ಲ, ಗುಡಿ ಕಟ್ಟಲಿಲ್ಲ
ಸಿರಿಗರ ಬಡಿದವರ ಎಚ್ಚರಿಸಿ
ಎಲ್ಲರ ಹುಟ್ಟಿನ ಮೂಲ – ಹೊಲೆತನ
ಎಂದುದ್ದರಿಸಿ
ಮನಸ್ಸುಗಳ ತಟ್ಟಿದರು
ಮನುಷ್ಯರನ್ನು ಪ್ರೀತಿಸಿದರು.

'ಭಾರತದಲ್ಲಿ ಜಾತಿಗಳೇ ಇಲ್ಲ' ಎಂಬ ಅಸತ್ಯವನ್ನು ಕೆಲ ಬುದ್ಧಿಜೀವಿಗಳು ವಿಪರೀತ ಸಂಶೋಧನೆಯ ಮೂಲಕ ಸತ್ಯವೆಂದು ಸಾಬೀತುಪಡಿಸಲು ಹೊರಟಿದ್ದು ಮೇಲ್ನೋಟಕ್ಕೆ ವಿಚಿತ್ರ ಎನಿಸುತ್ತದೆ. ಆದರೆ ವಾಸ್ತವದಲ್ಲಿ ಇದು ವಿಚಿತ್ರವಾದುದೇನಲ್ಲ. ದುಡಿಯುವ ವರ್ಗದ ದರ್ಶನವನ್ನೊಳಗೊಂಡು 'ಕಾಯಕಧರ್ಮ', 'ಶರಣಧರ್ಮ', 'ಬಸವಧರ್ಮ' ಎಂದು ಕರೆಯಲಾಗುವ ಲಿಂಗವಂತ ಧರ್ಮದ ಮೂಲೋತ್ಪಾಟನೆ ಮಾಡುವ ಬೃಹತ್ ಯೋಜನೆಯನ್ನು ಮನುವಾದಿಗಳು ಹಾಕಿಕೊಂಡಿದ್ದಾರೆ ಎಂಬುದು ಇಂಥ ಸಂಶೋಧನೆಯ ಹಿಂದಿರುವ ವಾಸ್ತವವಾಗಿದೆ.

'ಜಾತಿ ವ್ಯವಸ್ಥೆಗೆ ಸವಾಲಾದ ಶರಣರು' ಇಂಥ ಮನುವಾದಿ ಸಂಶೋಧನೆಯ ಹಿಂದಿನ ವಾಸ್ತವದ ಮೇಲೆ ಬೆಳಕು ಚೆಲ್ಲುವ ಪುಸ್ತಕವಾಗಿದೆ. 'ಹಿಂದು' ಎಂಬುದು ಒಂದು ಜೀವನ ವಿಧಾನ ಎಂದು ಸರ್ವೋಚ್ಚ ನ್ಯಾಯಾಲಯ ಕೆಲ ವರ್ಷಗಳ ಹಿಂದೆ ತೀರ್ಪು ನೀಡಿದೆ. ಈ ಹಿಂದು ಜೀವನವಿಧಾನವು ಮನುವಾದಿಗಳ ಜೀವನವಿಧಾನವೇ ಆಗಿದೆ. ಅಂದರೆ ಎಂದೆಂದೂ ಬದಲಾಗದ ಜಾತಿ, ವರ್ಣ ಮತ್ತು ಅಸ್ಪೃಶ್ಯತೆಯ ಜೀವನ ವಿಧಾನವಾಗಿದೆ. ಇದುವೇ 'ವೈದಿಕಹಿಂದು' ಜೀವನವಿಧಾನ. ಜನಿವಾರ ಧರಿಸುವ ಮೂರೂ ವರ್ಣಗಳಿಗೆ ಅನ್ವಯಿಸುವ ಜೀವನವಿಧಾನ. ಆದರೆ ಬಹುಸಂಖ್ಯಾತ ದುಡಿಯುವ ಜನರು ಶೂದ್ರ ವರ್ಣದವರು. ಅವರದು 'ಅವೈದಿಕಹಿಂದು' ಜೀವನವಿಧಾನವಾಗಿದೆ ಎಂಬುದು ಈ ಪುಸ್ತಕ ಓದಿದವರಿಗೆ ಅರಿವಾಗದೆ ಇರದು.

ಅವೈದಿಕ ಶೂದ್ರರೇ ಭಾರತದ ಕಾಯಕ ಜೀವಿಗಳು. ಕನ್ನಡದ ನೆಲದಲ್ಲಿ ಈ ಕಾಯಕಜೀವಿಗಳು ಬಸವಣ್ಣನವರ ಜೊತೆಯಲ್ಲಿದ್ದು ಮನುವಾದಿ ವೈದಿಕರ ಕ್ರೌರ್ಯದ

ಬಲೆಯಿಂದ ವಿಮೋಚನೆಗೊಂಡವರು. ಜಾತಿಸಂಕರಗೊಂಡು ಲಿಂಗವಂತರಾಗಿ ಸಮಾನತೆಯ ಬದುಕನ್ನು ಬದುಕಿದವರು. ಇಂದು ಬಹುಪಾಲು ಲಿಂಗಾಯತರು ಜಾತಿ ಉಪಜಾತಿಗಳೊಂದಿಗೆ ಜಾತಿವಾದಿ ಜೀವನವಿಧಾನವನ್ನು ಅನುಸರಿಸುತ್ತಿದ್ದಾರೆ. ಆದರೆ ಬಡ ಕಾಯಕಜೀವಿಗಳಾಗಿದ್ದ ಅವರ ಪೂರ್ವಜರು ಎಂಥ ಘನತೆಯ ಬದುಕನ್ನು ಬದುಕಿದ್ದರು ಎಂಬುದು ಗಮನಾರ್ಹವಾಗಿದೆ.

ಜಾತಿ ನಿರ್ಮೂಲನವೇ ಮುಖ್ಯ ಗುರಿಯಾಗಿದ್ದ ತಮ್ಮ 'ನಡೆ ನುಡಿ ಸಿದ್ಧಾಂತ'ವನ್ನು ಎತ್ತಿಹಿಡಿಯುವುದೇ ಕಾಯಕ ಜೀವಿಗಳ ಐತಿಹಾಸಿಕ ನಿರ್ಧಾರವಾಗಿತ್ತು. ಅದಕ್ಕಾಗಿ ಅವರು ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯನ್ನು ಮಾಡುವ ಧೈರ್ಯ ತೋರಿಸಿದರು. ಈ ಮದುವೆಯ ನೆಪವೊಡ್ಡಿ ಮನುವಾದಿಗಳು ತಮ್ಮ ಮೇಲೆ ಮಾರಣಾಂತಿಕ ಹಲ್ಲೆ ಮಾಡುವರು, ಇಡೀ ಶರಣ ಸಂಕುಲದ ವ್ಯವಸ್ಥೆಯನ್ನು ಹಾಳುಮಾಡುವರು ಮತ್ತು ತಮ್ಮ ವಚನ ಸಾಹಿತ್ಯವನ್ನು ಧ್ವಂಸಗೊಳಿಸುವರು ಎಂಬುದು ನಿಖರವಾಗಿ ಗೊತ್ತಿದ್ದೂ ಮದುವೆ ಮಾಡಿದರು! ಅವರಿಗೆ ಅದು ಬರಿ ಮದುವೆಯಾಗಿದ್ದಿಲ್ಲ; ತಮ್ಮ ಸಿದ್ಧಾಂತದ ಪ್ರಶ್ನೆಯಾಗಿತ್ತು. ಜಾತಿ ನಿರ್ಮೂಲನೆಗಾಗಿ ಎಲ್ಲ ತ್ಯಾಗ ಮಾಡಿದ ಇನ್ನೊಂದು ಸಮಾಜ ಭಾರತದಲ್ಲಿಲ್ಲ. 'ಭಾರತದಲ್ಲಿ ಜಾತಿಗಳು ಇವೆಯೆ?' ಎಂದು ಪ್ರಶ್ನಿಸುವವರು ಯಾವ ದುರುದ್ದೇಶ ಹೊಂದಿದ್ದಾರೆ ಎಂಬುದನ್ನು ದಲಿತರು, ಹಿಂದುಳಿದವರು ಮತ್ತು ಬಸವಣ್ಣನವರ ಅನುಯಾಯಿಗಳು ಎಂದುಕೊಳ್ಳುವವರು ಅರ್ಥಮಾಡಿಕೊಳ್ಳುವುದು ಈ ಕಾಲದ ಅವಶ್ಯಕತೆಯಾಗಿದೆ.

'ಜಾತಿ ವ್ಯವಸ್ಥೆಗೆ ಸವಾಲಾದ ಶರಣರು' ಈ ಕೃತಿಯಲ್ಲಿ ರಂಜಾನ್ ದರ್ಗಾ ಅವರು, ಶರಣರು ಹೇಗೆ ಪ್ರತಿಯೊಂದು ಘಟ್ಟದಲ್ಲೂ ಸವಾಲಾಗಿ ಎದುರಿಸಿದರು ಎನ್ನುವುದನ್ನು ಎಳೆ ಎಳೆಯಾಗಿ ಬಿಡಿಸಿ ಚರ್ಚಿಸಿದ್ದಾರೆ. ಈ ಕೃತಿಯನ್ನು ಪ್ರಕಟಿಸಲು ಅನುವುಮಾಡಿಕೊಟ್ಟಿದ್ದಕ್ಕಾಗಿ ರಂಜಾನ್ ದರ್ಗಾ ಅವರಿಗೆ ಪ್ರಕಾಶನ ಕೃತಜ್ಞವಾಗಿದೆ. ಈ ಕೃತಿ ನಮ್ಮ ತಂದೆ ತಾಯಿಯ ದತ್ತಿ ಅಡಿಯಲ್ಲಿ ಪ್ರಕಟವಾಗುತ್ತಿರುವ ಎಂಟನೇ ಕೃತಿ. ಈವರೆಗೆ ಪ್ರಕಟವಾದ ಏಳು ಕೃತಿಗಳನ್ನೂ ಕನ್ನಡದ ಓದುಗರು ತೆರೆದ ಮನದಿಂದ ಸ್ವೀಕರಿಸಿದ್ದಾರೆ. ಪುಸ್ತಕ ಒಂದು ಸಂಸ್ಕೃತಿಯೆಂದು ನಂಬಿ ಕಳೆದ ಎರಡು ದಶಕಗಳಿಂದ ಈ ಪರಿಚಾರಿಕೆಯನ್ನು ಮಾಡಿಕೊಂಡು ಬರುತ್ತಿರುವ ಪ್ರಕಾಶನಕ್ಕೆ ಇತ್ತೀಚಿನ ದಿನಮಾನಗಳು ಒಂದು ಸವಾಲಾಗಿ ಪರಿಣಮಿಸಿವೆ. ಏಕೆಂದರೆ ಸಂಸ್ಕೃತಿಯ ಜಾಗಕ್ಕೆ ಉದ್ಯಮ ಆವರಿಸಿಕೊಂಡು ತತ್ತರಿಸುವಂತೆ ಮಾಡಿದೆ. ಆದರೂ ಪ್ರಕಾಶನವು ತನ್ನ ಕೈಲಾದಷ್ಟು ಕೆಲಸವನ್ನು ನಿಸ್ಪೃಹ ಮನಸ್ಸಿನಿಂದ ಮುಂದುವರಿಸಿಕೊಂಡು ಹೋಗುತ್ತಿದೆ. ಇದಕ್ಕೆ ಸಂಸ್ಕೃತಿ ಪ್ರಿಯರೆಲ್ಲರ ಸಹಕಾರ, ಬೆಂಬಲ ಅಗತ್ಯ.

ಪ್ರಕಾಶನದ ಪರವಾಗಿ

ಸಿ. ಚನ್ನಬಸವಣ್ಣ

ಪರಿವಿಡಿ

A country where millions of people live on flowers of the Mohua plant, and a million or two of Sadhus and a hundred million or so of Brahmins suck the blood out of these poor people, without even the least effort for their amelioration - is that a country of hell? Is that a religion, or a devil's dance? (vol. VI. 254)

- Swami Vivekananda

Monks and Sannyasins and Brahmins of a certain type have thrown the country into ruin. Intent all the while on theft and wickedness, these pose as preachers of religion! They will take gifts from the people and at the same time cry, 'Don't touch me!' (Vol.VI. 318)

- Swami Vivekananda

I am no metaphysician, no philosopher, nay, no saint. But I am poor, I love the poor. (Volume V. 58)

- Swami Vivekananda

The only hope of India is from the masses. The upper classes are physically and morally dead. (V. 106)

- Swami Vivekananda

I am a socialist not because I think it is a perfect system, but half a loaf is better than no bread. (VI. 381)

- Swami Vivekananda

It is the heart, the heart that conquers, not the brain. Books and learning, Yoga and meditation and illumination - all are but dust compared with love. It is love that gives you the supernatural powers, love that gives you Bhakti, love that gives illumination, and love, again, that leads to emancipation. (VI. 400)

- Swami Vivekananda

ಶರಣರ ಜಾತ್ಯತೀತ ನಿಲವು

ಜಾತಿವ್ಯವಸ್ಥೆಯಿಂದಾಗಿ ಭಾರತೀಯ ಸಮಾಜ ಶತಶತಮಾನಗಳಿಂದಲೂ ನರಳುತ್ತಲೇ ಮುಂದುವರಿದಿದೆ. ಜಾತಿ ಮತ್ತು ಉಪ ಜಾತಿಗಳು ಮಾನವನ ಸಾಮಾಜಿಕ ಬೆಳವಣಿಗೆಯನ್ನು ಕುಬ್ಜಗೊಳಿಸಿವೆ. ಸಾಮಾಜಿಕ ಐಕ್ಯಕ್ಕೆ ಸವಾಲೊಡ್ಡಿವೆ. 2600 ವರ್ಷಗಳ ಹಿಂದೆ ಭಗವಾನ ಬುದ್ಧ ಜಾತ್ಯತೀತ ಧರ್ಮಮಾರ್ಗವನ್ನು ಕಂಡುಹಿಡಿದ. ವರ್ಣವ್ಯವಸ್ಥೆಯಿಂದಾಗಿ ತುಳಿತಕ್ಕೊಳಗಾದ ಜನ ಮೊದಲಬಾರಿಗೆ ಸಾಮಾಜಿಕ ಸ್ವಾತಂತ್ರ್ಯವನ್ನು ಉಸಿರಾಡಿದರು. ಆದರೆ ವರ್ಣವ್ಯವಸ್ಥೆಯನ್ನು ಪ್ರತಿಪಾದಿಸುವ ಮನುವಾದಿಗಳಿಂದಾಗಿ ಬೌದ್ಧಧರ್ಮ ದೇಶದಲ್ಲೇ ಪರಕೀಯವಾಗುವಂಥ ಪರಿಸ್ಥಿತಿ ಉಂಟಾಯಿತು.

12 ಶತಮಾನದ ವೇಳೆಗೆ ಭಾರತದಲ್ಲಿ ಬೌದ್ಧಧರ್ಮ ದುರ್ಬಲ ಸ್ಥಿತಿಯನ್ನು ತಲುಪಿತು. ಜೈನಧರ್ಮ ಕೂಡ ದುರ್ಬಲವಾಗಿತ್ತು. ಶೈವಧರ್ಮದಲ್ಲಿ ಸ್ವಯಂ ಹಿಂಸಾಭಕ್ತಿ ವಿಜೃಂಭಿಸುತ್ತಿತ್ತು. ದೈವಗಳಿಗೆ ಪಶುಬಲಿ, ನರಬಲಿ ಮತ್ತು ಆತ್ಮಸಮರ್ಪಣೆಯಂಥ ಹಿಂಸಾತ್ಮಕ ಆರಾಧನಾ ವಿಧಾನಗಳು ಹೆಚ್ಚಾಗಿದ್ದವು. ಜನ ದುಡಿದದ್ದನ್ನೆಲ್ಲ ದೈವಗಳ ಸಂಪ್ರೀತಿಗಾಗಿ ವಿನಿಯೋಗಿಸುವಂಥ ದುಸ್ಥಿತಿ ಬಂದೊದಗಿತ್ತು. ಜಾತಿಯ ಕೀಳರಿಮೆ, ಅಸ್ಪೃಶ್ಯತೆ, ಹಿಂಸಾಭಕ್ತಿ ಮತ್ತು ರಾಜನ ಅಸಹನೀಯ ತೆರಿಗೆ ಮುಂತಾದವುಗಳಿಂದ ಕಾಯಕಜೀವಿಗಳ ಬದುಕು ಜರ್ಜರಿತವಾಗಿತ್ತು.

ಇಂಥ ಅಲ್ಲೋಲಕಲ್ಲೋಲ ವಾತಾವರಣವಿದ್ದಾಗ ಕ್ರಿಸ್ತಶಕ 1134ರಲ್ಲಿ ಬಸವಣ್ಣನವರ ಜನನವಾಯಿತು. ಬಸವಣ್ಣನವರು ಬಾಗೇವಾಡಿ ಅಗ್ರಹಾರದ ಮುಖ್ಯಸ್ಥರಾಗಿದ್ದ ಆಗಮಿಕ ಶೈವಬ್ರಾಹ್ಮಣ ಮಾದರಸ ಮತ್ತು ಮಾದಲಾಂಬಿಕೆ ಮಗನಾಗಿ ಜನಿಸಿದರು. ಸಕಲ ವೇದ ಶಾಸ್ತ್ರ ಪುರಾಣ ಆಗಮಗಳನ್ನು ಅಭ್ಯಸಿಸಿ ಬ್ರಾಹ್ಮಣ್ಯದ ಗುಣದೋಷಗಳನ್ನು ಅರಿತುಕೊಂಡರು. ಬಸವಕಲ್ಯಾಣದಲ್ಲಿ ಬಿಜ್ಜಳನ ಅರ್ಥಸಚಿವರಾಗಿ ವೈಶ್ಯ ವರ್ಣದ ಗುಣದೋಷಗಳನ್ನು ಕಂಡುಹಿಡಿದರು. ಪ್ರಧಾನಿಯಾಗಿ ಕ್ಷತ್ರಿಯ ವರ್ಣದ ಶಕ್ತಿ ಮತ್ತು ದೌರ್ಬಲ್ಯಗಳ ಕುರಿತು ಚಿಂತಿಸಿದರು. ಬಹುಪಾಲು ಶೂದ್ರರು ಮತ್ತು ಅತಿಶೂದ್ರರಾದ ದಲಿತರು ಈ ಮೂರು ವರ್ಣಗಳ ಹಿಡಿತದಿಂದಾಗಿ ಎಂದೆಂದೂ ಮೇಲೇಳದ ಸ್ಥಿತಿ

ತಲುಪಿದ್ದರು. ಈ ಜನ ಎಲ್ಲ ವಿಧದ ಕಾಯಕಜೀವಿಗಳಾಗಿದ್ದರು. ಇವರ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದ ಕಾರಣ ಬಡವರಾಗೇ ಉಳಿದಿದ್ದರು. ಶ್ರೇಷ್ಠ ಅರ್ಥಶಾಸ್ತ್ರಜ್ಞರೂ ಮತ್ತು ಆಡಳಿತಗಾರರೂ ಆಗಿದ್ದ ಬಸವಣ್ಣನವರು ಈ ಕುರಿತು ಆಳವಾಗಿ ಚಿಂತಿಸಿದರು. ಮೂರೂ ವರ್ಣಗಳ ಜನರಿಂದ ಮತ್ತು ಅಸಂಖ್ಯಾತ ದೈವಗಳಿಂದ ಕಾಯಕಜೀವಿಗಳನ್ನು ಬಿಡುಗಡೆಗೊಳಿಸುವಂಥ ಜಾತ್ಯತೀತ ಅರ್ಥವ್ಯವಸ್ಥೆಯೊಂದನ್ನು ರೂಪಿಸಿದರು. ಇದು ವರ್ಣಪದ್ಧತಿಯ ಅರ್ಥವ್ಯವಸ್ಥೆಗೆ ತದ್ವಿರುದ್ಧವಾಗಿತ್ತು. ವರ್ಣಪದ್ಧತಿಯ ಅರ್ಥವ್ಯವಸ್ಥೆಯಲ್ಲಿ ಉತ್ಪಾದನಾ ಶಕ್ತಿಗಳಾದ ಕಾಯಕಜೀವಿಗಳು ಕನಿಷ್ಠ ಸೌಲಭ್ಯಗಳೊಂದಿಗೆ ಮಾತ್ರ ಬದುಕುವ ಸ್ಥಿತಿಯಲ್ಲಿದ್ದರು. ಶೂದ್ರವರ್ಣದ ದುಡಿಯುವ ವರ್ಗ ಎಲ್ಲವನ್ನು ಉತ್ಪಾದಿಸಿದರೂ ಸೌಲಭ್ಯಗಳಿಂದ ವಂಚಿತವಾಗಿತ್ತು. ಆದರೆ ಉತ್ಪಾದನೆಯನ್ನೇ ಮಾಡದ ಇತರ ವರ್ಣಗಳವರು ಸಕಲ ಸೌಲಭ್ಯಗಳನ್ನು ಪಡೆಯುವಂಥವರಾಗಿದ್ದರು. ಈ ಅಸಮಾನತೆಯ ವಿರುದ್ಧ ಬಸವಣ್ಣನವರು ಚಿಂತಿಸಿದರು. ಕಾಯಕಜೀವಿಗಳ ಹಿತ ಕಾಪಾಡಬೇಕಾದರೆ ಅವರು ಜಾತ್ಯತೀತರಾಗಬೇಕು. ಜಾತಿ, ವರ್ಣ ಮತ್ತು ಕುಲಪ್ರಜ್ಞೆಯಿಂದ ಮುಕ್ತರಾಗಬೇಕು. ಜಾತಿಗುಂಪುಗಳು ನಶಿಸಿ ಎಲ್ಲ ಕಾಯಕಜೀವಿಗಳು ಒಂದಾಗಿ ಶರಣಸಂಕುಲ ನಿರ್ಮಾಣವಾಗಬೇಕು ಎಂಬುದು ಬಸವಣ್ಣನವರ ಆಶಯವಾಗಿತ್ತು. 'ಜಾತಿ ಸಂಕರವಾದ ಬಳಿಕ ಕುಲವನರಸುವರೆ' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಹೀಗೆ ಜಾತಿ ನಿರ್ನಾಮ ಮಾಡಿ ಹೊಸ ಮಾನವನ ನಿರ್ಮಾಣ ಮಾಡುವುದು ಬಸವಣ್ಣನವರ ಉದ್ದೇಶವಾಗಿತ್ತು. ಆ ಹೊಸ ಮಾನವನೇ ಶರಣ.

ಜಾತ್ಯತೀತ ಮನೋಭಾವವು ಸಮಾಜದ ಸ್ಥಾಯಿಭಾವವಾಗಬೇಕು. ಅಂದಾಗ ಮಾತ್ರ ಎಲ್ಲ ಜನರ ನೋವಿಗೆ ಸ್ಪಂದಿಸುವಂಥ ವ್ಯವಸ್ಥೆ ನಿರ್ಮಾಣವಾಗಲು ಸಾಧ್ಯ. ಬಸವಣ್ಣನವರ ಶರಣ ಸಂಕುಲದಲ್ಲಿ ನೂರೆಂಟು ರೀತಿಯ ಕಾಯಕ ಮಾಡುವ ಶರಣರಿದ್ದರು. ಈ ಕಾಯಕಗಳಿಗೂ ಜಾತಿಗೂ ಸಂಬಂಧವನ್ನು ಕಲ್ಪಿಸಲಾಗಿದೆ. ಬಸವಣ್ಣನವರು ಈ ಸಂಬಂಧವನ್ನು ಬಿಡಿಸಿ ಜಾತಿಯನ್ನು ವಿನಾಶಗೊಳಿಸಿ ಕಾಯಕಗಳನ್ನು ಮಾತ್ರ ಉಳಿಸಿಕೊಂಡರು. ಬಸವಣ್ಣನವರ ಪ್ರಕಾರ ಸಮಗಾರ ಹರಳಯ್ಯ ಎಂದರೆ ಸಮಗಾರ ಜಾತಿಯ ಹರಳಯ್ಯ ಅಲ್ಲ; ಪಾದರಕ್ಷೆಗಳನ್ನು ಹೊಲಿಯುವ ಕಾಯಕದ ಹರಳಯ್ಯ. ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ ಮುಂತಾದ ಶರಣರನ್ನು ಹೀಗೆಯೆ ಅರ್ಥ ಮಾಡಿಕೊಳ್ಳಬೇಕು ಎಂಬುದು ಬಸವಣ್ಣನವರ ಆಶಯವಾಗಿತ್ತು.

ಕಾಯಕಜೀವಿಗಳು ಹೀಗೆ ತಮ್ಮ ಜಾತಿಗಳನ್ನು ತೊರೆದು ಶರಣಸಂಕುಲವಾಗಿ ಒಂದಾದರು. ಜಾತ್ಯತೀತವಾದರು. ಇಂಥ ಅಸಂಖ್ಯಾತ ಶರಣರಿಗಾಗಿ ಬಸವಣ್ಣನವರು ರೂಪಿಸಿದ ಅರ್ಥವ್ಯವಸ್ಥೆ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದ ಮೇಲೆ ನಿಂತಿದೆ. ಕಾಯಕವು ಯೋಗ್ಯ ಉತ್ಪಾದನೆಯ ಕುರಿತು ತಿಳಿಸುತ್ತದೆ. ಮಾನವ ಬದುಕಿಗೆ

ಅಯೋಗ್ಯವಾದುದನ್ನು ಮಾಡುವುದು ಕಾಯಕವಾಗುವುದಿಲ್ಲ. ಕಾಯಕದಿಂದ ಬಂದುದನ್ನು ದೇವರ ಕಾಣಿಕೆಯಾಗಿ ಸ್ವೀಕರಿಸುವುದೇ ಪ್ರಸಾದ ಪ್ರಜ್ಞೆ. ಇಂಥ ಪ್ರಜ್ಞೆಯಿದ್ದಾಗ ಮಾನವ ಅಹಂಕಾರದಿಂದ ಮುಕ್ತನಾಗುವನು ಮತ್ತು ಕಾಯಕದಿಂದ ಬಂದುದನ್ನು ಯೋಗ್ಯರೀತಿಯಲ್ಲಿ ಬಳಸಿಕೊಳ್ಳುವನು. ಉಳಿದುದನ್ನು ಲೋಕಕಲ್ಯಾಣಕ್ಕಾಗಿ ದಾಸೋಹ ಭಾವದೊಂದಿಗೆ ವಿನಿಯೋಗಿಸುವನು.

ಈ ವ್ಯವಸ್ಥೆಯಿಂದಾಗಿ ಮೇಲ್ವರ್ಗದವರು ಐಷಾರಾಮಿ ಬದುಕಿನಿಂದ ವಂಚಿತರಾಗುವಂತಾಯಿತು. ಕೆಳವರ್ಗದವರು ಮೇಲ್ವರ್ಗದವರ ಮೇಲೆ ಅವಲಂಬಿತವಾಗುವಂಥ ಅರ್ಥವ್ಯವಸ್ಥೆ ನಿರ್ನಾಮವಾಯಿತು.

ಇಂಥ ಜಾತ್ಯತೀತ ಅರ್ಥವ್ಯವಸ್ಥೆಯಲ್ಲಿ ಎಲ್ಲರೂ ಸಮಾನವಾಗಿರುತ್ತಾರೆ. ಇಲ್ಲಿ ಯಾರೂ ಹಸಿವಿನಿಂದ ಬಳಲುವುದಿಲ್ಲ. ಯಾರೂ ಅಪಮಾನಕ್ಕೆ ಒಳಗಾಗುವುದಿಲ್ಲ. ಮೇಲು ಕೀಳು ಎಂಬುದೇ ಇಲ್ಲ.

ಪಟ್ಟಭದ್ರ ಹಿತಾಸಕ್ತಿಗಳು ಈ ಬದಲಾವಣೆಯನ್ನು ಸಹಿಸಲಿಲ್ಲ. ಹರಳಯ್ಯ ಮಧುವರಸರ ಮಕ್ಕಳ ಮದುವೆ ನೆಪ ಮಾಡಿಕೊಂಡು ಕಲ್ಯಾಣದಲ್ಲಿ ಹತ್ಯಾಕಾಂಡ ನಡೆಸಿದವು. ಸಹಸ್ರಾರು ಶರಣರ ಕೊಲೆಯಾಯಿತು. ಲಕ್ಷಾಂತರ ಶರಣರು ದಿಕ್ಕಾಪಾಲಾದರು. 'ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ' ಎಂದು ನೊಂದುಕೊಂಡ ಬಸವಣ್ಣನವರು 1196ರಲ್ಲಿ ಲಿಂಗೈಕ್ಯರಾದರು. ಅತ್ಯುತ್ತಮ ಶರಣ ಸಮಾಜವೊಂದು ಕೆಲವೇ ವರ್ಷಗಳಲ್ಲಿ ಅದ್ಭುತವಾದುದನ್ನು ಸಾಧಿಸಿ ಮರೆಯಾಯಿತು. ಇಂದು ಮತ್ತೆ ಅಂಥ ಜಾತ್ಯತೀತ ಮತ್ತು ಸರ್ವರೀತಿಯ ಸಮಾನತೆಯ ಸಮಾಜಕ್ಕಾಗಿ ಯತ್ನಿಸಬೇಕಿದೆ.

○

ಅರಿದಡೆ ಶರಣ, ಮರೆದಡೆ ಮಾನವ

ಉಂಬ ಬಟ್ಟಲು ಬೇರೆ ಕಂಚಲ್ಲ, ನೋಡುವ ದರ್ಪಣ ಬೇರೆ ಕಂಚಲ್ಲ,
ಭಾಂಡ ಒಂದೆ ಭಾಜನ ಒಂದೆ, ಬೆಳಗೆ ಕನ್ನಡಿ ಎನಿಸಿತ್ತಯ್ಯಾ.
ಅರಿದಡೆ ಶರಣ, ಮರೆದಡೆ ಮಾನವ,
ಮರೆಯದೆ ಪೂಜಿಸು ಕೂಡಲಸಂಗನ.

– ಬಸವಣ್ಣ

ಮನ್ ಎಂದರೆ 'ವಿಚಾರ ಮಾಡು' ಎಂದು ಅರ್ಥ. ವಿಚಾರ ಮಾಡುವ ಶಕ್ತಿಯುಳ್ಳವನು ಮಾನವನಾಗುತ್ತಾನೆ. ವಿಚಾರಗಳ ಉತ್ಪತ್ತಿಗೆ ಪ್ರಜ್ಞೆ ಮೂಲವಾಗಿರುತ್ತದೆ. ಪ್ರಜ್ಞೆಗೆ ವಸ್ತು ಮೂಲವಾಗಿರುತ್ತದೆ. ವಸ್ತು ಎಂದರೆ ಇಡೀ ವಿಶ್ವಕಣ್ಣಿಗೆ ಕಾಣುವಂಥವುಗಳೆಲ್ಲ ವಸ್ತುಗಳೇ. ನಕ್ಷತ್ರ, ಸೂರ್ಯ, ಚಂದ್ರ, ಸಮುದ್ರ, ಅರಣ್ಯ, ಪಶು, ಪಕ್ಷಿ ಮತ್ತು ಮಾನವರು ಹೀಗೆ ಕಣ್ಣಿಗೆ ಕಾಣುವ ಎಲ್ಲವೂ ಮತ್ತುಎಲ್ಲರೂ ನಿಜವಾದ ಅರ್ಥದಲ್ಲಿ ವಸ್ತುರೂಪದಲ್ಲೇ ಇದ್ದೇವೆ. ವಸ್ತುವಿನಿಂದ ಪ್ರಜ್ಞೆಯು ರೂಪ ತಾಳುತ್ತದೆ. ಆ ಪ್ರಜ್ಞೆಯು ವಿಶ್ವದ ಎಲ್ಲ ವಸ್ತುಗಳನ್ನು ಅವರವರ ಅನುಭವಕ್ಕೆ ತಕ್ಕಂತೆ ಅವರ ಮನದಲ್ಲಿ ಮೂಡಿಸುತ್ತದೆ.

ಹೀಗೆ ಪ್ರಜ್ಞೆಯು ವಸ್ತುಗಳನ್ನು ಗ್ರಹಿಸುವ ಶಕ್ತಿಯಾಗಿದೆ. ಪ್ರಜ್ಞೆಯ ಅಸ್ತಿತ್ವಕ್ಕೆ ವಸ್ತು ಇರಲೇ ಬೇಕು .ವಸ್ತು ಇಲ್ಲದೆ ಮಾನವ ಕಲ್ಪಿಸಲಾರ. ನಿಜವಾದ ಅರ್ಥದಲ್ಲಿ ಕಲ್ಪನೆ ಎಂಬುದು ವಸ್ತು ಅಥವಾ ವಸ್ತುಗಳ ಸಹಾಯದಿಂದಲೇ ಮೂಡುವಂಥದ್ದು. ಸ್ಫಿಂಕ್ಸ್ ಕೆತ್ತಿದ ಶಿಲ್ಪಿ ಸಿಂಹವನ್ನು ಮತ್ತು ಹೆಣ್ಣನ್ನು ನೋಡಿದವನಾಗಿರುತ್ತಾನೆ. ಕರಿಯ ಬಣ್ಣ ಮತ್ತು ಹುಲಿಯ ಹಿನ್ನೆಲೆಯೊಂದಿಗೇನೆ ಕಲಾವಿದ ಕರಿ ಹುಲಿಯ ಚಿತ್ರವನ್ನು ಬಿಡಿಸಿರುತ್ತಾನೆ. ಹೆಣ್ಣು ಮತ್ತು ಮತ್ಸ್ಯದ ವಾಸ್ತವದ ಹಿನ್ನೆಲೆ ಇಲ್ಲದೆ ಮತ್ಸ್ಯ ಕನ್ಯೆ ಮೂಡಿ ಬರಲಾರಳು. ತೆಂಗಿನ ಮರವಿಲ್ಲದೆ ಕಲ್ಪವೃಕ್ಷವಿಲ್ಲ. ಗೋವು ಇಲ್ಲದೆ ಕಾಮಧೇನು ಇಲ್ಲ. ಆನೆ ಇಲ್ಲದೆ ಐರಾವತ ಇಲ್ಲ. ಹೀಗೆ ಮಾನವನ ಕಲ್ಪನೆಯ ಹಿಂದೆ ವಸ್ತುಗಳು ಅಡಕವಾಗಿವೆ.

"ಭಿತ್ತಿ ಇಲ್ಲದೆ ಬರೆಯಬಹುದೆ ಚಿತ್ತಾರವ?" ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ಭಿತ್ತಿಯಂಥ ಭೌತಿಕ ವಸ್ತುಗಳ ಸಹಾಯವಿಲ್ಲದೆ ಚಿತ್ರಗಳನ್ನು ಬಿಡಿಸಲಿಕ್ಕಾಗದು. ಭಿತ್ತಿಯು ಭೌತಿಕವಾದದ ಪ್ರತೀಕವಾದರೆ, ಚಿತ್ತಾರವು ಅನುಭಾವದ ಪ್ರತೀಕವಾಗಿದೆ. ಭಿತ್ತಿ ಇಲ್ಲದೆ ಚಿತ್ತಾರವಿಲ್ಲ. ಹಾಗೆಯೆ ಅನುಭವವಿಲ್ಲದೆ ಅನುಭಾವವಿಲ್ಲ. ವಸ್ತುವಿನ ಜೊತೆಗಿನ ಅನುಭವದ ಮೂಲಕ ಬರುವ ಪ್ರಜ್ಞೆಯು ಭೌತಿಕವಾದಕ್ಕೆ ಪುಷ್ಟಿ ಕೊಡುತ್ತದೆ. ಅನುಭವದ ಮೂಲಕ ಅನುಭಾವದ ಸೃಷ್ಟಿಯಾದಾಗ ಅರಿವು ಮೂಡುತ್ತದೆ. ಹೀಗೆ ಪ್ರಜ್ಞೆ ಎಂಬುದು ವಸ್ತುವಿನ ಗ್ರಹಿಕೆಯ ಮೂಲಕ ಬಂದರೆ, ಅರಿವು ಎಂಬುದು ವಸ್ತುವಿನ ಮೂಲ ಗ್ರಹಿಕೆಯ ಮೂಲಕ ಬರುವುದು. ಈ ಸತ್ಯವನ್ನು ಅರಿತವನೇ ಶರಣ. ಮರೆತವನೇ ಮಾನವ. ಅಂದರೆ ಗ್ರಹಿಕೆಯು ಸಾಮಾನ್ಯ ಮಾನವನ ಗುಣವಾಗಿದೆ. ವಸ್ತುವಿನ ಮೂಲಕ ಸೃಷ್ಟಿಯಾಗುವ ಪ್ರಜ್ಞೆಯೊಂದಿಗೆ ಭೌತಿಕ ಜೀವನ ಸಾಗುವುದರಲ್ಲಿ ಸಂಶಯವಿಲ್ಲ. ಪ್ರತಿಯೊಬ್ಬ ಮಾನವನು ಸಹಜವಾಗಿಯೆ ಇಂಥ ಪ್ರಜ್ಞೆಯಿಂದ ಬದುಕುತ್ತಾನೆ. ಆದರೆ ನೋಟದಿಂದ ಪ್ರಜ್ಞೆ ಪಡೆಯುವ ಶರಣ ಒಳನೋಟದಿಂದ ಅರಿವು ಪಡೆಯುತ್ತಾನೆ. ಹೀಗೆ ಒಳನೋಟವನ್ನು ಮರೆತವನು ಮಾನವನಾಗಿರುತ್ತಾನೆ. ಆದರೆ ಒಳನೋಟವನ್ನು ಅರಿತವನೇ ಶರಣನಾಗಿರುತ್ತಾನೆ ಎಂಬುದನ್ನು ಬಸವಣ್ಣನವರು ಮಾರ್ಮಿಕವಾಗಿ ಹೇಳಿದ್ದಾರೆ.

ವಸ್ತು ಮತ್ತು ಮೂಲವಸ್ತುವಾದ ಚೈತನ್ಯ ಬೇರೆ ಬೇರೆ ಅಲ್ಲ. ಮ್ಯಾಟರ್ ಮತ್ತು ಎನರ್ಜಿ ಬೇರೆ ಬೇರೆ ಅಲ್ಲ ಎಂಬುದು ಇದರ ಅರ್ಥ. ವಿಜ್ಞಾನದ ಎನರ್ಜಿ ತತ್ತ್ವಜ್ಞಾನದಲ್ಲಿ ಸ್ಪಿರಿಟ್ ಎನಸಿಕೊಳ್ಳುತ್ತದೆ. ಮ್ಯಾಟರ್ ಎಂಬುದು ವಸ್ತುವಾದರೆ ಮೂಲವಸ್ತು ಎಂಬುದೇ ಎನರ್ಜಿ ಅಥವಾ ಸ್ಪಿರಿಟ್. ಮೂಲವಸ್ತುವಾದ ಚೈತನ್ಯದಿಂದಲೇ ವಸ್ತುವಿನ ನಿರ್ಮಾಣವಾಗಿದೆ ಎಂಬದರ ಕುರಿತು ಬಸವಣ್ಣನವರು ತಿಳಿಸಿದ್ದಾರೆ. ಇದನ್ನು ಅರಿತವನೇ ಶರಣನಾಗುತ್ತಾನೆ. ಈ ಜ್ಞಾನವಿಲ್ಲದವನು ಬರಿ ಮಾನವನಾಗಿ ಭೌತಿಕ ವಸ್ತುಗಳ ಜೊತೆಗೆ ಜೀವನ ಸಾಗಿಸುತ್ತಾನೆ.

"ಉಂಬ ಬಟ್ಟಲು ಬೇರೆಕಂಚಲ್ಲ, ನೋಡುವ ದರ್ಪಣ ಬೇರೆಕಂಚಲ್ಲ, ಭಾಂಡ ಒಂದೆ ಭಾಜನ ಒಂದೆ, ಬೆಳಗೆ ಕನ್ನಡಿ ಎನಿಸಿತ್ತಯ್ಯಾ." ಎಂದು ಬಸವಣ್ಣನವರು ತಿಳಿಸಿದ್ದಾರೆ. ಉಣ್ಣುವ ಗಂಗಾಳವನ್ನು ಕಂಚಿನಿಂದ ಮಾಡುತ್ತಾರೆ. ಆ ಕಾಲದಲ್ಲಿ ಮುಖ ನೋಡಿಕೊಳ್ಳುವ ಕನ್ನಡಿಯನ್ನು ಕೂಡ ಕಂಚಿನಿಂದಲೇ ತಯಾರಿಸುತ್ತಿದ್ದರು. ಹೀಗೆ ಉಣ್ಣುವ ಗಂಗಾಳ ಮತ್ತು ಮುಖ ನೋಡಿಕೊಳ್ಳುವ ಕನ್ನಡಿ ಬೇರೆ ಬೇರೆ ವಸ್ತುಗಳಾದರೆ. ಮೂಲ ವಸ್ತುವಾದ ಕಂಚು ಒಂದೇ ಆಗಿದೆ. ಅಡುಗೆ ಮಾಡುವ ಪಾತ್ರೆಯನ್ನು ಕಂಚಿನಿಂದಲೇ ತಯಾರಿಸುತ್ತಾರೆ. ಅದೇ ರೀತಿ ಊಟದ ಗಂಗಾಳವನ್ನು ಕೂಡ ಕಂಚಿನಿಂದಲೇ ತಯಾರಿಸುತ್ತಾರೆ. ಅದೇ ಕಂಚಿನ ತುಕಡಿಯನ್ನು ತಿಕ್ಕಿತಿಕ್ಕಿ ನುಣುಪುಗೊಳಿಸಿ ಕನ್ನಡಿ ತಯಾರಿಸುತ್ತಾರೆ. ಹೀಗೆ ಮೂಲವಸ್ತುವಾದ ಕಂಚು ವಿವಿಧ ರೀತಿಯ ರೂಪು ಪಡೆಯುವುದರ ಮೂಲಕ ಅಡುಗೆ ಪಾತ್ರೆ, ಊಟದ ಗಂಗಾಳ ಮತ್ತು ಮುಖ ನೋಡಿಕೊಳ್ಳುವ ಕನ್ನಡಿಯಾಗುತ್ತದೆ.

ಈ ರೀತಿ ಜಗತ್ತು ರೂಪುಗೊಳ್ಳುವ ಕ್ರಮವನ್ನು ಬಸವಣ್ಣನವರು ಅರುಹಿದ್ದಾರೆ. ಬಸವಣ್ಣನವರ ಸಿದ್ಧಾಂತ ಬಯಲು ಸಿದ್ಧಾಂತವಾಗಿದೆ. ಬಯಲಿನಿಂದ ಸೃಷ್ಟಿಯಾದುದು ಬಯಲಲ್ಲೇ ಲಯವಾಗುತ್ತದೆ. ಬಯಲುಎಂಬುದೇ ಮೂಲವಸ್ತು. ಈ ಬಯಲನ್ನು ಶೂನ್ಯ ಅಥವಾ ಚೈತನ್ಯ ಎಂದೂ ಕರೆಯುತ್ತಾರೆ. ಇದುವೆ ಸ್ಪಿರಿಟ್ ಅಥವಾ ಎನರ್ಜಿ. ಈ ಮೂಲವಸ್ತುವಿನಿಂದಲೇ ನಕ್ಷತ್ರಗಳು, ಸೂರ್ಯ, ಚಂದ್ರ, ಪೃಥ್ವಿ ಮುಂತಾದ ಆಕಾಶಕಾಯಗಳ ನಿರ್ಮಾಣವಾಗಿದೆ. ಮಾನವರು, ಪ್ರಾಣಿ, ಪಕ್ಷಿ, ಕ್ರಿಮಿ, ಕೀಟ, ಗಿಡಮರ ಬಳ್ಳಿಗಳು, ನದಿ ಮತ್ತು ಸಮುದ್ರಗಳು ಹೀಗೆ ಪೃಥ್ವಿಯಲ್ಲಿ ಕಾಣುವುದೆಲ್ಲವೂ ಪೃಥ್ವಿಯಿಂದಲೇ ಜನ್ಮ ತಾಳಿದ್ದಾಗಿರುತ್ತವೆ. ಆದರೆ ಪೃಥ್ವಿ ಸಮೇತ ಇಡೀ ವಿಶ್ವವು ಬಯಲೆಂಬ ಚೈತನ್ಯದಿಂದ ಸೃಷ್ಟಿಯಾಗಿದೆ. ಸೂರ್ಯ, ಚಂದ್ರ ತಾರೆಗಳ ಸಮೇತ ಕಾಣುವುದೆಲ್ಲವೂ ಒಂದಿಲ್ಲ ಒಂದು ದಿನ ಲಯವಾಗಿ ಮೂಲ ವಸ್ತುವಾದ ಚೈತನ್ಯದಲ್ಲಿ ಒಂದಾಗಲೇ ಬೇಕು. ಇದನ್ನು ಅರಿತವನೇ ಶರಣ. ಮರೆತವನೇ ಮಾನವ. ಆದ್ದರಿಂದಲೇ 'ಮರೆಯದೆ ಪೂಜಿಸು ಕೂಡಲಸಂಗನ' ಎಂದು ಬಸವಣ್ಣನವರು ಹೇಳಿದ್ದಾರೆ. ಬಸವಣ್ಣನವರ ಪೂಜೆಯು ಮೂಲವಸ್ತುವನ್ನು ಅರಿತುಕೊಳ್ಳುವ ಕ್ರಮವಾಗಿದೆ.

ಬಯಲ ರೂಪ ಮಾಡಬಲ್ಲಾತನೆ ಶರಣನು;
ಆ ರೂಪ ಬಯಲು ಮಾಡಬಲ್ಲಾತನೆ ಲಿಂಗಾನುಭಾವಿ.
ಬಯಲ ರೂಪ ಮಾಡಲರಿಯದಿದ್ದಡೆ ಎಂತು ಶರಣನೆಂಬೆ?
ಆ ರೂಪ ಬಯಲ ಮಾಡಲರಿಯದಿದ್ದಡೆ ಎಂತು ಲಿಂಗಾನುಭಾವಿ ಎಂಬೆ?
ಈ ಉಭಯ ಒಂದಾದಡೆ ನಿಮ್ಮಲ್ಲಿ ತೆರಹುಂಟೆ
ಕೂಡಲಸಂಗಮದೇವಾ.

– ಬಸವಣ್ಣ

ಎಂದು ಬಸವಣ್ಣನವರು ಹೇಳುವಲ್ಲಿ ಈ ಅರಿವಿನ ವಿರಾಟ ಸ್ವರೂಪವನ್ನು ತೋರಿಸಿಕೊಟ್ಟಿದ್ದಾರೆ. ಚೈತನ್ಯದಿಂದ ವಸ್ತುವಾಗಿರುವುದನ್ನು ಅರಿತವನೇ ಶರಣ. ಆ ವಸ್ತು ಲಯವಾಗಿ ಮತ್ತೆಚೈತನ್ಯವಾಗುತ್ತದೆ ಎಂಬುದನ್ನು ಅರಿತವನೇ ಲಿಂಗತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡ ಲಿಂಗಾನುಭಾವಿ. ಚೈತನ್ಯವನ್ನು ವಸ್ತುರೂಪದಲ್ಲಿ ಕಂಡುಕೊಂಡು ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವಾತನೇ ಶರಣ. ಶಿವ ಎಂಬುದೇ ಚೈತನ್ಯ. ಆ ಚೈತನ್ಯದಿಂದ ರೂಪ ತಳೆದ ಸಕಲ ಜೀವಾತ್ಮರು ಶಿವಸ್ವರೂಪಿಗಳೇ ಆಗಿದ್ದಾರೆ. ಆದ್ದರಿಂದ ಲೋಕದಲ್ಲಿ ಸರ್ವಸಮತ್ವವನ್ನು ಅರಿತವನು ಶರಣ ಎಂದು ಕರೆಯಿಸಿಕೊಳ್ಳುವನು. ಆತ ಹೀಗೆ ಬದುಕನ್ನು ಅರ್ಥೈಸಿಕೊಳ್ಳದಿದ್ದರೆ ಅವನಿಗೆ ಶರಣನೆಂದು ಕರೆಯಲಿಕ್ಕಾಗದು. ಈ ವಿಶ್ವ ಮತ್ತೆ ತನ್ನ ರೂಪವನ್ನು ಕಳೆದುಕೊಂಡು ಬಯಲಾಗುವುದು ಎಂಬ ಅಂತಿಮ ಸತ್ಯವನ್ನು ಅರಿತ ಶರಣನೇ ಲಿಂಗಾನುಭಾವಿಯಾಗುತ್ತಾನೆ. ಲಿಂಗತತ್ತ್ವವು ವಿಶ್ವದ ಆದಿ ಮತ್ತು ಅಂತ್ಯದ ಪರಿಜ್ಞಾನವನ್ನು ಕೊಡುವತತ್ತ್ವವಾಗಿದೆ. ಇವುಗಳ ಮಧ್ಯೆ ಇರುವ ಬದುಕನ್ನು

ಲಿಂಗಾಂಗಸಾಮರಸ್ಯದೊಂದಿಗೆ ಅರ್ಥಪೂರ್ಣಗೊಳಿಸುವ ಕ್ರಮವನ್ನು ಲಿಂಗತತ್ತ್ವ ಸಾರುತ್ತದೆ. ಲಿಂಗವೇ ಚೈತನ್ಯ. ಅಂಗವೇ ನಮ್ಮದೇಹ ಎಂಬ ವಸ್ತು. ಇವುಗಳ ಮಧ್ಯದ ಅಂದರೆ ಶಿವ ಮತ್ತು ಜೀವರ ಮಧ್ಯದ ಸಾಮರಸ್ಯವೇ ಲಿಂಗಾಂಗಸಾಮರಸ್ಯ. ಹೀಗೆ ಲಿಂಗಾಂಗಸಾಮರಸ್ಯ ಹೊಂದಿದವರು ಪ್ರಸಾದಕಾಯರಾಗುತ್ತಾರೆ. ಇಂಥ ಲಿಂಗಾಂಗಸಾಮರಸ್ಯವನ್ನು ಹೊಂದಿದವರೇ ಲಿಂಗಾನುಭಾವಿಗಳು. ಎಲ್ಲವೂ ಲಯವಾಗುವ ಅಂತಿಮ ಸತ್ಯವನ್ನುಅರಿಯಲು ಲಿಂಗಾಂಗಸಾಮರಸ್ಯ ಅವಶ್ಯವಾಗಿದೆ. ರೂಪ ಲಯವಾಗಿ ಬಯಲಾಗುವ ಅಂತಿಮ ಸತ್ಯವನ್ನು ಅರಿಯದವರು ಲಿಂಗಾನುಭಾವಿಗಳಾಗಲು ಸಾಧ್ಯವಿಲ್ಲ. ಇಂಥ ಬಯಲು ಮತ್ತು ರೂಪ ಒಂದಾಗಿರುವುದನ್ನು ಅರಿತುಕೊಂಡಾಗ ಶಿವ ಮತ್ತು ಜೀವರಲ್ಲಿ ಅಭೇದ್ಯ ಉಂಟಾಗುವುದು. ಈ ಸತ್ಯವನ್ನು ಅರಿತುಕೊಂಡವರು ಶರಣರಾಗುತ್ತಾರೆ; ಮರೆತವರು ಮಾನವರಾಗಿ ಸುಮ್ಮನೆ ಬದುಕಿ ಸತ್ತುಹೋಗುತ್ತಾರೆ.

2012ನೇ ಏಪ್ರಿಲ್ 28ರಂದು ಆಸ್ಟ್ರೇಲಿಯಾದ ಅಡಿಲೇಡ್‌ನಲ್ಲಿ ನಡೆದ ಆಸ್ಟ್ರೇಲೇಷ್ಯಾ (ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ಸಿಂಗಾಪುರ) ದ ಬಸವ ಸಮಿತಿಯವರು ಏರ್ಪಡಿಸಿದ್ದ 5ನೇ ಅಂತರ್‌ರಾಷ್ಟ್ರೀಯ ಶರಣ ಸಂಸ್ಕೃತಿ ಸಮ್ಮೇಳನದಲ್ಲಿ ಮಾಡಿದ ಮುಖ್ಯ ಭಾಷಣ.

೦

ಕಾಯಕವೇ ಕೈಲಾಸ

ದಯೆಯು ಧರ್ಮದ ಮೂಲವಾದರೆ ಕಾಯಕವು ಧರ್ಮದ ಆಧಾರಸ್ತಂಭವಾಗಿದೆ. ಕಾಯಕವಿಲ್ಲದೆ ಈ ಜಗತ್ತು ನಿಷ್ಕ್ರಿಯವಾಗುವುದು. ಎರೆಹುಳು ಭೂಮಿಯನ್ನು ಹದಗೊಳಿಸುವ ಕಾಯಕ ಮಾಡುತ್ತದೆ. ಜೇನುಹುಳು ಪರಾಗಸ್ಪರ್ಶದ ಕಾಯಕ ಮಾಡುವುದರ ಮೂಲಕ ಹೂ, ಹಣ್ಣು ಮತ್ತು ಆಹಾರಧಾನ್ಯ ನಮಗೆಲ್ಲ ಸಿಗುವಂತೆ ಮಾಡುತ್ತವೆ. ಮೋಡಗಳು ಮಳೆ ಸುರಿಯುವ ಕಾಯಕ ಮಾಡುತ್ತವೆ. ಭೂಮಿಯು ಬೆಳೆಯುವ ಕಾಯಕ ಮಾಡುತ್ತದೆ. ಸೂರ್ಯ ಬೆಳಕು ಕೊಡುವ ಕಾಯಕ ಮಾಡುತ್ತಾನೆ. ಚಂದ್ರ ಬೆಳದಿಂಗಳು ನೀಡುವ ಕಾಯಕ ಮಾಡುತ್ತಾನೆ ಹೀಗೆ ಜಗತ್ತಿನಲ್ಲಿ ಪ್ರತಿಯೊಂದು ಜೀವಿ ಮತ್ತು ವಸ್ತುಗಳು ಕೂಡ ತಮ್ಮದೇ ಆದ ಕಾಯಕ ಮಾಡುವುದರ ಮೂಲಕ ತಮ್ಮ ಮಹತ್ವವನ್ನು ಸಾರುತ್ತವೆ. ಆದ್ದರಿಂದ ಮಾನವರು ಕೂಡ ಕಾಯಕ ಮಾಡುವುದರ ಮೂಲಕವೇ ಈ ಭೂಮಿಯಲ್ಲಿ ಸಾಧನೆ ಮಾಡಬೇಕು ಎಂದು ಬಸವಧರ್ಮ ಸೂಚಿಸುತ್ತದೆ.

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು,
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು.
ಕಾಯಕವೇ ಕೈಲಾಸವಾದ ಕಾರಣ.
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

ಎಂದು ಶರಣ ಆಯ್ದಕ್ಕಿ ಮಾರಯ್ಯನವರು ಸಾರಿದ್ದಾರೆ.

ಶರಣದರ್ಶನದಲ್ಲಿ ದಾಸೋಹಂಭಾವದ ಕಾಯಕಕ್ಕೆ ಹೆಚ್ಚಿನ ಮಹತ್ವವಿದೆ. ಕಾಯಕ ಮತ್ತು ದಾಸೋಹ ನಿಸರ್ಗತತ್ತ್ವಗಳಾಗಿವೆ. ಮಾನವನು ನಿಸರ್ಗದ ಭಾಗವಾಗಿದ್ದಾನೆ. ಆದ್ದರಿಂದ ಆತ ಕಾಯಕ ಮತ್ತು ದಾಸೋಹ ಬಿಟ್ಟು ಬದುಕುವಂತಿಲ್ಲ ಎಂದು ಬಸವಧರ್ಮ ಸಾರುತ್ತದೆ.

ನಿಸರ್ಗಪರವಾದ ಕಾಯಕದ ಮೇಲೆ ನಿಂತ ಬಸವಧರ್ಮವನ್ನು ಮಾರಯ್ಯನವರು ಅಪ್ಪಿಕೊಂಡರು. ಕಾಯಕವೇ ಎಲ್ಲದಕ್ಕೂ ಆಧಾರ. ಕಾಯಕವಿಲ್ಲದಿದ್ದರೆ ಇಡೀ ಲೋಕ

ನಿಷ್ಕ್ರಿಯವಾಗುವುದರಿಂದ ಗುರು, ಲಿಂಗ ಮತ್ತು ಜಂಗಮರು ಆಧಾರವಿಲ್ಲದಂತಾಗುತ್ತಾರೆ. ಈ ಹಿನ್ನೆಲೆಯಲ್ಲಿ ಇದೊಂದು ವಿಶಿಷ್ಟ ವಚನವಾಗಿದೆ.

ಆಯ್ದಕ್ಕಿ ಮಾರಯ್ಯನವರು ಗುರು, ಲಿಂಗ ಮತ್ತು ಜಂಗಮದ ಅವಹೇಳನ ಮಾಡುವುದಿಲ್ಲ. ಆದರೆ ಗುರು, ಲಿಂಗ, ಜಂಗಮದ ಹಾಗೂ ಒಟ್ಟಾರೆ ಸಕಲ ಜೀವಾತ್ಮರ ಸಂರಕ್ಷಣೆಗಾಗಿ ಕಾಯಕ ಎಷ್ಟೊಂದು ಮಹತ್ವದ್ದಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಮಾತ್ರ ಅವರು ಈ ಸ್ಪಷ್ಟ ವಾದವನ್ನು ಮುಂದಿಡುತ್ತಾರೆ.

ನಾವು ಕಾಯಕದಲ್ಲಿ ಮಗ್ನವಾದಾಗ ದೇವರಿಗೆ ಪ್ರಿಯವಾದುದನ್ನೇ ಮಾಡುತ್ತ ಸ್ವಾವಲಂಬಿಯಾಗುತ್ತೇವೆ. ನಂತರ ದಾಸೋಹದ ಮೂಲಕ ಅಳಿಲುಸೇವೆ ಸಲ್ಲಿಸುತ್ತೇವೆ.

ಕಾಯಕದಲ್ಲಿ ನಿರತರಾದಾಗ ಗುರುದರ್ಶನ, ಲಿಂಗಪೂಜೆ ಮತ್ತು ಜಂಗಮಸೇವೆಯ ಯೋಚನೆ ಮಾಡುತ್ತ ಕುಳಿತರೆ ಸರಿಯಾಗಿ ಕಾಯಕ ಮಾಡಲಿಕ್ಕಾಗದು. ಸ್ವಾವಲಂಬಿಯಾಗಿ ಗುರು ಲಿಂಗ ಜಂಗಮದ ದಾಸೋಹಕ್ಕಾಗಿಯೇ ಕಾಯಕ ಮಾಡುವುದರಿಂದ ಆ ನಿಜವಾದ ಕಾಯಕವು ಗುರು, ಲಿಂಗ ಮತ್ತು ಸಮಾಜವೆಂಬ ಜಂಗಮವನ್ನು ಬಿಟ್ಟು ಇಲ್ಲ ಎಂಬ ಸೂಕ್ಷ್ಮತೆಯನ್ನು ಈ ವಚನ ಹೊಂದಿದೆ. ಅಂತೆಯೆ 'ಕಾಯಕವೇ ಕೈಲಾಸ' ಎಂಬುದು ಬಸವಧರ್ಮದ ಮಹಾವಾಕ್ಯವಾಗಿ ಜನಮನದಲ್ಲಿ ಅಚ್ಚೊತ್ತಿದೆ.

'ಕಾಯಕವೇ ಕೈಲಾಸವಾದ ಕಾರಣ ದೇವರು ಕಾಯಕದೊಳಗೇ ಇರುತ್ತಾನೆ' ಎಂಬ ಮಾತು ಕಾಯಕದ ಬಗೆಗೆ ಶರಣರಿಗಿರುವ ಗೌರವದ ಪ್ರತೀಕವಾಗಿದೆ. ಶರಣರು ಕಾಯಕದ ಮೂಲಕ ದೇವರನ್ನು ಕಂಡರು. ಕಾಯಕದ ಅನುಭವವನ್ನೇ ಮೆಟ್ಟಿಲಾಗಿಸಿಕೊಂಡು ಅನುಭಾವದ ತುದಿಯನ್ನು ತಲುಪಿದರು. ಆದರೆ ನಮ್ಮ ದೇಶದ ಧರ್ಮಶಾಸ್ತ್ರಗಳು ಅಧ್ಯಾತ್ಮಕ್ಕೂ ಕಾಯಕಕ್ಕೂ ಸಂಬಂಧವನ್ನು ಕಲ್ಪಿಸಲೇ ಇಲ್ಲ. ಸಾಧುಗಳು, ಸನ್ಯಾಸಿಗಳು, ಸ್ವಾಮಿಗಳು, ಯೋಗಿಗಳು ಮತ್ತು ಯತಿಗಳು ಆಗುವುದೆಂದರೆ ಕಾಯಕದಿಂದ ದೂರಾಗುವುದು ಎಂದೇ ಅರ್ಥ. ದೊಡ್ಡ ದೊಡ್ಡ ತತ್ತ್ವಜ್ಞಾನದ ಮಾತುಗಳನ್ನು ಹೇಳುತ್ತ ಪರಾವಲಂಬಿಗಳಾಗಿ ಬದುಕುವುದು ಎಂದೇ ಅರ್ಥ. ಹೀಗೆ ನಿಷ್ಕ್ರಿಯ ಬದುಕನ್ನು ಸಾಗಿಸುವವರು ಜ್ಞಾನವನ್ನು ಕ್ರಿಯೆಗೆ ಇಳಿಸುವಲ್ಲಿ ಸೋತರು. ಉಪದೇಶ ಮಾಡುವುದೇ ಇವರ ಕಾಯಕವಾಯಿತು. ಇಂಥವರಲ್ಲಿ ಕೆಲವರು ಸಾತ್ವಿಕರು ಇದ್ದರು. ಆದರೆ ಅನೇಕರು ರಾಜರಿಗಿರುವ ಸೌಲಭ್ಯಗಳನ್ನು ಕೂಡ ಪಡೆಯುವಲ್ಲಿ ಸಫಲರಾದರು. ಬೆಳ್ಳಿಯ ಪಲ್ಲಕ್ಕಿ, ನವರತ್ನಗಳಿಂದ ಕೂಡಿದ ಬಂಗಾರದ ಕಿರೀಟ, ಆನೆ, ಅಂಬಾರಿ, ಕುದುರೆ, ರಥ ಮತ್ತು ನೂರಾರು ಸೇವಕರನ್ನು ಹೊಂದಿ ಭಾರಿ ಮಠಮಾನ್ಯಗಳ ಒಡೆಯರಾಗಿದ್ದರು. ಕಳ್ಳರು, ಸುಳ್ಳರು, ದರೋಡೆಕೋರರು, ಮೋಸಗಾರರು, ಕೊಲೆಗಡುಕರು, ಸುಲಿಗೆಕೋರರು, ಶ್ರೀಮಂತರು, ರಾಜ ಮಹಾರಾಜರು ಹೀಗೆ ಈ ಎಲ್ಲ ಪ್ರಕಾರದ ಜನರು ಇವರ ಮಾತುಗಳಿಗೆ ಮರಳಾಗುತ್ತಲೇ ಇದ್ದುದಕ್ಕೆ ಇತಿಹಾಸ ಸಾಕ್ಷಿ ಇದೆ. ನಿತ್ಯ ಜೀವನದಲ್ಲಿ ತಪ್ಪು ಮಾಡುತ್ತಲೇ ಇರುವ ಇಂಥವರಿಗೆ

ಈ ಮೋಸದ ಜ್ಞಾನಿಗಳು ನರಕದ ಭಯವನ್ನು ಹುಟ್ಟಿಸುತ್ತಿದ್ದರು. ಅವರ ಕರ್ಮ ಹರಿಯಲು ಯಜ್ಞಯಾಗಾದಿಗಳನ್ನು ಮಾಡಿಸುತ್ತಿದ್ದರು. ಸ್ವರ್ಗದ ಆಸೆಯನ್ನು ಹಚ್ಚುವುದರ ಮೂಲಕ ಅವರಿಂದ ಭಾರಿ ಮೊತ್ತದ ಧನ-ಕನಕ ಮತ್ತು ಆಸ್ತಿಪಾಸ್ತಿ ಪಡೆಯುತ್ತಿದ್ದರು. ಇಂಥವರ ಬಿಟ್ಟಿ ಸೇವೆ ಮಾಡುವುದರಿಂದ ಪುಣ್ಯ ಲಭಿಸುವುದೆಂಬ ಭ್ರಮೆಯಲ್ಲಿ ಅನೇಕ ಕಾಯಕಜೀವಿಗಳು ಬದುಕುವುದು ಶೋಚನೀಯವಾಗಿದೆ.

ಸೂಕ್ಷ್ಮಮತಿಗಳಾದ ಬಸವಣ್ಣನವರು ಇದನ್ನೆಲ್ಲ ಗಮನಿಸಿದರು. ಬಹುಸಂಖ್ಯಾತರಾದ ಕಾಯಕಜೀವಿಗಳ ಶೋಷಣೆಯನ್ನು ಇಂಥ ಎಲ್ಲರೂ ಒಂದಾಗಿ ಮಾಡುತ್ತಿರುವುದನ್ನು ತಪ್ಪಿಸುವುದೇ ಅವರ ಆದ್ಯ ಕರ್ತವ್ಯವಾಗಿತ್ತು. ಕಾಯಕಜೀವಿಗಳನ್ನು ಒಂದು ಸಂಕುಲವಾಗಿಸಿ, ಅವರನ್ನು ವೈಚಾರಿಕ ನೆಲೆಗೆ ತರಲು ನಿರ್ಧರಿಸಿದರು. ಸುಲಿಗೆಯ ಕೇಂದ್ರಗಳಾದ ಗುಡಿಗಳಿಂದ, ಮೂರ್ತಿಗಳಿಂದ, ತೀರ್ಥಕ್ಷೇತ್ರಗಳಿಂದ, ಶಾಸ್ತ್ರಗಳಿಂದ, ಕರ್ಮಸಿದ್ಧಾಂತ ಮತ್ತು ಪಂಚಾಂಗಗಳಿಂದ ಹಾಗೂ ಎಲ್ಲ ತೆರನಾದ ಮೂಢನಂಬಿಕೆಗಳಿಂದ ಅವರನ್ನು ಮುಕ್ತಗೊಳಿಸಿ ಕಾಯಕ ಪ್ರಧಾನವಾದ ಜೀವನಮಾರ್ಗವನ್ನು ತೋರಿಸುವಂಥ ಹೊಸಧರ್ಮವನ್ನೇ ಜಾರಿಗೆ ತಂದರು. ಈ ಹೊಸ ಧರ್ಮವು ಅರಿವು ಮತ್ತು ಆಚಾರದ ಧರ್ಮವಾಗಿತ್ತು. ದುಡಿಯುವವರಿಗೆ ಸಮಾಜದಲ್ಲಿ ಉನ್ನತ ಸ್ಥಾನ ಕೊಡುವ ಧರ್ಮವಾಗಿತ್ತು. ದುಡಿಯುವ ವರ್ಗದಲ್ಲಿ ಜಾತಿ, ಅಸ್ಪೃಶ್ಯತೆ ಮುಂತಾದ ಮೇಲು ಕೀಳುಗಳನ್ನು ನಿವಾರಿಸಿದ ಧರ್ಮವಾಗಿತ್ತು.

ಇಂಥ ಅನುಪಮ ಧರ್ಮದಿಂದ ಕಾಯಕಜೀವಿಗಳು ಪುಳಕಿತಗೊಂಡರು. ಕಾಯಕಕ್ಕಿಂತ ದೊಡ್ಡದು ಯಾವುದೂ ಇಲ್ಲ ಎಂಬ ಸತ್ಯವನ್ನು ಅವರು ಅರಿತರು. ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮುಂತಾದ ಸವರ್ಣೀಯರು ಸುಖದಿಂದ ಬದುಕುತ್ತಿರುವುದು ತಮ್ಮ ಕಾಯಕದ ಕಾರಣದಿಂದಲೇ ಎಂಬುದು ಅವರಿಗೆ ಮನವರಿಕೆಯಾಯಿತು. ಇಂಥ ಅರಿವಿನ ಹಿನ್ನೆಲೆಯಲ್ಲಿ ಮೂಡಿಬಂದ ವಚನವಿದು.

ಆಯ್ದಕ್ಕಿ ಮಾರಯ್ಯನವರಿಗೆ ಎಂಥ ಆತ್ಮವಿಶ್ವಾಸ ಮೂಡಿದೆ ಎಂದರೆ, ಅವರು ಕಾಯಕದಲ್ಲಿ ನಿರತರಾದಾಗ ಗುರುವಿನ ದರ್ಶನ, ಲಿಂಗಪೂಜೆ ಮತ್ತು ಜಂಗಮಸೇವೆಯನ್ನು ಕೂಡ ಮರೆಯಲು ಸಿದ್ಧರಿದ್ದಾರೆ. ಕಾಯಕದಲ್ಲೇ ಕೈಲಾಸವನ್ನು ಮತ್ತು ಆ ಕೈಲಾಸದಲ್ಲಿರುವ ದೇವರನ್ನೂ ಕಾಣುವ ಒಳನೋಟವನ್ನು ಅವರು ಹೊಂದಿದ್ದಾರೆ.

ಹೀಗೆ ಬಸವಣ್ಣನವರು ದುಡಿಯುವ ಜನರಲ್ಲಿ ಆತ್ಮವಿಶ್ವಾಸವನ್ನು ಮೂಡಿಸಿದರು. ಪರಾವಲಂಬಿಗಳ ಅಧ್ಯಾತ್ಮವನ್ನು ಅಲ್ಲಗಳೆದರು. ಕಾಯಕದ ಅನುಭವದಿಂದ ಮಾತ್ರ ಪರಮಾತ್ಮನ ಅನುಭಾವವಾಗುವುದು ಎಂಬುದನ್ನು ಅವರಿಗೆ ಹೇಳಿಕೊಟ್ಟರು. ಹೀಗೆ ಬಸವಣ್ಣನವರು ದುಡಿಯುವ ವರ್ಗವನ್ನು ವಿಮೋಚನೆಗೊಳಿಸಿದರು.

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;
ಸತ್ಯಶುದ್ಧವಿಲ್ಲದುದು ಕಾಯಕವಲ್ಲ;

ಆಸೆಯೆಂಬುದು ಭವದ ಬೀಜ;
ನಿರಾಸೆಯೆಂಬುದು ನಿತ್ಯಮುಕ್ತಿ.
ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ.

ಎಂದು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ತಿಳಿಸುತ್ತಾಳೆ.

ತ್ರಿವಿಧ ದಾಸೋಹಕ್ಕಾಗಿ ಅಂದರೆ ಗುರು ಲಿಂಗ ಜಂಗಮಕ್ಕಾಗಿ ಮತ್ತು ಸ್ವಾವಲಂಬನೆಗಾಗಿ ಕಾಯಕ ಮಾಡದೆ ಬದುಕುವವರು ಭಕ್ತರಲ್ಲ. ಅಲ್ಲದೆ ಮಾನವಕುಲಕ್ಕೆ ಹಾನಿಯುಂಟು ಮಾಡುವ ಯಾವುದೇ ಕೆಲಸಕ್ಕೆ ಕಾಯಕವೆಂದು ಕರೆಯಲಿಕ್ಕಾಗದು. ಕಾಯಕವೆಂಬುದು ಸತ್ಯದ ನೆಲೆಗಟ್ಟಿನ ಮೇಲೆ ಶುದ್ಧವಾಗಿ ಇರುವಂಥದ್ದು. ದೈನಂದಿನ ಬದುಕಿಗಾಗಿ ಮತ್ತು ಲೋಕಹಿತಕ್ಕಾಗಿ ಉತ್ಪಾದನೆಯಲ್ಲಿ ತೊಡಗಿಕೊಳ್ಳುವಂಥ ಕ್ರಿಯೆಯೇ ಕಾಯಕವೆನಿಸುವುದು.

ಹೀಗೆ ಈ ವಚನದ ಮೊದಲಿನ ಎರಡು ಸಾಲುಗಳಲ್ಲಿ ಸೂಚಿಸುವ ಕಾಳವ್ವೆ, ನಂತರದ ಎರಡು ಸಾಲುಗಳಲ್ಲಿ ಈ ಭೌತಿಕ ಜಗತ್ತಿನ ಕಾಯಕಪ್ರಜ್ಞೆಯನ್ನು ತಾತ್ತ್ವಿಕ ಜಗತ್ತಿಗೆ ಏರಿಸುತ್ತಾಳೆ. 'ಆಸೆ ಎಂಬುದು ಭವದ ಬೀಜ; ನಿರಾಸೆ ಎಂಬದು ನಿತ್ಯ ಮುಕ್ತಿ' ಎಂದು ಸಾರುತ್ತಾಳೆ. ಐಹಿಕ ಜಗತ್ತಿನ ವಸ್ತುಗಳೆಲ್ಲ ತನಗೆ ಸೇರಬೇಕೆಂಬುದೇ ಆಸೆ. ಇಂಥ ಬಯಕೆಯಿಂದ ಕಾಯಕದಲ್ಲಿ ತೊಡಗಬಾರದು. ಏಕೆಂದರೆ ಆ ಬಯಕೆಯೇ ಭವದ ಬೀಜವಾಗುತ್ತದೆ.

ಹುಟ್ಟುಸಾವುಗಳ ಸರಪಳಿಗೆ 'ಭವ' ಎಂದು ಸಾಂಪ್ರದಾಯಿಕವಾಗಿ ಕರೆಯುತ್ತಾರೆ. ವಚನಕಾರರೆಲ್ಲ ಮರೆವಿನಿಂದ ಬದುಕುವುದಕ್ಕೆ 'ಭವ' ಎಂದು ಹೇಳಿದ್ದಾರೆ. ವಚನಕಾರರ ಪ್ರಕಾರ 'ಭವನಾಶ' ಎಂದರೆ ಸಾವಲ್ಲ. ಕಾಳವ್ವೆ ಹೇಳುವಂಥ ಆಸೆಯ ನಾಶ. ಇಂಥ ನಿರಾಸೆಯಿಂದ ನಿತ್ಯಮುಕ್ತಿ ಪ್ರಾಪ್ತವಾಗುತ್ತದೆ. ಮರೆವು ಹೋಗಿ ಅರಿವು ಬಂದಾಗ ಮಾನವರ ಭವ ನಾಶವಾಗುತ್ತದೆ. ಆಗ ಅವರು ತಮ್ಮ ಜೀವಿತಾವಧಿಯಲ್ಲೇ ಮುಕ್ತಿ ಪಡೆಯುತ್ತಾರೆ. ಹೀಗೆ ಮುಕ್ತಿಯನ್ನು ಸಂಪಾದಿಸುವುದು ಸರಳವಲ್ಲ ಎಂದೂ ಕಾಳವ್ವೆ ಎಚ್ಚರಿಸುತ್ತಾಳೆ. ತಾವು ಬದುಕಿದ್ದಾಗಲೇ ಮೋಕ್ಷ ಪಡೆಯುವ ಅರಿವನ್ನು ಸಂಪಾದಿಸದೆ ಇರುವವರು ಭವಿಗಳು.

ಭಕ್ತನು ಹೇಗಿರಬೇಕು ಎಂಬುದರ ಕುರಿತು ಕಾಳವ್ವೆ ನಿಖರವಾಗಿ ಹೇಳಿದ್ದಾಳೆ. ಭಕ್ತ ಶಬ್ದದ ಸಾಂಪ್ರದಾಯಿಕ ಅರ್ಥದ ಬದಲಿಗೆ ಹೊಸ ಅರ್ಥವನ್ನು ಕೊಡುತ್ತಾಳೆ. ಭಕ್ತನ ವ್ಯಕ್ತಿತ್ವ ಕಾಯಕದ ಮೇಲೆ ನಿಂತಿದೆ ಎಂದು ಸೂಚಿಸುತ್ತಾಳೆ. ಆ ಕಾಯಕವು ಸತ್ಯ ಮತ್ತು ಪಾವಿತ್ರ್ಯದ ಮೇಲೆ ನಿಂತಿದೆ ಎಂಬುದರ ಕಡೆಗೆ ಗಮನ ಸೆಳೆಯುತ್ತಾಳೆ. ಆ ಕಾಯಕದಿಂದ ಬಂದುದರ ಬಗ್ಗೆ ಒಲವು ತೋರಿದರೆ ಅದು ಭವದ ಮೂಲವಾಗುತ್ತದೆ ಎಂದು ಎಚ್ಚರಿಸುತ್ತಾಳೆ. ಶರಣ ಸಂಕುಲ ಮತ್ತು ಒಟ್ಟಾರೆ ಜೀವಸಂಕುಲದ ಬಗೆಗಿನ ದಾಸೋಹ ಪ್ರಜ್ಞೆಯಿಂದ ಕಾಯಕ ಮಾಡಬೇಕು. ಆ ಕಾಯಕದಿಂದ ಬಂದುದನ್ನು ದೇವರು ಕೊಟ್ಟ ಪ್ರಸಾದವಾಗಿ ಸ್ವೀಕರಿಸಿದರೆ ಭವ ನಾಶವಾಗಿ ನಿತ್ಯಮುಕ್ತಿಯನ್ನು

ಸಂಪಾದಿಸುವ ರಹಸ್ಯವನ್ನು ತಿಳಿಸುತ್ತಾಳೆ. ಆ ಮೂಲಕ ವ್ಯಕ್ತಿಯನ್ನು ವಿಮೋಚನೆಗೊಳಿಸಿ ಸಮಾಜವನ್ನು ರಕ್ಷಿಸುವ ದಾಸೋಹಂಭಾವದ ಮಹತ್ವವನ್ನು ಸಾರುತ್ತಾಳೆ.

ಕಾಳವ್ವೆ ಬಡ ಹೆಣ್ಣುಮಗಳು. ವಚನಕಾರರಲ್ಲಿ ಬಹುಪಾಲು ಮಂದಿ ಇಂಥ ಬಡತನದ ಹಿನ್ನೆಲೆಯಿಂದಲೇ ಬಂದವರು. ಇವರೆಲ್ಲ ಕಾಯಕನಿಷ್ಠೆಯಿಂದ ಬದುಕಿದರು. ಅಂದರೆ ಆರ್ಥಿಕವಾಗಿ ಸ್ವಾವಲಂಬಿಯಾದರು. ಶರಣ ಸಂಕುಲದಲ್ಲಿ ಕಾಯಕದ ಅನುಭವವನ್ನು ಹಂಚಿಕೊಂಡು ಅನುಭಾವಿಗಳಾದರು. ಅಂದರೆ ಆಧ್ಯಾತ್ಮಿಕವಾಗಿ ಸ್ವಾವಲಂಬಿಗಳಾದರು. ಶರಣ ಸಂಕುಲದ ಶ್ರೀರಕ್ಷೆಯಲ್ಲಿ ಕಾಯಕಜೀವಿಗಳೆಲ್ಲ ಹೀಗೆ ಸ್ವಾವಲಂಬಿಗಳಾಗುತ್ತ ಜಾತಿ ಮತಗಳಿಂದ ಹೊರಬಂದು ಒಂದಾಗಿ ಬದುಕುವುದನ್ನು ಕಲಿತರು. ಆ ಮೂಲಕ ವರ್ಣಾಶ್ರಮ ಪದ್ಧತಿಯಿಂದ ಕೂಡಿದ ಮನುಧರ್ಮದಿಂದ ಮುಕ್ತರಾದರು. ಆ ಧರ್ಮ ರೂಪಿಸಿದ ಮೇಲುಕೀಳಿನ ಸಮಾಜದಿಂದ ಮತ್ತು ಅಂಥ ಅಸಮಾನತೆಯ ಸಮಾಜ ಉಂಟುಮಾಡಿದ ಶೋಷಣೆಯ ಅರ್ಥವ್ಯವಸ್ಥೆಯಿಂದ ಕಾಯಕಜೀವಿಗಳೆಲ್ಲ ವಿಮೋಚನೆಗೊಂಡರು. ಕಾಯಕನಿಷ್ಠರಾಗುತ್ತಲೇ ಐಹಿಕ ಆಸೆಗಳಿಂದ ಹೊರಬರುವ ಮೂಲಕ ನಿತ್ಯಮುಕ್ತರಾಗಿ ಶರಣರಾದರು. ಅಂದರೆ ನಿಜಮಾನವರಾಗಿ ದೈನಂದಿನ ಬದುಕು ಮತ್ತು ಆಧ್ಯಾತ್ಮಿಕ ಬದುಕಿನ ಆನಂದವನ್ನು ಏಕಕಾಲಕ್ಕೇ ಪಡೆದರು.

ಇಂಥ ಬದುಕು ಸುಲಭಸಾಧ್ಯವಲ್ಲ ಎಂಬುದರ ಕುರಿತು ತಿಳಿಸುವ ಕಾಳವ್ವೆಯ ಜೀವನಾನುಭವ ಅಚ್ಚರಿ ಹುಟ್ಟಿಸುವಂಥದ್ದು. ಜನರು ಮನೆಯಲ್ಲಿ ತಮ್ಮ ಧರ್ಮಗ್ರಂಥ ಇಟ್ಟುಕೊಳ್ಳುವುದು ಸುಲಭ. ಆದರೆ ಅದನ್ನು ಮನದಲ್ಲಿ ತಂದಿಟ್ಟುಕೊಳ್ಳುವುದು ಕಠಿಣ ಎಂದು ಕಾಳವ್ವೆ ಸೂಚಿಸುತ್ತಾಳೆ. 'ಉರಿಲಿಂಗಪೆದ್ದಿಗಳರಸನಲ್ಲಿ ಸದರವಲ್ಲ' ಎಂದರೆ ಸೈದ್ಧಾಂತಿಕ ಬದುಕು ಸರಳವಲ್ಲ ಎಂದ ಹಾಗೆ. ಇಲ್ಲಿ ಉರಿಲಿಂಗಪೆದ್ದಿಗಳರಸ ಎಂಬ ದೇವರು ನಮ್ಮ ಮುಂದೆ ಸಿದ್ಧಾಂತವಾಗಿ ನಿಲ್ಲುತ್ತಾನೆ. ಇಂಥ ಸೈದ್ಧಾಂತಿಕ ಬದುಕನ್ನು ವ್ರತವಾಗಿ ಸ್ವೀಕರಿಸಿದಾಗ ಮಾತ್ರ ನಿತ್ಯಮುಕ್ತರಾಗಿ ಲೋಕದ ಹಿತ ಕಾಪಾಡಲು ಸಾಧ್ಯ. ಹೀಗೆ ಕಾಳವ್ವೆ ನಮ್ಮ ಮನಸ್ಸಿನಲ್ಲಿ ನಿಂತು ಎಚ್ಚರಿಕೆಯ ಗಂಟೆ ಬಾರಿಸುತ್ತಲೇ ಇರುತ್ತಾಳೆ.

ಆವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ.

ಎಂದು ಶರಣ ಲದ್ದೆಯ ಸೋಮಣ್ಣ ಹೇಳುತ್ತಾನೆ.

ಬಸವಣ್ಣನವರ ಸಮಕಾಲೀನ ಶರಣ ಸೋಮಣ್ಣ ಈಗಿನ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಲದ್ದೆ (ಲಾಧಾ) ಗ್ರಾಮದವನು. ಲದ್ದೆ ಎಂದರೆ ಹೊರೆ ಎಂಬ ಅರ್ಥವೂ ಇದೆ. ಲದ್ದೆ ಗ್ರಾಮದಿಂದ ಹುಲ್ಲಿನ ಹೊರೆಯನ್ನು ಹೊತ್ತು, ಸಮೀಪದ ಬಸವಕಲ್ಯಾಣ ತಾಲ್ಲೂಕಿನ ಹುಲಸೂರಿನಲ್ಲಿ ಮಾರುವ ಕಾಯಕವನ್ನು ಕೈಕೊಂಡಿದ್ದ

ಶರಣ ಲದ್ದೆಯ ಸೋಮಣ್ಣನ ವ್ಯಕ್ತಿತ್ವ ಅನುಕರಣೀಯವಾಗಿದೆ. ಸೋಮಣ್ಣನ ಈ ಒಂದೇ ಒಂದು ವಚನ ಸಿಕ್ಕಿದೆ. ಇದು ಆತನ ಉತ್ಸಾಹದ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ.

ಯಾವುದೇ ಕಾಯಕವಾದರೂ ತಲ್ಲೀನವಾಗಿ ಮಾಡು. ಕಾಯಕದಿಂದ ಬಂದದ್ದನ್ನು ದಾಸೋಹಂ ಭಾವದಿಂದ ಗುರು, ಲಿಂಗ ಮತ್ತು ಜಂಗಮಕ್ಕೆ ಅರ್ಪಿಸು. ಅರ್ಪಿಸಿದ ನಂತರ ಉಳಿದದ್ದನ್ನು ಪ್ರಸಾದವಾಗಿ ಸ್ವೀಕರಿಸು. ರೋಗ ಬಂದರೆ ನರಳು, ನೋವಾದರೆ ಅರಚು, ಸಾವು ಬಂದರೆ ಸಾಯಿ. ಇದಕ್ಕೆ ಆ ದೇವರ ಹಂಗೇಕೆ? ಎಂದು ಲದ್ದೆಯ ಸೋಮಣ್ಣ ಪ್ರಶ್ನಿಸುತ್ತಾನೆ.

ಆತ್ಮಗೌರವ, ಕಾಯಕನಿಷ್ಠೆ, ಶರಣಸಂಕುಲಕ್ಕೆ ನಿಷ್ಠೆ, ದೇವರ ಹಂಗಿನಲ್ಲಿ ಕೂಡ ಇರಬಾರದೆಂಬ ಛಲ ಮತ್ತು ಜನನದಂತೆ ಮರಣ ಕೂಡ ಸಹಜವಾಗಿರುವುದರಿಂದ ಆ ಬಗ್ಗೆ ತಲೆಕೆಡಿಸಿಕೊಳ್ಳಬಾರದು ಎಂಬ ಮಹತ್ವದ ನಿಲವುಗಳನ್ನು ಲದ್ದೆಯ ಸೋಮಣ್ಣ ಈ ವಚನದಲ್ಲಿ ತಾಳಿದ್ದಾನೆ.

ಜನ ಮನಸ್ಸಿಲ್ಲದ ಮನಸ್ಸಿನಿಂದ ಕೆಲಸ ಮಾಡಿದರೆ ಕಾಯಕದ ಆನಂದವನ್ನು ಪಡೆಯಲಾರರು. ಮಾನವರ ದೊಡ್ಡ ದುರಂತವೆಂದರೆ ತಮ್ಮ ಕಾಯಕವನ್ನು ತಾವು ಆನಂದಿಸದೆ ಇರುವುದು. ನಮ್ಮ ಕಾಯಕವನ್ನು ನಾವು ಸ್ವ ಕಾಯಕ ಮಾಡಿಕೊಂಡು, ಏಕಾಗ್ರತೆಯಿಂದ ಕ್ರಿಯಾಶೀಲರಾಗದಿದ್ದರೆ ಸಮಾಜ ಅವನತಿಯತ್ತ ಸಾಗುವುದು. ಜನಜೀವನ ದುಸ್ತರವಾಗುವುದು. ಕಾಯಕದಲ್ಲಿ ಮೇಲು ಕೀಳು ಎಂಬುದಿಲ್ಲ. ಈ ಸತ್ಯವನ್ನು ಅರಿತವರು ಜೀವನೋತ್ಸಾಹದಿಂದ ಕಾಯಕದಲ್ಲಿ ನಿರತರಾಗುವರು. ಕಾಯಕದಲ್ಲಿ ಮೇಲು ಕೀಳು ಎಂದು ಭೇದ ಮಾಡುವವರು ತಮ್ಮ ಕಾಯಕ ಕೀಳೆಂದು ಭಾವಿಸುವರು. ಇಂಥ ಸ್ಥಿತಿಯಲ್ಲಿ ಅವರು ಅನಾಥಪ್ರಜ್ಞೆಯಿಂದ್ದ ಬಳಲುತ್ತಾರೆ.

ಇಂಥ ಅನಾಥಪ್ರಜ್ಞಾಪೀಡಿತರು ಎಲ್ಲ ಕ್ಷೇತ್ರಗಳಲ್ಲೂ ಇದ್ದಾರೆ. ಇಂಥವರು ತಮ್ಮ ಕೆಲಸ ಕಾರ್ಯಗಳಲ್ಲಿ ಉತ್ಸಾಹ ಕಳೆದುಕೊಳ್ಳುವುದರಿಂದ ದೇಶದ ಪ್ರಗತಿ ಕುಂಠಿತಗೊಳ್ಳುವುದು. ಕಸಗುಡಿಸುವವರು ಸರಿಯಾಗಿ ಕಸಗುಡಿಸದಿದ್ದರೆ ರೋಗರುಜಿನುಗಳು ಹರಡುವವು. ವಿಮಾನ ಚಾಲಕ ಏಕಾಗ್ರತೆ ವಹಿಸದಿದ್ದರೆ ಅಪಘಾತ ಸಂಭವಿಸುವುದು. ಹೆದ್ದಾರಿ ನಿರ್ಮಾಣದಲ್ಲಿ ಉದಾಸೀನ ಮಾಡಿದರೆ ರಸ್ತೆ ಅಪಘಾತಗಳು ಸಂಭವಿಸುವವು. ಕಟ್ಟಡ ನಿರ್ಮಾಣದಲ್ಲಿ ಕಾಳಜಿ ವಹಿಸದಿದ್ದರೆ ಅನಾಹುತಗಳು ಸಂಭವಿಸುವವು. ಅಧಿಕಾರಿಗಳು ತಮ್ಮ ಸ್ಥಾನಮಾನದ ಬಗ್ಗೆ ಬೇಸರಪಟ್ಟುಕೊಂಡರೆ ಅವರ ಹುದ್ದೆಗೆ ಸಂಬಂಧಿಸಿದ ಕೆಲಸಕಾರ್ಯಗಳು ನೆನೆಗುದಿಗೆ ಬೀಳುವವು. ಮಂತ್ರಿಗಳು ತಮ್ಮ ಖಾತೆಗೆ ಸಂಬಂಧಿಸಿದ ಜವಾಬ್ದಾರಿಯನ್ನು ನಿಭಾಯಿಸದೆ ಇದ್ದಾಗ, ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವವು.

ಅನೇಕ ಮಂತ್ರಿಗಳು ತಮಗೆ ಸರಿಯಾದ ಖಾತೆ ಸಿಕ್ಕಿಲ್ಲ ಎಂದು ಕೊರಗುತ್ತಾರೆ. ಅನೇಕ ಅಧಿಕಾರಿಗಳು ತಮಗೆ ಸರಿಯಾದ ಹುದ್ದೆ ಸಿಕ್ಕಿಲ್ಲ ಎಂದು ಬಳಲುತ್ತಾರೆ.

ಆದರೆ ಲದ್ದೆಯ ಸೋಮಣ್ಣ ಹುಲ್ಲು ಮಾರುವುದರಲ್ಲೇ ತೃಪ್ತಿಪಟ್ಟು ನಮ್ಮೆಲ್ಲರಿಗೆ ಗುರು ಸ್ಥಾನದಲ್ಲಿ ನಿಲ್ಲುತ್ತಾನೆ. ದುಡಿಯುವುದು ಸ್ವಾಭಿಮಾನದ ಪ್ರತೀಕ. ಬೇಡುವುದು ಅಪಮಾನದ ಪ್ರತೀಕ ಎಂದು ಆತ ಸೂಚಿಸಿದ್ದಾನೆ.

ಲದ್ದೆಯ ಸೋಮಣ್ಣ ಈ ಪುಟ್ಟ ವಚನದಲ್ಲಿ ಆರು ಮುಖ್ಯ ವಿಚಾರಗಳನ್ನು ಹೇಳಿದ್ದಾನೆ. 1) ಪಾಲಿಗೆ ಬಂದ ಕಾಯಕವನ್ನು ಮನಸಾರೆ ಮಾಡಬೇಕು. 2) ಕೇವಲ ಸ್ವಂತದ ಸಮಸ್ಯೆಗಳ ಪರಿಹಾರಕ್ಕೆ ಮಾತ್ರ ಕಾಯಕ ಮಾಡದೆ ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆಯೊಂದಿಗೆ ಮಾಡಬೇಕು. 3) ಗುರು ಎಂದರೆ ಜ್ಞಾನ, ಲಿಂಗ ಎಂದರೆ ನೀತಿಧರ್ಮ, ಜಂಗಮ ಎಂದರೆ ಸಮಾಜ. ಹೀಗೆ ಜ್ಞಾನಕಾರ್ಯ, ನೀತಿಧರ್ಮಕಾರ್ಯ ಮತ್ತು ಸಮಾಜಕಾರ್ಯಗಳಿಗಾಗಿ, ದುಡಿದು ಕೂಡಿಸಿದ್ದನ್ನು ವಿನಿಯೋಗಿಸಬೇಕು. ಉಳಿದದ್ದನ್ನು ಪ್ರಸಾದವೆಂದು ಭಾವಿಸುವುದರ ಮೂಲಕ ಹಿತಮಿತವಾಗಿ ಬಳಸಬೇಕು. 4) ಈ ಲೋಕದೊಳಗೆ ಜನಿಸಿದ ಬಳಿಕ ರೋಗರುಜಿನುಗಳು, ಬೇನೆಬೇಸರಿಕೆಗಳು ಬಂದೇ ಬರುತ್ತವೆ. ಕೊನೆಗೆ ಸಾವು ಕೂಡ ನಿಶ್ಚಿತವಾದುದಾಗಿದೆ. ಈ ಸಂದರ್ಭದಲ್ಲಿನ ನೋವು ನರಳಾಟಗಳು ಅನಿವಾರ್ಯ. ಆದ್ದರಿಂದ ಇವನ್ನೆಲ್ಲ ಸಮಾಧಾನ ಚಿತ್ತದಿಂದ ಎದುರಿಸಬೇಕು. 5) ದುಡಿದು ಬದುಕುವ ಛಲ ಉಳ್ಳವರಿಗೆ ಮತ್ತು ಬದುಕಿನ ವಿವಿಧ ಮಜಲುಗಳ ಅರಿವುಳ್ಳವರಿಗೆ ದೇವರ ಹಂಗೂ ಇರಬಾರದು. ಏಕೆಂದರೆ ದೇವರು ನಮ್ಮ ತಾಪತ್ರಯ ಕಳೆಯುವ ಮಂತ್ರದಂಡವಲ್ಲ. ಆತ ಏನಿದ್ದರೂ ಬದುಕನ್ನು ಅರ್ಥಮಾಡಿಕೊಳ್ಳಲು ಬೇಕಾದ ಆತ್ಮಸಾಕ್ಷಿ. 6) ಈ ಸತ್ಯವನ್ನು ಅರಿತುಕೊಂಡು ಬದುಕಿದಷ್ಟು ದಿನ ಸಂತೋಷ ಮತ್ತು ಸಮಾಧಾನದಿಂದ ಬದುಕುವುದು.

ಬಸವಣ್ಣನವರ ಬಹದೊಡ್ಡ ಸಾಧನೆ ಎಂದರೆ ಇಂಥ ಸಹಸ್ರ ಸಹಸ್ರ ಬಡವರಿಗೆ ಆತ್ಮಗೌರವದಿಂದ ಮುನ್ನುಗ್ಗುವಂಥ ಜೀವನದರ್ಶನ ಮಾಡಿಸಿದ್ದು. ಜೀವನೋತ್ಸಾಹದಿಂದ ತುಂಬಿದಂಥ ಬಡ ಕಾಯಕಜೀವಿಗಳಿಂದ ಕೂಡಿದ 'ಶ್ರೀಮಂತ ಸಮಾಜ' ರಚನೆ ಮಾಡಿದ್ದು. 'ಎಲ್ಲ ಜಾತಿಗಳು ಸುಳ್ಳು; ಬಡವರೆಲ್ಲ ಒಂದು' ಎಂಬ ಸತ್ಯದ ನೆಲೆಯ ಮೇಲೆ. ಸಮೂಹ ಪ್ರಜ್ಞೆಯ ಶರಣಸಂಕುಲ ಸೃಷ್ಟಿಸಿದ್ದು. ಆ ಮೂಲಕ ವಿಶ್ವದ ಇತಿಹಾಸದಲ್ಲಿ ಬಡವರಿಗೆ ಸ್ಥಾನವನ್ನು ಕಲ್ಪಿಸಿದ್ದು. ಮಾನವಕುಲಕ್ಕೆ ಒಳಿತಾಗುವ ವಿಚಾರಗಳು ಜನಮಾನಸವನ್ನು ಹೊಕ್ಕಾಗ, ಸಮೂಹ ಪ್ರಜ್ಞೆಯೊಂದಿಗೆ ಕ್ರಿಯಾಶೀಲವಾಗುತ್ತ ಮಾನವೀಯತೆಯ ಮಹಾದರ್ಶನಕ್ಕೆ ಕಾರಣವಾಗುತ್ತವೆ ಎಂಬುದನ್ನು ಸಾಧಿಸಿತೋರಿಸಿದ್ದು.

ಬಸವಣ್ಣನವರ ಈ ಸಾಧನೆಗಳ ಪ್ರತೀಕವಾಗಿ ಲದ್ದೆಯ ಸೋಮಣ್ಣ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುತ್ತಾನೆ. ಉತ್ಸಾಹದ ಚಿಲುಮೆಯಾಗಿ ನಾವೂ ಮುನ್ನುಗ್ಗುವಂತೆ ಮಾಡುತ್ತಾನೆ.

ಲಂಚವಂಚನಕ್ಕೆ ಕೈಯಾನದ ಭಾಷೆ.
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

ಎಂದು ಕಸಗುಡಿಸುವ ಶರಣೆ ಸತ್ಯಕ್ಕ ತಿಳಿಸುತ್ತಾಳೆ.

ಬಸವಣ್ಣನವರ ಶರಣಸಂಕುಲ ಜಾತಿ ಸಂಕರದಿಂದ ಸೃಷ್ಟಿಯಾದುದು. 'ಜಾತಿ ಸಂಕರವಾದ ಬಳಿಕ ಕುಲವನರಸುವರೆ' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಬಸವಣ್ಣನವರ ಶರಣಸಂಕುಲದಲ್ಲಿ ಕುಲಗಳಿರಲಿಲ್ಲ, ಜಾತಿಗಳಿರಲಿಲ್ಲ, ಮೇಲುಕೀಳುಗಳಿರಲಿಲ್ಲ, ಬಡವ ಶ್ರೀಮಂತರಿರಲಿಲ್ಲ, ಹೆಣ್ಣು ಗಂಡೆಂಬ ಭೇದಭಾವ ಇರಲಿಲ್ಲ.

ಇಲ್ಲಿ ವ್ಯಕ್ತಿಗಳು ಶ್ರೀಮಂತರಾಗಿರದೆ ಇಡೀ ಸಮಾಜ ಶ್ರೀಮಂತವಾಗಿತ್ತು. ವ್ಯಕ್ತಿಗಳು ಶ್ರೀಮಂತರಾಗುತ್ತ ಹೋದಂತೆಲ್ಲ ಸಮಾಜ ಬಡವಾಗುತ್ತ ಹೋಗುತ್ತದೆ ಎಂಬ ಸತ್ಯವನ್ನು ಮಹಾನುಭಾವಿ ಬಸವಣ್ಣನವರು ಶರಣಸಂಕುಲಕ್ಕೆ ಅರುಹಿದ್ದರು. ಹೀಗಾಗಿ ಶರಣಸಂಕುಲದ ಶರಣ ಶರಣೆಯರೆಲ್ಲ ಸರ್ವಸಮತ್ವದ ಬದುಕನ್ನು ಅನುಭವಿಸಿದರು. ತಮ್ಮ ಸಂಕುಲವನ್ನು ಅಂದರೆ ಹೊಸ ಸಮಾಜವನ್ನು ಸೃಷ್ಟಿಸುವುದಕ್ಕಾಗಿ ಹೊಸ ಮಾನವರಾಗಿ ರೂಪುಗೊಂಡರು. ತಮ್ಮೊಳಗೆ ಸಕಲಜೀವಾತ್ಮರನ್ನೊಳಗೊಂಡ ಇಡೀ ಸಮಾಜವನ್ನು ತುಂಬಿಕೊಂಡರು. ಆ ಮೂಲಕ ಇಡೀ ಸಮಾಜವೇ ತಾವಾದರು. ಆಗ ಅವರಿಗೆ ವ್ಯಕ್ತಿಗತ ಸಂಪತ್ತಿನ ಶೇಖರಣೆ ಅಸಹ್ಯವೆನಿಸಿತು. ಶಿವನಿಧಿ ಎಂಬ ಸಾಮಾಜಿಕ ನಿಧಿಗೇ ತಮ್ಮಲ್ಲಿರುವ ಹೆಚ್ಚಿನದನ್ನೆಲ್ಲ ಅರ್ಪಿಸುತ್ತಿದ್ದರು.

'ನಿಮ್ಮ ಸೊಮ್ಮಿಂಗೆ ಸಲಿಸುವೆನು' ಎಂದು ಬಸವಣ್ಣನವರು ಹೇಳುವ ಮೂಲಕ ಇಂಥ ಸಾಮಾಜಿಕ ನಿಧಿಯನ್ನು ಸ್ಥಾಪಿಸಿದರು. ಶರಣ ಸಂಕುಲದ ಯಾರಿಗಾದರೂ ಕಷ್ಟನಷ್ಟಗಳು ಎದುರಾದಾಗ ಅವರು ಈ ನಿಧಿಯಿಂದ ಪಡೆಯುತ್ತಿದ್ದರು.

ಇಂಥ ಸಾಮಾಜಿಕ ಭದ್ರತೆಯನ್ನು ಹೊಂದಿದ್ದ ಶರಣರು, ವ್ಯಕ್ತಿಗತ ಶ್ರೀಮಂತಿಕೆ ಮತ್ತು ದುಡಿಯದೇ ಬರುವ ವಸ್ತುಗಳು ಅಸಹ್ಯವೆನಿಸುವಷ್ಟು ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಬೆಳೆದಿದ್ದರು. ಕಸಗುಡಿಸುವ ಕಾಯಕದ ಸತ್ಯಕ್ಕ ಅಂಥವರಲ್ಲಿ ಒಬ್ಬಳು.

ದಲಿತ ವರ್ಗದಿಂದ ಬಂದ ಸತ್ಯಕ್ಕ ವರ್ಗಭೇದ, ಜಾತಿಭೇದ ಮತ್ತು ಲಿಂಗಭೇದಗಳಿಲ್ಲದೆ ಭಾವೈಕ್ಯದಿಂದ ಕೂಡಿದ ಶರಣಸಂಕುಲದಲ್ಲಿ ಹೊಸ ವ್ಯಕ್ತಿತ್ವವನ್ನೇ ಪಡೆದಳು. ಹಂಗಿಲ್ಲದ ಬದುಕಿನ ಶ್ರೇಷ್ಠತೆಯನ್ನು ಅರಿತಳು. ವಸ್ತುಮೋಹಕ್ಕೆ ಹೇಸಿದಳು.

ಭ್ರಷ್ಟಾಚಾರದ ಬದುಕು ಎಲ್ಲ ಕಾಲದಲ್ಲಿಯೂ ಇದೆ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಸಂತರ ಹೆಸರಿನಲ್ಲಿ, ಸಮಾಜದ ಹೆಸರಿನಲ್ಲಿ ಮತ್ತು ಅಧಿಕಾರದ ಹೆಸರಿನಲ್ಲಿ ಭ್ರಷ್ಟಾಚಾರ ತನ್ನ ಕರಾಳ ಸ್ವರೂಪವನ್ನು ತೋರಿಸುತ್ತಲೇ ಇರುತ್ತದೆ. ಜನರು ಎಲ್ಲವನ್ನೂ ಸಹಿಸಿಕೊಳ್ಳುತ್ತ ಜೀವನ ಸಾಗಿಸುತ್ತಿರುತ್ತಾರೆ. ಇದೆಲ್ಲ ಬದುಕಿನ ಭಾಗವೆಂದು ಸಹಿಸಿಕೊಳ್ಳುತ್ತಾರೆ. ಸಮಯ ಬಂದಾಗ ಅನೇಕರು ಅದೇ ದಾರಿಯಲ್ಲಿ ಮುನ್ನಡೆಯುತ್ತಾರೆ. ಆದರೆ ಸತ್ಯಕ್ಕ 'ನಾನು ಅನ್ಯಾಯದ ಧನದಿಂದ ದೂರವಿದ್ದೇನೆ' ಎಂದು ಎದೆತಟ್ಟಿ ಹೇಳುತ್ತಾಳೆ. ಅಷ್ಟೇ ಅಲ್ಲ, ಕಸಗುಡಿಸುವ ಕಾಯಕದ ಸಂದರ್ಭದಲ್ಲಿ ಬೆಲೆಯುಳ್ಳ ವಸ್ತುಗಳಾದ ಬಂಗಾರದ ಆಭರಣ, ರೇಷ್ಮೆವಸ್ತ್ರ ಮುಂತಾದವು ಬೀದಿಯಲ್ಲಿ ಬಿದ್ದಿದ್ದರೂ ಕಾಲಕಸದಂತೆ ನೋಡುತ್ತ, ಅವುಗಳನ್ನು ಮುಟ್ಟುವುದಿಲ್ಲ ಎಂದು ಹೇಳುತ್ತಾಳೆ. ಇವೆಲ್ಲವನ್ನೂ ಪ್ರತಿಜ್ಞಾ ವಿಧಾನದಲ್ಲಿ ತಿಳಿಸುತ್ತಾಳೆ. ತನಗೊಂದು ಪರಂಪರೆ ಇದೆ. ಅದುವೇ ಶರಣರ ಪರಂಪರೆ. ಅಂಥ ಶರಣರ ಆಣೆ ಮಾಡುತ್ತ ದೃಢನಿಶ್ಚಯದಿಂದ ನುಡಿಯುತ್ತಾಳೆ. ತನ್ನ ಕಾಯಕದ ಮೂಲಕವೇ ಬದುಕುವುದಾಗಿ ವಚನ ನೀಡುತ್ತಾಳೆ.

ತನಗೆ ಈ ಶಕ್ತಿ ಹೇಗೆ ಬಂದಿತೆಂಬುದನ್ನು ಕೂಡ ಸತ್ಯಕ್ಕ ಮಾರ್ಮಿಕವಾಗಿ ತಿಳಿಸಿದ್ದಾಳೆ. ಪರಮಾತ್ಮನಲ್ಲಿ ಮತ್ತು ಕಾಯಕದಲ್ಲಿ ಅಚಲ ನಂಬಿಕೆ ಇದ್ದವರಿಗೆ ನಾಳಿನ ಭಯ ಇರುವುದಿಲ್ಲ ಎಂದು ಸೂಚಿಸಿದ್ದಾಳೆ. ನಂಬಿಕೆ ಇಲ್ಲದವರು ದುರ್ಬಲ ಮನದವರಾಗುತ್ತಾರೆ. ಭವಿಷ್ಯದ ಬಗ್ಗೆ ಹೆದರುತ್ತಾರೆ. ಹೇಗಾದರೂ ಮಾಡಿ ಸಂಗ್ರಹಿಸಿಡಬೇಕು ಎಂಬ ಭಾವ ತಾಳುತ್ತಾರೆ. 'ನಾನು ಈ ರೀತಿ ಆಸೆಬುರುಕಿಯಾದರೆ ನನ್ನನ್ನು ನರಕಕ್ಕೆ ಅಟ್ಟಿ ನನ್ನಿಂದ ದೂರ ಹೋಗು' ಎಂದು ದೇವರಿಗೆ ನಿರ್ಭಿಡೆಯಿಂದ ಹೇಳುತ್ತಾಳೆ. ಹಾಗೆ ಹೇಳುವುದರ ಮೂಲಕ ನಮ್ಮೊಳಗಿನ ಆತ್ಮಶಕ್ತಿಯನ್ನು ಜಾಗೃತಗೊಳಿಸುತ್ತಾಳೆ. ಹೀಗೆ ಬಸವಣ್ಣನವರ ಮಾರ್ಗದರ್ಶನದಲ್ಲಿ ನಮ್ಮ ಶರಣರು ಮತ್ತು ಶರಣೆಯರು ಕಾಯಕ ಮತ್ತು ದಾಸೋಹದ ಮೂಲಕ ಆನಂದಮಯವಾದ ಬದುಕನ್ನು ಸಾಗಿಸಿ ನಮಗೆಲ್ಲ ಆದರ್ಶಪ್ರಾಯರಾಗಿದ್ದಾರೆ. ನಾವೆಲ್ಲರೂ ಕಾಯಕದ ಮೂಲಕ ಸುಂದರ ಸಮಾಜ ನಿರ್ಮಾಣ ಮಾಡುವುದು ಅವಶ್ಯವಾಗಿದೆ.

(ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿನ ಪಾಲೊ ಅಲ್ಟೊ ನಗರದಲ್ಲಿ 2012ನೇ ಜುಲೈ 6–8 ರಂದು ನಡೆದ ವೀರಶೈವ ಸಮಾಜ ಆಫ್ ನಾರ್ಥ್ ಅಮೆರಿಕ (ವಿ.ಎಸ್.ಎನ್.ಎ)ದ 35ನೇ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾಡಿದ ಭಾಷಣ.)

○

ಭಾವಪೂರ್ಣ ತತ್ತ್ವನಿಷ್ಠುರಿ ನೀಲಾಂಬಿಕೆ

12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ನಡೆದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಫಲವಾಗಿ ಮಹಿಳೆಯರು ಪುರಷರ ಜೊತೆ ಸಮಾನ ಸ್ಥಾನ ಪಡೆದರು. ಅವರಲ್ಲಿ ಅನೇಕರು ಶರಣೆಯರಾದರು. ವಚನಗಳನ್ನೂ ಬರೆದು ಅಮರರಾದರು. ಅಂಥ ಶರಣೆಯರಲ್ಲಿ ಬಸವಣ್ಣನವರ ಪತ್ನಿ ನೀಲಮ್ಮನವರ ವ್ಯಕ್ತಿತ್ವ ವಿಶಿಷ್ಟವಾಗಿದೆ. ನೀಲಮ್ಮ, ನೀಲಾಂಬಿಕೆ ಮತ್ತು ನೀಲಲೋಚನೆ ಎಂಬ ಹೆಸರುಗಳಿಂದ ನೀಲಮ್ಮ ಪ್ರಸಿದ್ಧಳಾಗಿದ್ದಾಳೆ.

ಬಿಜ್ಜಳನ ಮಂತ್ರಿ ಬಲದೇವ ಮತ್ತು ದಣ್ಣಾಯಕ ಸಿದ್ಧರಸರು ಬಸವಣ್ಣನವರ ತಾಯಿ ಮಾದಲಾಂಬಿಕೆಯ ಸಹೋದರರು. ಬಲದೇವರ ಮಗಳು ಗಂಗಾಂಬಿಕೆ ಮತ್ತು ಸಿದ್ಧರಸರ ಮಗಳು ನೀಲಾಂಬಿಕೆ ಒಡಹುಟ್ಟಿದವರಂತೆ ಬೆಳೆದವರು.ಸಿದ್ಧರಸರ ಪತ್ನಿ ಪದ್ಮಗಂಧಿ. ಬಿಜ್ಜಳನ ತಮ್ಮ ಕರ್ಣದೇವ ಜನಿಸಿದ ಸಂದರ್ಭದಲ್ಲಿ ತಂದೆ ಪೆರ್ಮಾಡಿ ತೀರಿಕೊಂಡ. ಬಿಜ್ಜಳನ ತಾಯಿ ಸತಿಹೋದಳು. ಆಗ ಪದ್ಮಗಂಧಿ ತನ್ನ ಕೂಸು ನೀಲಾಂಬಿಕೆಗೆ ಮತ್ತು ಕರ್ಣದೇವನಿಗೆ ಜೊತೆಯಾಗಿಯೆ ಮೊಲೆಯುನಿಸಿ ಬೆಳೆಸಿದಳು. ಪದ್ಮಗಂಧಿ ಮತ್ತು ಸಿದ್ಧರಸರು ನಿಧನರಾದ ನಂತರ ಬಿಜ್ಜಳ ನೀಲಾಂಬಿಕೆಯನ್ನು ಅರಮನೆಗೆ ಕರೆತಂದು ಬೆಳಿಸಿದ. ಆಕೆಯನ್ನು ಬಿಜ್ಜಳ ತನ್ನ ತಂಗಿಯಂತೆಯೆ ನೋಡಿಕೊಂಡ. ನೀಲಲೋಚನೆ ಸಿದ್ಧರಸನ ಮಗಳು ಮತ್ತು ಬಿಜ್ಜಳನ ಸಾಕುತಂಗಿ ಎಂದು ಸಿಂಗಿರಾಜನು 'ಅಮಲ ಬಸವ ಚಾರಿತ್ರ'ದಲ್ಲಿ ಸೂಚಿಸುತ್ತಾನೆ.

ಬಲದೇವರ ಮಗಳು ಗಂಗಾಂಬಿಕೆಯೊಂದಿಗೆ ಬಸವಣ್ಣನವರ ಮದುವೆಯಾಯಿತು. ನಂತರ ಬಸವಣ್ಣನವರು ನೀಲಾಂಬಿಕೆಯನ್ನು ಮದುವೆಯಾದರು. ಈ ಎರಡನೆಯ ಮದುವೆಗೆ ವಿವಿಧ ಕಾರಣಗಳನ್ನು ಕಲ್ಪಿಸಬಹುದು. ಬಸವಣ್ಣನವರ ದಿವ್ಯ ಪ್ರತಿಭೆಯನ್ನು ಗುರುತಿಸಿದ ಬಿಜ್ಜಳ ತನ್ನ ರಾಜ್ಯದ ಪ್ರಧಾನಿಯಾಗಿ ಮಾಡುವ ಮೊದಲು ಅವರನ್ನು ತನ್ನ ರಕ್ತಸಂಬಂಧಿಯಾಗಿಸಿಕೊಳ್ಳುವುದು ಅನಿವಾರ್ಯ ಎನಿಸಿರಬೇಕು. ಅವರನ್ನು ತನ್ನ ಕರುಳಬಳ್ಳಿಯ ಸಂಬಂಧಿಕರಂತೆ ಮಾಡಿಕೊಳ್ಳುವ ಉದ್ದೇಶದಿಂದ ನೀಲಾಂಬಿಕೆಯನ್ನು ಮದುವೆ ಮಾಡಿ ಕೊಟ್ಟಿರಬಹುದು. ಗಂಗಾಂಬಿಕೆ ಮತ್ತು ನೀಲಾಂಬಿಕೆ ಎರಡು ದೇಹ ಒಂದೇ ಆತ್ಮದಂತೆ ಇದ್ದುದರಿಂದ ನೀಲಾಂಬಿಕೆ ಬಸವಣ್ಣನವರ

ಎರಡನೇ ಪತ್ನಿಯಾಗಿ ಬರುವುದರಲ್ಲಿ ಯಾವುದೇ ಸಮಸ್ಯೆಗಳು ಉಂಟಾಗದಿರಬಹುದು. ನೀಲಾಂಬಿಕೆ ಬಿಜ್ಜಳನ ಅರಮನೆಯಲ್ಲೇ ಬೆಳೆದಳು. ಅರಮನೆಯ ವಾತಾವರಣದಲ್ಲಿ ಯೋಗ, ತತ್ತ್ವಜ್ಞಾನ, ಸಂಗೀತ, ಕಲೆ, ಸಾಹಿತ್ಯ, ಯುದ್ಧಕಲೆ, ರಾಜನೀತಿ ಮುಂತಾದವುಗಳಲ್ಲಿ ಪಾರಂಗತಳಾದ ನೀಲಾಂಬಿಕೆಯನ್ನು ಬಸವಣ್ಣನವರು ಎರಡನೆಯ ಪತ್ನಿಯಾಗಿ ಸ್ವೀಕರಿಸಿರಬಹುದು.ಸರ್ವಸಮತ್ವದ ಮಾನವಧರ್ಮ ದ್ರಷ್ಟಾರ ಬಸವಣ್ಣನವರ ಮಹಾಕ್ರಾಂತಿಯ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿದ್ದ ನೀಲಾಂಬಿಕೆ, ಅವರ ಕನಸನ್ನು ನನಸಾಗಿಸುವುದರ ಮೂಲಕ ಸಹಸ್ರ ಸಹಸ್ರ ಕಾಯಕಜೀವಿಗಳ ಘನತೆಯನ್ನು ಎತ್ತಿಹಿಡಿದು ಎಲ್ಲ ವಿಧವಾದ ಶೋಷಣೆಗಳಿಂದ ಮುಕ್ತವಾದ ಸಮಾಜ ನಿರ್ಮಾಣದ ಉದ್ದೇಶ ಹೊಂದಿದ್ದರು. ಈ ಮಹೋನ್ನತ ಕಾರಣದಿಂದಲೇ ನೀಲಾಂಬಿಕೆಯು ಬಸವಣ್ಣನವರ ವಿಚಾರ ಪತ್ನಿಯಾಗಿ ಬದುಕುತ್ತ ಸರ್ವಶರಣರ ಯೋಗಕ್ಷೇಮ ನೋಡಿಕೊಳ್ಳುವದರೊಂದಿಗೆ ಅಪ್ರತಿಮ ಸಾಧನೆಗೈದರು. ಹೀಗೆ ನೀಲಾಂಬಿಕೆಯ ಘನವ್ಯಕ್ತಿತ್ವವನ್ನು ಅರಿಯುವುದು ಹೆಚ್ಚು ಯೋಗ್ಯವಾಗಿದೆ.

ತಬ್ಬಲಿಯಾದ ನಂತರ ಬಿಜ್ಜಳನ ತಂಗಿಯಂತೆ ಸಲುಗೆಯಿಂದ ಅರಮನೆಯಲ್ಲಿ ಬೆಳೆದನೀಲಾಂಬಿಕೆ ಬಿಜ್ಜಳನ ಜೊತೆ ವಾಗ್ವಾದ ಮಾಡುವ ಹಕ್ಕನ್ನು ಕೂಡ ಹೊಂದಿದವಳಾಗಿದ್ದಳು. ಬಸವಣ್ಣ ಮತ್ತು ಬಿಜ್ಜಳನ ಮಧ್ಯೆ ಬ್ರಾಹ್ಮಣ ಮಂತ್ರಿಗಳು ಭಿನ್ನಾಭಿಪ್ರಾಯ ಮೂಡಿಸುವಲ್ಲಿ ತಲ್ಲೀನರಾದಾಗ ನೀಲಮ್ಮ ಬಿಜ್ಜಳನ ಸಂಶಯ ದೂರು ಮಾಡಿ ಬಸವಣ್ಣನವರ ಲೋಕಹಿತ ಕಾರ್ಯಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಿದ್ದಳು. ವಚನಕಾರರ ಚಳವಳಿ ಮತ್ತು ಬಿಜ್ಜಳನ ರಾಜಸತ್ತೆಯ ಮಧ್ಯೆ ನೀಲಾಂಬಿಕೆಯು ಮಹತ್ವದ ಸಂಯಮಶೀಲ ಪಾತ್ರ ವಹಿಸಿದ್ದರಿಂದಲೇ ಪಟ್ಟಭದ್ರ ಪುರೋಹಿತಶಾಹಿ ಶಕ್ತಿಗಳ ಮತ್ತು ವಚನಕಾರರ ಮಧ್ಯದ ಘರ್ಷಣೆಯ ಪ್ರಸಂಗಗಳು ಮುಂದೂಡುವಂಥ ಪರಿಸ್ಥಿತಿಗಳು ನಿರ್ಮಾಣವಾಗಲು ಸಾಧ್ಯವಾಯಿತು. ಶರಣ ಚಳವಳಿಯ ಪ್ರಮುಖರಲ್ಲಿ ಒಬ್ಬಳಾಗಿದ್ದ ನೀಲಾಂಬಿಕೆ, ಬಿಜ್ಜಳನ'ತಂಗಿ' ಎಂಬ ಹಕ್ಕಿನಿಂದಾಗಿ ಅರಮನೆಯ ಮೇಲೂ ಭಾವನಾತ್ಮಕ ಹಿಡಿತ ಸಾಧಿಸಿದ್ದು ಆಕೆಯ ಘನತೆಗೆ ಹಿಡಿದ ಕನ್ನಡಿಯಾಗಿದೆ.

ಹೀಗೆ ಬಸವಣ್ಣನವರ ಭಕ್ತಿ ಮಾರ್ಗಕ್ಕೆ ನೀಲಮ್ಮ ಆಕರ್ಷಿತಳಾದಳು. ನಂತರ ಅವರ ವಿಚಾರಪತ್ನಿಯಾಗಿ ಎಲ್ಲ ರೀತಿಯಿಂದ ನವಸಮಾಜ ನಿರ್ಮಾಣದಲ್ಲಿ ಪಾಲ್ಗೊಂಡಳು. ನವಸಮಾಜ ಎಂದರೆ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲದ ಸಮಾಜ. ಇದೊಂದು ಅತ್ಯುನ್ನತವಾದ ಸಮಾನತೆಯ ಸಮಾಜವಾಗಿದೆ. ಇಂಥ ಸುಂದರ ಸಮಾಜ ರಚನೆ ಎಲ್ಲಿಯೂ ಆಗಿದ್ದಿಲ್ಲ ಎಂಬುದು ಗಮನಾರ್ಹ.

ಮಹಾಮನೆಯ ದಾಸೋಹದ ಜವಾಬ್ದಾರಿಯನ್ನೂ ನೀಲಾಂಬಿಕೆ ಹೊತ್ತಿದ್ದಳು. ಪ್ರತಿ ಜೀವಿಯಲ್ಲೂ ದೇವರನ್ನು ಕಾಣುವಂಥ ಉನ್ನತ ಮಟ್ಟಕ್ಕೆ ನೀಲಾಂಬಿಕೆ ಬೆಳೆದಳು. ಅನುಭಾವಿ ನೀಲಮ್ಮನ 288 ವಚನಗಳು ಸಿಕ್ಕಿವೆ. 'ಸಂಗಯ್ಯ' ಎಂಬ ವಚನಾಂಕಿತದಿಂದ ನೀಲಮ್ಮ ವಚನಗಳನ್ನು ಬರೆದಿದ್ದಾಳೆ. ಇಲ್ಲಯವರೆಗೆ 35 ವಚನಕಾರ್ತಿಯರ ವಚನಗಳು

ಸಿಕ್ಕಿವೆ. ಅವರಲ್ಲಿಅಕ್ಕಮಹಾದೇವಿಯ ನಂತರ ಅತಿಹೆಚ್ಚು ವಚನಗಳನ್ನು ಬರೆದವಳೆಂದರೆ ನೀಲಾಂಬಿಕೆ ಎಂಬುದು ತಿಳಿದುಬರುತ್ತದೆ.

ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯಿಂದಾಗಿ ಕಲ್ಯಾಣದ ಸನಾತನವಾದಿಗಳು ಶರಣರ ಮೇಲೆ ಕಿಡಿ ಕಾರಿದರು. ಬಸವಣ್ಣನವರು ಮಂತ್ರಿ ಪದವಿ ಬಿಟ್ಟು ಕೂಡಲಸಂಗಮಕ್ಕೆ ಹೋಗಬೇಕಾಯಿತು. ಸನಾತನವಾದಿಗಳಿಂದಾಗಿ ಕಲ್ಯಾಣದಲ್ಲಿ ಭಾರಿ ಕೋಲಾಹಲ ಉಂಟಾಯಿತು. ಶರಣರ ಹೊಸ ಸಮಾಜ ವ್ಯವಸ್ಥೆಯ ವಿರೋಧಿಗಳು ಶರಣರ ವಚನಕಟ್ಟುಗಳನ್ನು ಸುಟ್ಟರು. ಶರಣರ ಮೇಲೆ ಹಲ್ಲೆ ಮಾಡಿದರು. ಈ ಹಲ್ಲೆಯಿಂದಾಗಿ ಅನೇಕ ಶರಣರು ಹುತಾತ್ಮರಾದರು.

ಕೂಡಲಸಂಗಮದಲ್ಲಿದ್ದ ಬಸವಣ್ಣನವರು ಈ ದುರಂತ ಘಟನೆಯ ಬಗ್ಗೆ ಅರಿತು ಬಹಳ ನೊಂದುಕೊಂಡರು.ನೀಲಮ್ಮನವರನ್ನು ಕೂಡಲಸಂಗಮಕ್ಕೆ ಕರೆದುಕೊಂಡು ಬರಲು ಹಡಪದ ಅಪ್ಪಣ್ಣನವರಿಗೆ ತಿಳಿಸಿದರು. ಅಪ್ಪಣ್ಣನವರು ನೀಲಮ್ಮನವರ ಬಳಿಗೆ ಹೋಗಿ ಬಸವಣ್ಣನವರ ಇಚ್ಛೆಯ ಕುರಿತು ವಿವರಿಸಿದರು. ಆಗ ನೀಲಮ್ಮನವರು ಅಲ್ಲಿರುವ ಸಂಗನು ಇಲ್ಲಿಲ್ಲವೆ? ಎಂದು ಹೇಳುವ ಮೂಲಕ ಅನುಭಾವದ ಎತ್ತರಕ್ಕೆ ಏರಿದ್ದು ಕಂಡುಬರುತ್ತದೆ.ಹೀಗೆ ಹೇಳಿದರೂ ನೀಲಮ್ಮನವರು ಕಲ್ಯಾಣದಿಂದ ಕೃಷ್ಣಾ ನದಿಯ ದಡದಲ್ಲಿರುವ ತಂಗಡಗಿಗೆ ಬಂದರು. ಅಷ್ಟರೊಳಗೆ ಆಚೆ ದಡದಲ್ಲಿರುವ ಕೂಡಲಸಂಗಮದಲ್ಲಿ ಬಸವಣ್ಣನವರು ಲಿಂಗೈಕ್ಯರಾಗಿದ್ದರು. ಇದನ್ನರಿತ ನೀಲಮ್ಮನವರು ತಂಗಡಿಯಲ್ಲೇ ಉಳಿದು ಲಿಂಗೈಕ್ಯರಾದರು. ಲಿಂಗೈಕ್ಯರಾಗುವ ಮುಂಚೆ ನೀಲಮ್ಮನವರು ಬಸವಣ್ಣನವರ ಕುರಿತು ಅನೇಕ ಹೃದಯಸ್ಪರ್ಶಿ ವಚನಗಳನ್ನು ಬರೆದಿದ್ದಾರೆ.

ಎನಗೆ ಲಿಂಗವು ನೀವೆ ಬಸವಯ್ಯಾ,
ಎನಗೆ ಸಂಗವು ನೀವೆ ಬಸವಯ್ಯಾ,
ಎನಗೆ ಪ್ರಾಣವು ನೀವೆ ಬಸವಯ್ಯಾ,
ಎನಗೆ ಪ್ರಸಾದವು ನೀವೆ ಬಸವಯ್ಯಾ,
ಎನಗೆ ಪ್ರಭೆಯ ಮೂರ್ತಿಯು ನೀವೆ ಬಸವಯ್ಯಾ,
ಎನಗೆ ಸಂಗಯ್ಯನು ನೀವೆ ಬಸವಯ್ಯಾ.

ಎಂದು ಹೇಳುವ ಮೂಲಕ ಭಾವಪೂರ್ಣ ತತ್ತ್ವನಿಷ್ಠುರಿ ನೀಲಮ್ಮನವರು ಪತಿಬಸವಣ್ಣನವರ ಬಗ್ಗೆ ಅತೀವ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ನೀಲಮ್ಮನವರ ಕುಟುಂಬ ಪ್ರೀತಿ, ಸಮಾಜಪ್ರೀತಿ, ಮಹಾಮನೆಯ ಕಾರ್ಯನಿರ್ವಹಣಾ ಸಾಮರ್ಥ್ಯ ಮತ್ತು ಶಿವಯೋಗಜ್ಞಾನ ಮಹಿಳೆಯರಿಗೆ ಆದರ್ಶಪ್ರಾಯವಾಗಿವೆ.

ಬಸವಣ್ಣನವರ ಮೊದಲ ಪತ್ನಿ ಗಂಗಾಂಬಿಕೆಯ ತ್ಯಾಗ ಕೂಡ ಅಮರವಾಗಿದೆ. ಪತಿಯ ಮಹಾನ್ ಕಾರ್ಯಕ್ಕೆ ಸರ್ವರೀತಿಯಿಂದಲೂ ಯೋಗ್ಯಳಾದ ನೀಲಾಂಬಿಕೆಯನ್ನು ತನ್ನ ಬದುಕಿನ ಭಾಗವಾಗಿ ಸ್ವೀಕರಿಸಿದ್ದು ಗಂಗಾಂಬಿಕೆಯ ಸಾಮಾಜಿಕ ಪ್ರಜ್ಞೆಯ ಪ್ರತೀಕವೂ ಆಗಿದೆ.

ಜಾತಿ ವ್ಯವಸ್ಥೆಗೆ ಸವಾಲಾದ ಶರಣರು

ಬಸವಣ್ಣನವರು 12ನೇ ಶತಮಾನದಲ್ಲಿ ಸ್ಥಾಪಿಸಿದ ಶರಣಸಂಕುಲ ಎಂಬ ನವಸಮಾಜವು ಜಾತಿ, ಮತ, ಕುಲ, ವರ್ಣ, ವರ್ಗ ಮತ್ತು ಲಿಂಗಭೇದಗಳಿಂದ ಮುಕ್ತವಾಗಿತ್ತು. ವಿವಿಧ ಜಾತಿಮೂಲಗಳಿಂದ ಬಂದ ಕಾಯಕಜೀವಿಗಳು ಈ ನವಸಮಾಜದಲ್ಲಿ ಒಂದಾಗಿ ಬದುಕುತ್ತಿದ್ದರು. ಕಾಯಕದೊಳಗಿನ ಜಾತಿಯ ವಿಷವನ್ನು ಹೊರಹಾಕಿದ್ದರಿಂದ ಎಲ್ಲ ಕಾಯಕಗಳಿಗೆ ಸಮಾನ ಗೌರವ ಲಭಿಸಿತ್ತು. ವೈದಿಕರು ಆಚರಿಸುವ ಮನುಧರ್ಮದ ತಾಯಿಬೇರಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಅಲ್ಲಗಳೆದು ಕಾಯಕಸಿದ್ಧಾಂತದ ಮೇಲೆ ಈ ಶರಣಸಂಕುಲದ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಿದರು.

ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದಗಳನ್ನು ಕರ್ಮಸಿದ್ಧಾಂತ ಸಂರಕ್ಷಿಸುತ್ತದೆ. ಪಾಪ ಮತ್ತು ನರಕದ ಭಯ ಮೂಡಿಸುತ್ತದೆ. ಪುಣ್ಯ ಮತ್ತು ಸ್ವರ್ಗದ ಆಸೆ ಹುಟ್ಟಿಸುತ್ತದೆ. ಮೋಕ್ಷ ಮತ್ತು ಪುನರ್ಜನ್ಮಗಳನ್ನು ಪ್ರತಿಪಾದಿಸುತ್ತದೆ. ಇಂಥ ಕರ್ಮಸಿದ್ಧಾಂತದ ಟೊಳ್ಳುತನವನ್ನು ಬಯಲಿಗೆಳೆಯುವ ಮೂಲಕ ಬಸವಣ್ಣನವರು ವೈದಿಕ ಅಥವಾ ಮನುಧರ್ಮದ ಕ್ರೌರ್ಯವನ್ನು ಎತ್ತಿತೋರಿಸಿದರು. ಇಂಥ ಕುತಂತ್ರಗಳಿಂದ ಬ್ರಾಹ್ಮಣರು, ರಾಜರು, ಮೇಲ್ಜಾತಿ ಮತ್ತು ಮೇಲ್ವರ್ಗದವರು 'ಭೂಸುರರು' ಮತ್ತು 'ಮಹಾಜನರು' ಎಂದು ಕರೆಯಿಸಿಕೊಳ್ಳುತ್ತ ಬಂದಿರುವುದನ್ನು ಬಸವಣ್ಣನವರು ಗಮನಿಸಿದರು. ವೈದಿಕ ಧರ್ಮದ ಷಡ್ಯಂತ್ರದ ಮೂಲಕ ಕೆಳಜಾತಿ ಮತ್ತು ಕೆಳವರ್ಗದ ಬಹುಜನರನ್ನು ಶೋಷಣೆಗೆ ಒಳಪಡಿಸಿದ್ದನ್ನು ಬಹಿರಂಗಪಡಿಸಿದರು. ಆ ಮೂಲಕ ಜನರಲ್ಲಿ ಅರಿವು ಮೂಡಿಸುತ್ತ, ವೈದಿಕರು ಸೃಷ್ಟಿಸಿದ ಎಲ್ಲ ರೀತಿಯ ಶೋಷಣೆಯ ಸಂಕೋಲೆಗಳನ್ನು ಕಳಚುವ ಚಳವಳಿಯನ್ನು ಹೂಡಿದರು.

ಕಾಯಕಜೀವಿಗಳ ಬದುಕಿನ ಸನ್ಮಾರ್ಗವಾದ ಬಸವಧರ್ಮದಲ್ಲಿ ಮಂದಿರಗಳಿಲ್ಲ, ಮೂರ್ತಿಗಳಿಲ್ಲ, ಸ್ಥಾವರಲಿಂಗಗಳಿಲ್ಲ, ಮಠಗಳಿಲ್ಲ, ಸ್ವಾಮಿಗಳಿಲ್ಲ, (ಸ್ವಾಮಿಗಳು ಇರಬೇಕಾದುದು ಬಸವ ತತ್ತ್ವ ಪ್ರಚಾರ ಮಾಡುವ ನೀತಿಜಂಗಮರಾಗಿ. ಮಠಗಳು ಪರಿವರ್ತನೆಯಾಗಬೇಕಾದುದು ಮಹಾಮನೆಗಳಾಗಿ.) ಇಷ್ಟಲಿಂಗದ ಮೂಲಕ ಅಗಮ್ಯ,

ಅಗೋಚರ, ಅಪ್ರತಿಮ ಮತ್ತು ಅಪ್ರಮಾಣನಾದ ದೇವರ ಪೂಜೆ ಬಿಟ್ಟರೆ ಇನ್ನಾವ ದೇವರ ಪೂಜೆ ಇಲ್ಲ. ಪ್ರತಿಯೊಬ್ಬರ ಮತ್ತು ಪ್ರತಿಯೊಂದರ ಒಳಗೆ ಇರುವ ಈ ಏಕದೇವನನ್ನು ಹುಡುಕಿಕೊಂಡು ಯಾವ ಕ್ಷೇತ್ರಗಳಿಗೂ ಹೋಗಬೇಕಿಲ್ಲ. ನಮ್ಮೊಳಗಿನ ಅಂತಃಸಾಕ್ಷಿ ಎಂಬ ದೇವರ ಕುರುಹು ಆದ ಇಷ್ಟಲಿಂಗವನ್ನು ಪೂಜಿಸಲು ಯಾವುದೇ ರೀತಿಯ ಖರ್ಚು ಮಾಡಬೇಕಿಲ್ಲ. ಯಾವುದೇ ಅಭಿಷೇಕಗಳೂ ಇದಕ್ಕಿಲ್ಲ. ಹೋಮ, ಹವನ, ಯಜ್ಞ, ಯಾಗಾದಿಗಳ ಮಾತೇ ಇಲ್ಲ. ಹರಕೆ ಹೊರುವ ಸಮಸ್ಯೆ ಇಲ್ಲ. ನಿಜವಾದ ಅರ್ಥದಲ್ಲಿ ಇಷ್ಟಲಿಂಗ ಪೂಜೆ ಎಂಬುದು ನಮ್ಮೊಳಗಿನ ಅಂತಃಸಾಕ್ಷಿ ಎಂಬ ಘನದ ಜೊತೆ ಬೆರೆಯುವುದೇ ಆಗಿದೆ. ಈ ಮಂಗಳಕರವಾದ ಕೂಡುವಿಕೆಗೆ 'ಶಿವಯೋಗ' ಎಂದೂ ಕರೆಯುತ್ತಾರೆ. 'ಶಿವ' ಎಂದರೆ ಮಂಗಳಕರವಾದುದು. 'ಯೋಗ' ಎಂದರೆ ಕೂಡುವುದು.

ಒಂದು ದೃಷ್ಟಿಯಿಂದ ಬಸವಧರ್ಮವು ಯೋಗಧರ್ಮವೇ ಆಗಿದೆ. ಇಲ್ಲಿ ಎರಡು ರೀತಿಯ ಕೂಡುವಿಕೆಗಳಿವೆ. ಮೊದಲನೆಯದಾಗಿ ಅಂತರಂಗದಲ್ಲಿ, ಸಕಲಜೀವಾತ್ಮರಿಗೆ ಲೇಸನೆ ಬಯಸುವ ಅಂತಃಸಾಕ್ಷಿಯ ಜೊತೆ ಕೂಡಿದರೆ. ಎರಡನೆಯದಾಗಿ ಬಹಿರಂಗದಲ್ಲಿ ಸಕಲಜೀವಾತ್ಮರ ಜೊತೆ ಕೂಡುವುದು. ಆ ಮೂಲಕ ಜಗತ್ತಿನಲ್ಲಿ ಸರ್ವ ಜೀವಿಗಳು ಬದುಕಲು ಯೋಗ್ಯವಾಗುವಂಥ ವಾತಾವರಣ ಸೃಷ್ಟಿಸುವುದು. ಹೀಗೆ ಇದು ಸಮಾಜಮುಖಿ ಯೋಗಧರ್ಮವಾಗಿದೆ.

ಸರ್ವಸಮತ್ವದಿಂದ ಕೂಡಿದ ಶರಣಸಂಕುಲದಲ್ಲಿ ಸಂಸ್ಕಾರ, ಸಂಸ್ಕೃತಿ, ಸಮಾಜ, ಅರ್ಥವ್ಯವಸ್ಥೆ, ಧರ್ಮದ ಮಾನವೀಯ ಸ್ಪಂದನ, ಅನುಭಾವದ ನೆಲೆ, ಕಾಯಕದ ಬೆಲೆ ಮುಂತಾದವುಗಳೆಲ್ಲ ಸರ್ವರಿಗೂ ಒಂದೇ ತೆರನಾಗಿದ್ದವು. ಇಲ್ಲಿ ಎಲ್ಲರೂ ಶರಣರು, ಅಂದರೆ ನವಮಾನವರು. ಎಲ್ಲ ರೀತಿಯ ಅಸಮಾನತೆಯಿಂದ ಮುಕ್ತರಾಗಿ ಹೊಸ ಬಾಳಿಗೆ ಬೆಳಕಾದವರು. ಇಂಥ ಬದುಕುವ ವಿಧಾನವನ್ನು ಕಂಡುಹಿಡಿದ ಬಸವಣ್ಣನವರ ಅನುಭಾವ ಸಮಾನತೆಯ ಮೇಲೆ ನಿಂತಿದ್ದರೆ, ವೈದಿಕರ ಅಧ್ಯಾತ್ಮವೆಂಬುದು ಅಸಮಾನತೆಯ ಮೇಲೆ ನಿಂತಿದೆ. ಬಸವಣ್ಣನವರ ಕಾಯಕಧರ್ಮ ಅಂತಃಕರಣದಿಂದ ಕೂಡಿದ ಸಮಷ್ಟಿಪ್ರಜ್ಞೆಯ ಕಡೆಗೆ ಒಯ್ದರೆ, ವೈದಿಕರ ಮನುಧರ್ಮ ಅಹಂಕಾರದಿಂದ ಕೂಡಿದ ವ್ಯಷ್ಟಿ ಪ್ರಜ್ಞೆಯ ಕಡೆಗೆ ಒಯ್ಯುತ್ತದೆ.

ಎಲ್ಲಿಯೂ ಒಂದಾಗದಂಥ ಈ ಎರಡು ಧರ್ಮಮಾರ್ಗಗಳನ್ನು ಕೂಡಿಸುವ ಪ್ರಯತ್ನ ಮಾಡುವವರು ನಿಜವಾದ ಅರ್ಥದಲ್ಲಿ ಬಸವಧರ್ಮವನ್ನು ಮನುಧರ್ಮದ ಕೂಪದಲ್ಲಿ ಎಸೆಯುವ ಉದ್ದೇಶವನ್ನೇ ಹೊಂದಿರುತ್ತಾರೆ. ಈ ಪಿತೂರಿಯನ್ನು ತಡೆಯಬೇಕಾದರೆ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕಾಯಕಜೀವಿಗಳ ಚಳವಳಿಯನ್ನು ಮರುಮೌಲ್ಯೀಕರಣಕ್ಕೆ ಒಳಪಡಿಸುವುದು ಈ ಕಾಲದ ತುರ್ತು ಅಗತ್ಯವಾಗಿದೆ. ಕಾಯಕಜೀವಿಗಳ ಚಳವಳಿಯು ನೇರವಾಗಿ ಜಾತಿವಿರೋಧಿ ಚಳವಳಿಯೇ ಆಗಿದೆ. ಆ ಮೂಲಕ ಎಲ್ಲ ರೀತಿಯ ಶೋಷಣೆಯನ್ನು ವಿರೋಧಿಸುತ್ತ ಕಾಯಕದ ಗೌರವವನ್ನು ಕಾಪಾಡುವಂಥದ್ದಾಗಿದೆ.

ವೈದಿಕರು ವಿವಿಧ ಕಾಯಕಗಳನ್ನು ಮುಂದೆ ಮಾಡಿ ಮೇಲು ಕೀಳು ಭಾವನೆಯ ಜಾತಿಗಳನ್ನು ಸೃಷ್ಟಿಸಿದರು. ಪ್ರತಿಯೊಬ್ಬರು ತಮ್ಮ ತಮ್ಮ ಕಾಯಕಗಳಿಗೇ ಅಂಟಿಕೊಂಡಿರುವಂತೆ ಮಾಡಿದರು. ಆ ಮೂಲಕ ಈ ಶ್ರೇಣೀಕೃತ ಸಮಾಜ ಸದಾ ಯಥಾಸ್ಥಿತಿಯಲ್ಲೇ ಮುಂದುವರಿಯುವಂತೆ ನೋಡಿಕೊಂಡರು. ಜನರು ಕಾಯಕಗಳಲ್ಲಿ ಅಷ್ಟೇ ಅಲ್ಲದೆ ನೂರೆಂಟು ದೇವರುಗಳಲ್ಲಿ ಹರಿದು ಹಂಚಿ ಹೋಗುವಂಥ ಬಹುದೇವೋಪಾಸನಾ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಬಡವರ ದೇವರುಗಳು ಮತ್ತು ಶ್ರೀಮಂತರ ದೇವರುಗಳೆಂಬ ಭೇದವನ್ನು ತೋರ್ಪಡಿಸಿದರು. ವೈದಿಕರ ಶಿಷ್ಟದೇವತೆಗಳಿಗೆ ಶೂದ್ರರ ಕ್ಷುದ್ರ ದೇವತೆಗಳು ಬಿಟ್ಟಿ ಕೂಲಿ ಮಾಡುವ ಆಳುಗಳಾದವು. ಹೀಗೆ ಶೂದ್ರರು, ಅತಿಶೂದ್ರರು ಮತ್ತು ಅವರ ದೇವತೆಗಳೆಲ್ಲ ಸೇರಿ ಒಂದು ಬೃಹತ್ ಶೋಷಿತ ವರ್ಗವಾಗಿ ರೂಪುಗೊಂಡರು. ಬಹುಜನರಿಂದ ಕೂಡಿದ ಈ ಉತ್ಪಾದಕ ವರ್ಗಕ್ಕೆ ಶೂದ್ರ ವರ್ಣ ಎಂದು ಕರೆಯಲಾಯಿತು. ಅಲ್ಪ ಜನರಿಂದ ಕೂಡಿದ ಅನುತ್ಪಾದಕ ವರ್ಗದಲ್ಲಿ ಮೂರು ವರ್ಣಗಳು ರಾರಾಜಿಸಿದವು. ಶೂದ್ರರನ್ನು ಅಕ್ಷರ ವಂಚಿತರನ್ನಾಗಿಸಿ, ಓದುತ್ತ ಬರೆಯುತ್ತ ಕಾಲ ಕಳೆಯುವ ಬ್ರಾಹ್ಮಣ ವರ್ಣ, ಕೊಲ್ಲುವುದು ಮತ್ತು ಸಾಯುವುದನ್ನೇ ನಂಬಿದ್ದ ಕ್ಷತ್ರಿಯ ವರ್ಣ ಹಾಗೂ ಕೊಳ್ಳುವುದು ಮತ್ತು ಮಾರುವುದರ ಮೇಲೆ ಅವಲಂಬಿತವಾದ ವೈಶ್ಯವರ್ಣದ ಜನರು ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸಲಿಲ್ಲ. ಆದರೆ ಬಹುಜನರಾದ ಶೂದ್ರರು ಈ ಮೂರೂ ವರ್ಣದವರಿಗೆ ಅವಶ್ಯಕವಾದ ಎಲ್ಲ ವಸ್ತುಗಳನ್ನು ಉತ್ಪಾದಿಸುವುದರಲ್ಲೇ ಬದುಕನ್ನು ಸವೆಸಿದರು. ಈ ದುಡಿಯುವ ಜನ ಯಾವುದೇ ತೆರನಾದ ಐಶಾರಾಮಿ ಜೀವನವನ್ನು ಸಾಗಿಸಲಿಲ್ಲ. ದುಡಿಯುವುದೇ ಅವರ ಸ್ವಾತಂತ್ರ್ಯವಾಗಿತ್ತು! ಆ ದುಡಿಯದೆ ಇರುವ ಮೇಲಿನ ಮೂರು ವರ್ಣಗಳ ಜನ ಐಶಾರಾಮಿ ಜೀವನವಿಧಾನವನ್ನು ತಮ್ಮದಾಗಿಸಿಕೊಂಡಿದ್ದರು.

ಈ ಅನುತ್ಪಾದಕ ವರ್ಣದವರಿಗೆ ಜನಿವಾರ ಇದೆ. ಆದರೆ ಉತ್ಪಾದನೆಯಲ್ಲಿ ತೊಡಗಿ ಬಡತನದಲ್ಲೇ ಜೀವ ಸವೆಸುವ ಬಹುಜನರಾದ ಶೂದ್ರರಿಗೆ ಜನಿವಾರ ಇಲ್ಲ. ಇಡೀ ವ್ಯವಸ್ಥೆಯೊಳಗಿನ ವರ್ಣಭೇದ ನೀತಿಯ ಸಂಕೇತವಾಗಿ ಜನಿವಾರವೆಂಬ ದಾರ ಇರುವುದು ವಿಚಿತ್ರ ಆದರೆ ಸತ್ಯ. ಬಸವಣ್ಣನವರು ಜನಿವಾರಕ್ಕೆ 'ನೇಣು' ಎಂದು ಕರೆದಿದ್ದಾರೆ. ಇಡೀಶೂದ್ರ ಜನಾಂಗದ ವ್ಯಕ್ತಿತ್ವಕ್ಕೆ ಈ ಜನಿವಾರ ನೇಣಾಗಿ ಪರಿಣಮಿಸಿದ್ದನ್ನು ಬಸವಣ್ಣನವರು ಗುರುತಿಸಿ ಎಂಟು ಶತಮಾನಗಳು ಗತಿಸಿದರೂ ಸಮಾಜದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿಲ್ಲ. ಬದುಕಿನ ಎಲ್ಲ ರಂಗಗಳಲ್ಲೂ ಜಾತಿಗಳದ್ದೇ ಪ್ರಾಬಲ್ಯ ಎದ್ದು ಕಾಣುತ್ತಿದೆ. ಕೆಳಜಾತಿಗಳವರು ಶೋಷಣೆಯಿಂದ ಹೊರಬರಲು ತಮ್ಮ ಜಾತಿಗಳ ಮೊರೆ ಹೊಕ್ಕರೆ, ಮೇಲ್ಜಾತಿಯವರು ಶೋಷಣೆಯನ್ನು ಗಟ್ಟಿಗೊಳಿಸುವುದಕ್ಕಾಗಿ ಜಾತಿ ವ್ಯವಸ್ಥೆಯನ್ನು ಕಾಪಾಡುತ್ತಿದ್ದಾರೆ.

ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಮಹಾಮಾನವತಾವಾದಿ ಬಸವಣ್ಣನವರಿಗೆ ಅಗ್ರಹಾರದೊಳಗಿನ ಜೀವನವಿಧಾನದ ನೇರ ಅನುಭವವಿತ್ತು. ಸೂಕ್ಷ್ಮಮತಿಗಳಾದ

ಬಸವಣ್ಣನವರು ಶೋಷಣೆಯ ವಿವಿಧ ಮೂಲಗಳನ್ನು ಅರಿತುಕೊಂಡು ಬಹಳ ಎಚ್ಚರಿಕೆಯಿಂದ ಈ ಕಾಯಕಜೀವಿಗಳ ಚಳವಳಿಯನ್ನು ಆರಂಭಿಸಿದರು. ಜಾತಿಗಳನ್ನು ಸಂಕರಗೊಳಿಸಿ ಕಾಯಕಜೀವಿಗಳನ್ನು ದುಡಿಯುವ ವರ್ಗವಾಗಿ ಸಂಘಟಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ.

ಶೋಷಿತ ಜಾತಿಗಳನ್ನು ಕೂಡಿಸಿ ವರ್ಗವಾಗಿ ಪರಿವರ್ತನೆಗೊಳಿಸುವ ಬಸವಸೂತ್ರವನ್ನು ಶೂದ್ರರು ಮತ್ತು ಅತಿಶೂದ್ರರು ಅರ್ಥ ಮಾಡಿಕೊಳ್ಳದೆ ಇರುವುದು ಐತಿಹಾಸಿಕ ದುರಂತವಾಗಿದೆ. ಪಂಚಮ ವರ್ಣ ಎಂಬುದು ಇಲ್ಲ. 'ಚಾತುರ್ವರ್ಣಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಆತ್ಮಗೌರವಕ್ಕಾಗಿ ವೈದಿಕದ ಕ್ರೌರ್ಯದ ವಿರುದ್ಧ ಹೋರಾಡಿದ ಶೂದ್ರರನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿ ಅಸ್ಪೃಶ್ಯರನ್ನಾಗಿಸಲಾಯಿತು. ಹಾಗೆ ಬಹಿಷ್ಕಾರಕ್ಕೊಳಗಾದವರನ್ನು ಪಂಚಮರೆಂದು ಕರೆಯಲಾಯಿತು. ಈ ಪಂಚಮರೇ ಅತಿಶೂದ್ರರು. ಅನ್ಯಾಯದ ಸಾಮಾಜಿಕ ಬಹಿಷ್ಕಾರ ಅವರ ಪೀಳಿಗೆಗೆ ಮುಂದವರಿಯುತ್ತ ಸಾಗಿದ್ದರಿಂದಲೇ ಅಸ್ಪೃಶ್ಯ ಜಾತಿಗಳು ಹುಟ್ಟಿಕೊಂಡವು. ಬಸವಣ್ಣನವರ ಚಳವಳಿ ಎಂದರೆ ಶೂದ್ರರು ಮತ್ತು ಅತಿಶೂದ್ರರು ಒಗ್ಗಟ್ಟಾಗಿ ಮಾಡಿದ ಚಳವಳಿ ಎಂಬ ಸತ್ಯವನ್ನು ಅರಿತು ಸುಲಿಗೆ ಇಲ್ಲದ ಜಾತ್ಯತೀತ ಸಮಾಜ ನಿರ್ಮಾಣ ಮಾಡುವುದು ಮಾನವತಾವಾದಿಗಳ ಕರ್ತವ್ಯವಾಗಿದೆ.

ಯುರೋಪಿನಲ್ಲಿ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿದ್ದು 13ನೇ ಶತಮಾನದಲ್ಲಿ. 18ನೇ ಶತಮಾನದಲ್ಲಿ ಆರಂಭವಾದ ಔದ್ಯೋಗಿಕ ಕ್ರಾಂತಿಯ ನಂತರ ಸಂಘಟಿತ ದುಡಿಯುವ ವರ್ಗ ರೂಪುಗೊಂಡಿತು. ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡ್ರಿಕ್ ಎಂಗೆಲ್ಸ್ ಅವರು ಕಾಯಕಜೀವಿಗಳ ತತ್ತ್ವಜ್ಞಾನವನ್ನು ವೈಜ್ಞಾನಿಕವಾಗಿ ಬರೆದದ್ದು 19ನೇ ಶತಮಾನದಲ್ಲಿ. ದುಡಿಯುವ ಜನರ ಗಮನಾರ್ಹ ಚಳವಳಿಗಳು ಆರಂಭವಾದದ್ದು ಕೂಡ 19ನೇ ಶತಮಾನದಲ್ಲೇ. ಈ ಹಿನ್ನೆಲೆಯಲ್ಲಿ ಬಸವಣ್ಣನವರು ಜಗತ್ತಿನಲ್ಲಿ ಕಾಯಕಜೀವಿಗಳ ಮೊದಲ ಸಂಘಟಕ ಎಂಬ ಕೀರ್ತಿಗೆ ಭಾಜನರಾಗುತ್ತಾರೆ.

ಈ ಕಾಯಕಜೀವಿಗಳ ಸಂಘಟನೆ ವಿವಿಧ ಆಯಾಮಗಳಿಂದ ಕೂಡಿದ್ದಾಗಿದೆ. ಜಾತಿಸಂಕರದಿಂದ ಸಮಾನ ಹಕ್ಕುಗಳನ್ನು ಪಡೆಯುವ ಮೂಲಕ ಬರುವ ಗಣ ಪ್ರಜ್ಞೆ, ವಿವಿಧ ಕಾಯಕಜೀವಿಗಳ ಸಮೂಹ ನಾಯಕತ್ವದ ಮೂಲಕ ಬರುವ ಅಮರಗಣ ಪ್ರಜ್ಞೆ, ಸುಖ ದುಃಖಗಳಲ್ಲಿ ಜನಸಮುದಾಯ ಒಂದಾಗಿರುವಂತೆ ನೋಡಿಕೊಳ್ಳುವಂಥ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುವಂಥ ಏಕದೇವ ಪ್ರಜ್ಞೆ, ಜ್ಞಾನ ವಿಸ್ತಾರದ ಅಕ್ಷರ ಪ್ರಜ್ಞೆ, ಸ್ತ್ರೀಪುರುಷ ಸಮಾನತಾ ಪ್ರಜ್ಞೆ, ಕಾಯಕ ಪ್ರಜ್ಞೆ, ಪ್ರಸಾದ ಪ್ರಜ್ಞೆ ಮತ್ತು ದಾಸೋಹ ಪ್ರಜ್ಞೆಯಿಂದಾಗಿ ಶರಣಸಂಕುಲದ ಕಾಯಕಜೀವಿಗಳಿಗೆ ಹೊಸ ಜೀವನವಿಧಾನದ ದರ್ಶನವಾಯಿತು.'ಅಸ್ಪೃಶ್ಯ ಮತ್ತು ಬಡ ಹಿಂದುಳಿದ ಜಾತಿಗಳಲ್ಲಿ ಜನ್ಮತಾಳುವುದು ಅಪಮಾನಕರ' ಎಂಬ ವಾತಾವರಣವನ್ನು ಬದಲಿಸುವುದರ ಮೂಲಕ

ಬಡವರೊಳಗೆ ಸ್ವಾಭಿಮಾನ ಮೂಡಿಸುವಲ್ಲಿ ಬಸವಣ್ಣನವರು ಸಫಲರಾದರು. 'ಮನೆ ನೋಡಾ ಬಡವರು ಮನ ನೋಡಾ ಘನ... ... ಕೂಡಲಸಂಗನ ಶರಣರು ಸ್ವತಂತ್ರಧೀರರು' ಎಂದು ಹೇಳುತ್ತ, ದುಡಿದು ತಿನ್ನುವ ವರ್ಗವೇ ಆತ್ಮಗೌರವವುಳ್ಳ ವರ್ಗ ಎಂಬುದನ್ನು ಪ್ರತಿಪಾದಿಸಿದರು. ಅಪಮಾನಕ್ಕೊಳಗಾಗಬೇಕಾದವರು ಇತರರನ್ನು ಕೀಳಾಗಿ ನೋಡುವವರು ಮತ್ತು ಶೋಷಕರು ಎಂಬ ಸತ್ಯವನ್ನು ಜನಸಮುದಾಯ ಅರಿಯುವಂತೆ ಮಾಡಿದರು.

ತಮ್ಮ ಕಾಯಕದಿಂದ ಬರುವ ಜೀವನಾನುಭವದ ಮೂಲಕ ಅನುಭಾವದ ಎತ್ತರಕ್ಕೇರಿ ವಚನ ರಚನೆ ಮಾಡಿದ ಶರಣರು ವಿಶಿಷ್ಟವಾದ ಕಾಯಕಜೀವಿಗಳಾಗಿ ಕಂಗೊಳಿಸುತ್ತಾರೆ. ಎಲ್ಲ ರೀತಿಯಿಂದಲೂ ಹೊಸ ಸಾಮಾಜಿಕ ವ್ಯವಸ್ಥೆಯನ್ನು ಪಡೆದ ಶರಣರ ನವಮಾನವಧರ್ಮ ಪಾಲನೆಗೆ ಅಂತಃಕರಣವೇ ಮಾರ್ಗದರ್ಶಿಯಾಗಿತ್ತು. ಕಾಯಕದ ಅನುಭವದಿಂದ ಅನುಭಾವದ ಮಟ್ಟಕ್ಕೆ ಏರುವ ಇಂಥ ಶರಣಸಂಕುಲದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಬಸವಣ್ಣನವರು'ಅನುಭವ ಮಂಟಪ'ವನ್ನು ರಚಿಸಿದ್ದರು. ಅದಕ್ಕೆ ಕೆಳವರ್ಗದ ನಾಯಕತ್ವ ನೀಡಿದ್ದರು. ಆ ಅನುಭವ ಮಂಟಪದಲ್ಲಿ ವಿವಿಧ ಕಾಯಕ ಮತ್ತು ಸಾಮಾಜಿಕ ಸ್ತರಗಳಿಂದ ಬಂದ 770 ಪ್ರತಿನಿಧಿಗಳು (ಅಮರಗಣಂಗಳು) ಇದ್ದರು. ದುಡಿಯುವ ವರ್ಗದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೊದಲ ತಾಣವಾದ ಅನುಭವ ಮಂಟಪದಲ್ಲಿ ನಡೆಯುವ ಚರ್ಚೆಗಳಲ್ಲಿ ಮಹಿಳಾ ಪ್ರತಿನಿಧಿಗಳು ಮತ್ತು ಯುವಕರು ಕೂಡ ಭಾಗವಹಿಸುತ್ತಿದ್ದರು. ವೈದಿಕರು ಹಿರಿತನಕ್ಕೆ ಮಹತ್ವ ಕೊಡುತ್ತ ಅವರ ಕಂದಾಚಾರವನ್ನೇ ಮುಂದಿನ ಪೀಳಿಗೆ ಪಾಲಿಸಬೇಕು ಎಂಬ ಕಟ್ಟಳೆಗಳನ್ನು ಹಾಕುತ್ತಿದ್ದರು. ಆದರೆ 'ಅಜಕೋಟಿ ವರ್ಷದವರೆಲ್ಲ ಹಿರಿಯರೆ' ಎಂದು ಶರಣರಲ್ಲಿ ಚಿಕ್ಕವಯಸ್ಸಿನ ಅವಿರಳ ಜ್ಞಾನಿ ಚನ್ನಬಸವಣ್ಣನವರು ಪ್ರಶ್ನಿಸಿದರು. ವಯಸ್ಸಿನ ಬದಲಿಗೆ ಅರಿವು ಪ್ರಧಾನವಾದ ವ್ಯವಸ್ಥೆಗೆ ಅನುಭವ ಮಂಟಪ ನಾಂದಿಯಾಯಿತು.

ಈ ಅನುಭವ ಮಂಟಪ ಆಧುನಿಕ ಸಂಸತ್ತಿನ ರೂಪುರೇಷೆಗಳನ್ನು ಒಳಗೊಂಡಿದೆ. ಅನುಭವ ಮಂಟಪದ ಶೂನ್ಯಸಿಂಹಾಸನವನ್ನೇರಿದ ಅಲ್ಲಮಪ್ರಭುಗಳು ಲೋಕಸಭಾಧ್ಯಕ್ಷರಂತೆ ಕಾಣುತ್ತಾರೆ. ಸಮಾಜದ ವಿವಿಧ ಸ್ತರಗಳಿಂದ ಬಂದ ಅಮರಗಣಂಗಳು ಸಂಸತ್ ಸದಸ್ಯರ ಹಾಗೆ ಇದ್ದಾರೆ. ಅಮರಗಣಂಗಳಿಗೆ ಸಿಕ್ಕ ಪ್ರಾತಿನಿಧ್ಯದ ಹಿನ್ನೆಲೆಯಲ್ಲಿ, ಅವರು ಮನುವಾದಿ ಸಮಾಜದಲ್ಲಿ ಅನುಭವಿಸಿದ ಜಾತಿಗಳ ನೋವಿನ ಪರಿಗಣನೆ ಇದೆ. ಹೀಗಾಗಿ ಮಂಡಲ್ ಆಯೋಗದ ತರ್ಕವೂ ಇಲ್ಲಿದೆ. ವಯಸ್ಕರ ಶಿಕ್ಷಣ ಪದ್ಧತಿಯನ್ನು ಬಸವಣ್ಣನವರು ಆರಂಭಿಸಿದ್ದರು ಎಂಬುದಕ್ಕೆ ಬಹುಪಾಲು ಅಮರಗಣಂಗಳು ವಯಸ್ಕರಾದ ಮೇಲೆ ಅಕ್ಷರ ಕಲಿತದ್ದೇ ಸಾಕ್ಷಿ. ಅದೇ ರೀತಿಯಲ್ಲಿ ಮಹಿಳೆಯರು ಮತ್ತು ದಲಿತರಿಗೂ ಶಿಕ್ಷಣದ ವ್ಯವಸ್ಥೆ ಮಾಡಲಾಗಿತ್ತು. ಈ ಪ್ರಯತ್ನದ ಫಲವಾಗಿ ಅವರೆಲ್ಲ ವಚನಗಳನ್ನು ಬರೆದರು. ವಚನಕಾರರಲ್ಲಿ ಬಹುಪಾಲು ಮಂದಿ ಕೆಳಜಾತಿಗಳಿಂದಲೇ ಬಂದವರಾಗಿದ್ದಾರೆ. ಇದು ಕೂಡ ಭಾರತದಲ್ಲಿ

ನಡೆದ ವಿಶಿಷ್ಟ ಪ್ರಯೋಗವೇ ಆಗಿದೆ. ಕನ್ನಡದಲ್ಲಿ ಹಿಂದುಳಿದ ಜಾತಿಗಳಿಂದ ಬಂದ ವಚನಕಾರರು ವಿಶ್ವಮಾನ್ಯವಾದ ಸಾಹಿತ್ಯ ರಚನೆ ಮಾಡುವ ಸಂದರ್ಭದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಸಾಹಿತ್ಯ ರಚನೆಯಾಗಿದ್ದಿಲ್ಲ ಎಂಬುದು ಗಮನಾರ್ಹವಾಗಿದೆ.

ಒಂದು ಸಮಾಜವನ್ನು ಸುವ್ಯವಸ್ಥಿತವಾಗಿ ನಿಯಂತ್ರಿಸಲು ಪ್ರಭುತ್ವಕ್ಕೆ ಸಂವಿಧಾನದ ಅವಶ್ಯಕತೆ ಇದೆ. ಜಗತ್ತಿನ ಯಾವ ಮೂಲೆಯಲ್ಲೂ ಸಂವಿಧಾನ ಸೃಷ್ಟಿಯಾಗದ ಸಂದರ್ಭದಲ್ಲಿ ವಚನಕಾರರ ವಚನಗಳು ನವಸಮಾಜದ ಸಂವಿಧಾನದ ಅಂಶಗಳಂತೆ ಕಾಣುತ್ತವೆ. 1215ರಲ್ಲಿ ಇಂಗ್ಲಂಡ್‌ನಲ್ಲಿ ಕಿಂಗ್ ಜಾನ್ ಮತ್ತು ಜಮೀನುದಾರರ ಮಧ್ಯೆ ಒಪ್ಪಂದ ಏರ್ಪಟ್ಟಿತು. ರಾಜನ ಅಧಿಕಾರವನ್ನು ಮೊಟಕುಗೊಳಿಸಿದಂಥ ವಿಶ್ವದ ಈ ಮೊದಲ ಒಪ್ಪಂದಕ್ಕೆ ಮ್ಯಾಗ್ನಾಕಾರ್ಟಾ (ಮಹಾ ಒಪ್ಪಂದ) ಎಂದು ಕರೆಯುತ್ತಾರೆ. 13ನೇ ಶತಮಾನದ ಈ ಒಪ್ಪಂದ 'ಜಗತ್ತಿನ ಸಂವಿಧಾನಗಳ ತಾಯಿ' ಎಂದು ಸಂವಿಧಾನ ತಜ್ಞರು ಭಾವಿಸಿದ್ದಾರೆ. ಆದರೆ ನಮ್ಮ ಶರಣರು 12ನೇ ಶತಮಾನದಲ್ಲೇ ಬರೆದ ವಚನಗಳು ಸಂವಿಧಾನದ ಅಂಶಗಳಿಂದ ಮತ್ತು ಮಾನವ ಹಕ್ಕುಗಳಿಂದ ತುಂಬಿವೆ ಎಂಬುದನ್ನು ಅರಿತುಕೊಳ್ಳುವಲ್ಲಿ ಮತ್ತು ಜಗತ್ತಿಗೆ ತಿಳಿಸುವಲ್ಲಿ ನಾವು ಸೋತಿದ್ದೇವೆ.

ಪ್ರಜಾಪ್ರಭುತ್ವ ನಿರ್ಮಾಣದಲ್ಲಿ ಜನಭಾಷೆಯನ್ನು ಆಡಳಿತದ ಭಾಷೆಯನ್ನಾಗಿಸುವುದು ಅವಶ್ಯವಾಗಿದೆ. ಯಾವ ಭಾಷೆಯೂ ದೇವಭಾಷೆಯಾಗಿರುವುದಿಲ್ಲ. ಅಂಥ ಭ್ರಮೆಯನ್ನು ಸೃಷ್ಟಿಸುವುದರ ಮೂಲಕ ಆಳುವ ವರ್ಗ ತನ್ನ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುತ್ತದೆ. ತನ್ನ ಭಾಷೆಯಲ್ಲೇ ಧರ್ಮಶಾಸ್ತ್ರ ಸೃಷ್ಟಿಸುತ್ತದೆ. ಆಗ ದುಡಿಯುವ ವರ್ಗಕ್ಕೆ ಧರ್ಮ ಮತ್ತು ಆಡಳಿತದ ಲಾಭಗಳು ಕನ್ನಡಿಯ ಗಂಟುಗಳಾಗಿ ಉಳಿಯುತ್ತವೆ. ವೈದಿಕರು ಸಂಸ್ಕೃತ ದೇವಭಾಷೆ ಎಂಬ ಭ್ರಮೆ ಹುಟ್ಟಿಸಿದರು. ಧರ್ಮವನ್ನು ಆ ಭಾಷೆಯಲ್ಲೇ ಹೆಣೆದರು. ಅದೇ ಭಾಷೆಯಲ್ಲಿ ಆಡಳಿತದ ಜಾಲವನ್ನು ಸೃಷ್ಟಿಸಿದರು. ಜನಭಾಷೆಗಳನ್ನು ಕೀಳಾಗಿ ಕಂಡರು. ದುಡಿಯುವ ವರ್ಗಕ್ಕೆ ಸಂಸ್ಕೃತ ಭಾಷೆ ನಿಲುಕದಂತೆ ನೋಡಿಕೊಂಡರು. ಹೀಗಾಗಿ ಶೂದ್ರರು ಆಡಳಿತ ವ್ಯವಸ್ಥೆಯಿಂದ ಮತ್ತು ಧರ್ಮದಿಂದ ವಂಚಿತರಾಗಿ ಸುಲಿಗೆಗೆ ಒಳಗಾಗುವುದೇ ತಮ್ಮ ಕರ್ಮ ಎಂದುಕೊಂಡರು. ಬುದ್ಧನ ಹಾಗೆ ಬಸವಣ್ಣನವರಿಗೂ ಈ ಭಾಷಾಮೋಸದ ಅರಿವಾಗಿತ್ತು. ಅಂತೆಯೆ ಅವರು ಜನಭಾಷೆಯಾದ ಕನ್ನಡವನ್ನು ಧರ್ಮಭಾಷೆಯಾಗಿ ರೂಪಿಸಿದರು. ಆಗ ಕನ್ನಡ ಜನಪದಕ್ಕೆ ವೈದಿಕ ವ್ಯವಸ್ಥೆಯ ಕ್ರೌರ್ಯದ ಅರಿವಾಗತೊಡಗಿತು. ಇಡೀ ದಕ್ಷಿಣ ಭಾರತದಲ್ಲಿ ಮೂಡಿ ಬಂದ ಮೊದಲ ಧರ್ಮ ಇದಾಗಿದ್ದು ದುಡಿಯುವ ವರ್ಗದ ವಿಶ್ವವ್ಯಾಪಿ ಪ್ರಜ್ಞೆಯನ್ನು ಹೊಂದಿದೆ!

ಅನುಭವ ಮಂಟಪವೆಂಬುದು ಯುವಕರ, ಮಹಿಳೆಯರ ಮತು ದುಡಿಯುವ ಜನರ ವಾಕ್ ಸ್ವಾತಂತ್ರ್ಯದ ತಾಣವಾಯಿತು. ತಮ್ಮ ಭಾಷೆಯಲ್ಲಿ ಅವರು ಮಾತನಾಡುವ ವಾತಾವರಣ ಸೃಷ್ಟಿಯಾದಾಗ ಸಹಸ್ರಾರು ವರ್ಷಗಳಿಂದ ತುಂಬಿಕೊಂಡಿದ್ದ ನೋವು ಒಮ್ಮೆಲೆ ಹೊರಚಿಮ್ಮಿತು. ಹೀಗೆ ಬಸವಣ್ಣವರು ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಯೊಂದಿಗೆ

ಶೋಷಣೆ ಇಲ್ಲದ ನವಸಮಾಜದ ನಿರ್ಮಾಪಕರಾದರು. ಪವಾಡಗಳೆಲ್ಲ ಸುಳ್ಳು. ಆದರೆ ಬಸವಣ್ಣನವರ ಮಾರ್ಗದರ್ಶನದಲ್ಲಿ ಒಂದೇ ತಲೆಮಾರಿನ ದುಡಿಯುವ ವರ್ಗ ಇಷ್ಟೆಲ್ಲ ಸಾಧಿಸಿದ್ದು ಪವಾಡಸದೃಶವಾಗಿದೆ.

ನವ ಸಮಾಜದ ನಿರ್ಮಾಣದಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ. ದಯವೇ ಧರ್ಮದ ಮೂಲ ಎಂದು ಹೇಳಿದ ಬಸವಣ್ಣನವರಿಗೆ ಆ ದಯೆಯ ಮೂಲ ಕಾಯಕದಲ್ಲಿದೆ ಎಂಬದು ಗೊತ್ತಿತ್ತು. ಬರಿ ಮಾತಿನ ದಯೆಯಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ದಯೆಯು ವಾಸ್ತವಕ್ಕೆ ಇಳಿಯಬೇಕಾದರೆ ಕಾಯಕದಿಂದ ಮಾತ್ರ ಸಾಧ್ಯ. 'ಆನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು' ಬಸವಣ್ಣನವರು ತಿಳಿಸಿದ್ದಾರೆ. ಬಸವಣ್ಣವರ ಧಾರ್ಮಿಕ ಪರಿಭಾಷೆಯಲ್ಲಿ 'ದಯೆ' ಎಂಬುದು ಸಮಾಜ ಸೇವೆ (ಜಂಗಮ ದಾಸೋಹ) ಆಗಿದೆ. ಆದ್ದರಿಂದ ಕಾಯಕ ಮಾಡದೆ ಸಮಾಜ ಸೇವೆ ಮಾಡಲು ಸಾಧ್ಯವಿಲ್ಲ. ಸಮಾಜಸೇವೆ ಮಾಡದೆ ಧರ್ಮವಂತರಾಗಲು ಸಾಧ್ಯವಿಲ್ಲ. ಆದ್ದರಿಂದ ದುಡಿಯವ ವರ್ಗವೇ ನಿಜವಾದ ಧರ್ಮವಂತ ವರ್ಗವಾಗಿದೆ. ಇದನ್ನೇ ಕಾರ್ಲ್ ಮಾರ್ಕ್ಸ್ 'ದುಡಿಯುವ ವರ್ಗದ ಸಂಸ್ಕೃತಿ' ಎಂದು ಕರೆದಿದ್ದಾರೆ. ದುಡಿಯುವವರ ಸಂಸ್ಕೃತಿಗೆ ವಿರುದ್ಧವಾಗಿದ್ದ ವೈದಿಕರ ಕುರಿತು ಕಾರ್ಲ್ ಮಾರ್ಕ್ಸ್ 150 ವರ್ಷಗಳ ಹಿಂದೆ ಬರೆದ 'ಫಸ್ಟ್ ವಾರ್ ಆಫ್ ಇಂಡಿಯನ್ ಇಂಡಿಪೆಂಡೆನ್ಸ್' ಗ್ರಂಥದಲ್ಲಿ 'ಕ್ರೈಸ್ತರು ಯುರೋಪಿನಲ್ಲಿ ಸೃಷ್ಟಿಸಿದ್ದಕ್ಕಿಂತಲೂ ಭಯಂಕರವಾದ ನರಕವನ್ನು ಬ್ರಾಹ್ಮಣರು ಭಾರತದಲ್ಲಿ ಸೃಷ್ಟಿಸಿದ್ದಾರೆ' ಎಂದು ತಿಳಿಸಿದ್ದಾರೆ.

'ಒಂದು ಬಗೆಯ ಸ್ವಾಮಿಗಳು, ಸನ್ಯಾಸಿಗಳು ಮತ್ತು ಬ್ರಾಹ್ಮಣರು ದೇಶವನ್ನು ಅಧೋಗತಿಗೆ ತಳ್ಳಿದ್ದಾರೆ. ಕಳ್ಳತನ ಮತ್ತು ಧೂರ್ತತನದ ಬಗ್ಗೆ ಸದಾ ಯೋಚಿಸುವ ಇವರು ಇಂಥ ತಮ್ಮ ಚಿಂತನೆಗಳು ಧರ್ಮೋಪದೇಶಗಳೆಂದು ನಾಟಕವಾಡುತ್ತಾರೆ. ಜನರಿಂದ ಕಾಣಿಕೆಗಳನ್ನು ಪಡೆಯುತ್ತಾರೆ; ಕೂಡಲೇ 'ಮುಟ್ಟಬೇಡ' ಎಂದು ಬೊಬ್ಬೆ ಹಾಕುತ್ತಾರೆ' ಎಂದು ಸ್ವಾಮಿ ವಿವೇಕಾನಂದ ಅವರು ಟೀಕಿಸಿದ್ದಾರೆ. (ಸಂಪುಟ 6, ಪುಟ 318)

ಕಾಯಕ, ಪ್ರಸಾದ ಮತ್ತು ದಾಸೋಹ ಪದಗಳು ಧರ್ಮಶಾಸ್ತ್ರದ ಪದಗಳಷ್ಟೇ ಅಲ್ಲದೆಬಸವಣ್ಣನವರ ಅರ್ಥಶಾಸ್ತ್ರದ ಪದಗಳೂ ಆಗಿವೆ. ಕಾಯಕ ಎಂಬುದು ಯೋಗ್ಯ ಉತ್ಪಾದನೆ, ಪ್ರಸಾದ ಎಂಬುದು ಸದ್ಬಳಕೆ ಹಾಗೂ ದಾಸೋಹ ಎಂಬುದು ಸಮಾಜದಲ್ಲಿ ಯೋಗ್ಯ ವಿತರಣೆ. 'ಕಾಯಕವೇ ಕೈಲಾಸ' ಎಂಬುದು ಕಾಯಕಜೀವಿಗಳ ಈ ಧರ್ಮದ ಮಹಾ ವಾಕ್ಯಗಳಲ್ಲಿ ಒಂದಾಗಿದೆ. ಕಾಯಕದಲ್ಲಿ ತೊಡಗುವುದರ ಮೂಲಕ ವ್ಯಕ್ತಿಯೊಬ್ಬ ತನ್ನ ಅರಿವಿನ ವಿಸ್ತಾರದೊಂದಿಗೆ ಉತ್ಪಾದನಾ ವ್ಯವಸ್ಥೆಯ ಭಾಗವಾಗುತ್ತಾನೆ. ತಾನು ಉತ್ಪಾದಿಸಿದ್ದನ್ನು ಪ್ರಸಾದ ಪ್ರಜ್ಞೆಯಿಂದ ಸದ್ಬಳಕೆ ಮಾಡುವುದರ ಮೂಲಕ ಜನಸಮುದಾಯಕ್ಕೆ ವಸ್ತುವಿನ ಮಹತ್ವವನ್ನು ಅರಹುತ್ತಾನೆ. ದಾಸೋಹಂಭಾವದ ಮೂಲಕ ತನ್ನ ಬಳಿಯಲ್ಲಿದ್ದ ಮಿಗುತಾಯವನ್ನು ಸಾಮಾಜಿಕ ವಿತರಣೆಗೆ ಬಳಸುತ್ತಾನೆ.

ಆಧುನಿಕ ಜಗತ್ತಿನ ಅರ್ಥವ್ಯವಸ್ಥೆ ಹದಗೆಡುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಬಸವಣ್ಣನವರ ಅರ್ಥಶಾಸ್ತ್ರ ಹೊಸ ರೀತಿಯಲ್ಲಿ ಸರ್ವಸಮತ್ವಭಾವದೊಂದಿಗೆ ಬದುಕುವುದನ್ನು ಕಲಿಸುತ್ತದೆ. ಶರಣರು ವೈಯಕ್ತಿಕ ಸಂಪತ್ತನ್ನು ದಾಸೋಹ ಪ್ರಜ್ಞೆಯೊಂದಿಗೆ ಬಳಸುತ್ತ ಯಾರೂ ಹಸಿವಿನಿಂದ ಬಳಲದಂತೆ ನೋಡಿಕೊಳ್ಳುತ್ತಿದ್ದರು. ಹೀಗೆ ಸಾಮಾಜಿಕ ಪ್ರಜ್ಞೆಯೊಂದಿಗೆ ಮಾನವ ಹಕ್ಕು, ಅಭಿವ್ಯಕ್ತಿ ಸ್ವಾತಂತ್ರ್ಯ, ಜಾತ್ಯತೀತ ಮನೋಭಾವ, ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳನ್ನು ಅಲ್ಲಗಳೆಯುವ ಕ್ರಮ, ಕಾಯಕಜೀವಿಗಳ ಸಂಘಟನೆ, ಕಾಯಕಜೀವಿಗಳಿಗೆ ವಯಸ್ಕರ ಶಿಕ್ಷಣ, ದಲಿತ ಮತ್ತು ಮಹಿಳಾ ಶಿಕ್ಷಣ, ಮಂದಿರ ಮತ್ತು ಮೂರ್ತಿಗಳ ನಿರಾಕರಣೆ, ಶರಣ ಸಂಕುಲದ ಆರ್ಥಿಕ ಸಮಸ್ಯೆಯ ಪರಿಹಾರಕ್ಕಾಗಿ ವ್ಯವಸ್ಥೆಗೊಳಿಸಿದ 'ಶಿವನಿಧಿ' ಅಥವಾ'ಶಿವನಸೊಮ್ಮು' ಎಂಬ ಸಾಮಾಜಿಕನಿಧಿ ಸ್ಥಾಪನೆ, ಕಾಯಕಜೀವಿಗಳ ಕೇಂದ್ರಿತ ಸಮಾಜ ವ್ಯವಸ್ಥೆ, ವಿವಿಧ ಸಾಮಾಜಿಕ ಮೂಲಗಳಿಂದ ಬಂದವರಿಗೆ ಅನುಭವ ಮಂಟಪದಲ್ಲಿ ಲಿಂಗಭೇದವಿಲ್ಲದ ಪ್ರಾತಿನಿಧ್ಯ, ಸಾಮೂಹಿಕ ಚಿಂತನೆ, ಕಾಯಕ, ಪ್ರಸಾದ ಮತ್ತು ದಾಸೋಹದ ಕುರಿತ ಸಮಾಜಮುಖಿ ಕ್ರಾಂತಿಕಾರಿ ಪರಿಕಲ್ಪನೆ ಮತ್ತು ಸಮೂಹ ನಾಯಕತ್ವ ಮುಂತಾದವು ಶರಣರ ಕೊಡುಗೆಗಳಾಗಿವೆ.

'ಚನ್ನಬಸವಣ್ಣನೆಂಬ ಪ್ರಸಾದಿಯ ಪಡೆದು ಅನುಭವ ಮಂಟಪವನನುವುಮಾಡಿ ಅನುಭವಮೂರ್ತಿಯಾದ ನಮ್ಮ ಬಸವಯ್ಯನು.' ಎಂದು ಬಸವಣ್ಣನವರ ಮಡದಿ ನೀಲಮ್ಮನವರು ವಚನವೊಂದರಲ್ಲಿ ಉಲ್ಲೇಖಿಸಿದ್ದಾರೆ. ಬಸವಣ್ಣನವರು ಆ ಅನುಭವ ಮಂಟಪದ ಶೂನ್ಯಸಿಂಹಾಸನದ ಮೇಲೆ ಹಿಂದುಳಿದ ನಟುವರ ಜನಾಂಗದ ಜ್ಞಾನಿ ಅಲ್ಲಮಪ್ರಭುಗಳನ್ನು ಕೂಡಿಸಿದರು. ಈ ಪ್ರಸಂಗದಿಂದಾಗಿ ಮನುಧರ್ಮ ಸಿಂಹಾಸನದ ಪ್ರತಿಪಾದಕರು ದಿಗಿಲುಗೊಂಡರು. ಈ ಸನಾತನಿಗಳ ಪ್ರತಿನಿಧಿಗಳು ಬಿಜ್ಜಳ ರಾಜನ ಸಲಹೆಗಾರರೂ ಆಗಿದ್ದರು. 'ವರ್ಣಾಶ್ರಮ ವ್ಯವಸ್ಥೆಯನ್ನು ಕಾಪಾಡುವುದು ರಾಜಧರ್ಮ' ಎಂದು ಪ್ರತಿಪಾದಿಸುತ್ತ ರಾಜನ ತಲೆ ಕೆಡಿಸುವಲ್ಲಿ ಯಶಸ್ಸನ್ನು ಸಾಧಿಸಿದರು. ಶೂನ್ಯಸಿಂಹಾಸನವನ್ನು ಶೂದ್ರ ಏರಿದ ಕಾರಣದಿಂದಾಗಿ ಕಾಯಕಜೀವಿ ಶೂದ್ರರು ಮತ್ತು ಅತಿಶೂದ್ರರು ಒಂದಾಗಿ ಒಂದಿಲ್ಲೊಂದು ದಿನ ಸನಾತನಧರ್ಮ ಸಿಂಹಾಸನಕ್ಕೂ ಕಲ್ಯಾಣ ರಾಜ್ಯದ ರಾಜಸಿಂಹಾಸನಕ್ಕೂ ಗಂಡಾಂತರದ ವಾತಾವರಣ ಸೃಷ್ಟಿಸುವರು ಎಂಬುದನ್ನು ಬಿಜ್ಜಳನಿಗೆ ಮನದಟ್ಟು ಮಾಡಿದರು.

ಬಸವಣ್ಣನವರ ಕ್ರಾಂತಿಕಾರಿ ಚಟುವಟಿಕೆಗಳು ಮುಂದುವರಿಯುತ್ತಲೇ ಇದ್ದವು. ಅವರು ಅಸ್ಪೃಶ್ಯರನ್ನು 'ಹಿರಿಯಮಾಹೇಶ್ವರರು' ಎಂದು ಕರೆಯುತ್ತಿದ್ದರು. ಒಂದುದಿನ ಬಸವಣ್ಣನವರು ಹೊಲಗೇರಿಯಲ್ಲಿನ ಸಂಬೋಳಿ ನಾಗಿದೇವನ ಮನೆಗೆ ಹೋಗಿ ಪ್ರಸಾದ ಸ್ವೀಕರಿಸಿದರು. ಮೈಲಿಗೆಗೊಂಡ ಬಸವಣ್ಣನವರು ಅಲ್ಲಿಂದ ನೇರವಾಗಿ ಅರಮನೆಗೆ ಬರುತ್ತಿದ್ದಾರೆ ಎಂದು ಮಂತ್ರಿಮಂಡಳದ ನಾರಣಕ್ರಮಿತ, ಕೃಷ್ಣಪೆದ್ದಿ, ವಿಷ್ಣುಭಟ್ಟ ಮತ್ತು ಕೇಶವಭಟ್ಟ ಮುಂತಾದವರು ಬಿಜ್ಜಳನ ಕಿವಿಯೂದಿದರು. ಅರಮನೆಯ

ಅಂಗಳದಲ್ಲಿ ಒಡ್ಡೋಲಗದ ವ್ಯವಸ್ಥೆ ಮಾಡಿ 'ಮೈಲಿಗೆಗೊಂಡ' ಬಸವಣ್ಣನವರ ವಿಚಾರಣೆ ನಡೆಸಿದರು! ಹೀಗೆ ತುಳಿತಕ್ಕೊಳಗಾದವರ ಪರವಾಗಿ ನಿಂತು ಬಹಿರಂಗ ವಿಚಾರಣೆಗೊಳಗಾದ ಇನ್ನೊಬ್ಬ ಪ್ರಧಾನಿ ಎಲ್ಲಿಯೂ ಕಾಣ ಸಿಗುವುದಿಲ್ಲ. (13ನೇ ಶತಮಾನದಲ್ಲೇ ಹರಿಹರ ಹೀಗೆ ಬರೆದದ್ದನ್ನು 'ಭಾರತದಲ್ಲಿ ಜಾತಿ ವ್ಯವಸ್ಥೆ ಇದೆಯೆ?' ಎಂದು ಪ್ರಶ್ನಿಸುವವರು ಹೇಗೆ ಅರ್ಥೈಸುತ್ತಾರೆ? ಆಗ ಇನ್ನು ಹುಟ್ಟದ ವಸಾಹತುಶಾಹಿಯ ಚಿಂತನಾ ಕ್ರಮವಿದು ಎನ್ನುತ್ತಾರೆಯೆ?)

ವೈದಿಕ ಸಿದ್ಧಾಂತಕ್ಕೆ ವಿರುದ್ಧವಾಗಿರುವ ಕಾಯಕಸಿದ್ಧಾಂತದ ಆಧಾರದ ಮೇಲೆ ರಚಿತವಾದ ಶರಣಸಂಕುಲದಲ್ಲಿ ಜಾತಿಗಳು ನಾಶವಾಗಿ ಕೇವಲ ಬಸವಣ್ಣನವರ ನವಮಾನವಧರ್ಮ ಮಾತ್ರ ಬದುಕುವ ಮಾರ್ಗವಾಗಿತ್ತು. ಮನುಧರ್ಮದಲ್ಲಿನ ಶ್ರೇಣೀಕೃತ ಸಮಾಜದಲ್ಲಿ ಸಮಗಾರ ಜಾತಿಯವರಾಗಿದ್ದ ಹರಳಯ್ಯನವರು ಇಷ್ಟಲಿಂಗದೀಕ್ಷೆಯ ನಂತರ ಲಿಂಗವಂತರಾದರು. ಆಗ 'ಸಮಗಾರ' ಎಂಬುದು ಜಾತಿಯ ಸಂಕೇತವಾಗಿ ಉಳಿಯದೆ ಕೇವಲ ಕಾಯಕದ ಸಂಕೇತವಾಗಿ ಉಳಿಯಿತು. ಬಿಜ್ಜಳನ ಆಸ್ಥಾನದಲ್ಲಿದ್ದ ಮಧುವರಸರು ಬ್ರಾಹ್ಮಣರಾಗಿದ್ದರು. ಆದರೆ ಲಿಂಗದೀಕ್ಷೆಯ ನಂತರ ಲಿಂಗವಂತರಾದರು. ಈ ಇಬ್ಬರೂ ಬಸವಣ್ಣನವರ ಶರಣಸಂಕುಲದ ಸದಸ್ಯರಾದರು. ಹೀಗೆ ಸಮಗಾರ ಮೂಲದ ಶರಣ ಹರಳಯ್ಯನವರು ಮತ್ತು ಬ್ರಾಹ್ಮಣ ಮೂಲದ ಮಧುವರಸರು ತಮ್ಮ ಜಾತಿಗಳ ಕುರುಹನ್ನು ಕಳೆದುಕೊಂಡು ಬಸವಧರ್ಮದಲ್ಲಿ ಒಂದಾಗಿದ್ದರು. ಅಂತೆಯೆ ಅವರ ಮಕ್ಕಳ ಮದುವೆಯ ನಿಶ್ಚಯ ಮಾಡಲಾಯಿತು. ಮಾನವ ಹಕ್ಕುಗಳ ಪ್ರತಿಪಾದನೆಗೋಸ್ಕರ ಮತ್ತು ಜಾತಿ ವಿನಾಶಕ್ಕಾಗಿ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯನ್ನು ಏರ್ಪಡಿಸಿದಾಗ ಪಟ್ಟಭದ್ರ ಹಿತಾಸಕ್ತಿಗಳು ಗದ್ದಲ ಮತ್ತು ಗೊಂದಲ ಸೃಷ್ಟಿಸುವುದರ ಮೂಲಕ ಶರಣರ ಕಗ್ಗೊಲೆ ಮಾಡಿ ವಚನಕಟ್ಟುಗಳನ್ನು ಸುಟ್ಟವು. ಸಹಸ್ರಾರು ಶರಣರು ನಿರಾಶ್ರಿತರಾಗಿ ಕಲ್ಯಾಣ ಬಿಟ್ಟು ಹೋಗಬೇಕಾಯಿತು.

1939ರಿಂದ 1945ರ ವರೆಗೆ ನಡೆದ ಎರಡನೇ ಮಹಾಯುದ್ಧದ ನಂತರ ಜಗತ್ತಿನ ಜನಸಮುದಾಯಗಳಲ್ಲಿ ಮಾನವಹಕ್ಕುಗಳ ಕುರಿತು ವಿಶ್ವಾಸ ಮೂಡಿಸುವ ಮತ್ತು ದೇಶಗಳಿಗೆ ಭದ್ರತೆ ಒದಗಿಸುವ ದೃಷ್ಟಿಯಿಂದ ವಿಶ್ವಸಂಸ್ಥೆಯ ಉದಯವಾಯಿತು. ಆದರೆ 12ನೇ ಶತಮಾನದಲ್ಲಿ ಬಸವಾದಿ ಪ್ರಮಥರು ತಮ್ಮ ಪರಿಸರದಲ್ಲಿ ಇಂಥ ವಿಶ್ವಸಂಸ್ಥೆಯ ಆಶಯಗಳನ್ನೊಳಗೊಂಡ ಕಾರ್ಯ ನಿರ್ವಹಿಸಿದರು. ಶರಣರು ಮಾನವಹಕ್ಕುಗಳ ಕುರಿತು ಚಳವಳಿ ಹೂಡಿದ್ದಕ್ಕೆ ಅವರ ಹತ್ಯಾಕಾಂಡವಾಯಿತು! ಎರಡನೇ ಮಹಾಯುದ್ಧದಲ್ಲಿ 5 ಕೋಟಿ ಜನ ಸತ್ತ ಮೇಲೆ ವಿಶ್ವಸಂಸ್ಥೆ ಮಾನವಹಕ್ಕುಗಳ ಘೋಷಣೆ ಮಾಡಿತು! ಬದುಕಿನ ಈ ವೈರುಧ್ಯವನ್ನು ಹೋಗಲಾಡಿಸುವುದೇ ಬಸವ ದರ್ಶನದ ಉದ್ದೇಶವಾಗಿದೆ.

ಕುಲಗೋತ್ರಗಳಿಲ್ಲದ, ಜಾತಿ ಉಪಜಾತಿಗಳಿಲ್ಲದ, ಅಸ್ಪೃಶ್ಯತೆ ಇಲ್ಲದ, ವರ್ಗ, ವರ್ಣ ಮತ್ತು ಲಿಂಗಭೇದಗಳಿಲ್ಲದ, ಖಾಸಗಿ ಆಸ್ತಿ ಇಲ್ಲದ ಆದರೆ ಸಾಮೂಹಿಕ ಸಂಪತ್ತಾದ ಶಿವನಿಧಿಯನ್ನು ಹೊಂದಿದ್ದ ಶರಣಸಂಕುಲವು ಪರಿಪೂರ್ಣ ಸಮಾನತೆಯ

ಸಮಾಜವಾಗಿದೆ. 'ಖಾಸಗಿ ಆಸ್ತಿಯು ಮನುಷ್ಯತ್ವದ ವಿರುದ್ಧವಾಗಿರುತ್ತದೆ. ಮನುಷ್ಯತ್ವವು ಖಾಸಗಿ ಆಸ್ತಿಯ ವಿರುದ್ಧವಾಗಿರುತ್ತದೆ' ಎಂಬುದನ್ನು ತೋರಿಸಿ ಕೊಟ್ಟವರು ಬಸವಣ್ಣನವರು. ಪ್ರಸಾದ ಪ್ರಜ್ಞೆಯಿಂದ ಬರುವ ದಾಸೋಹಂ ಭಾವದ ಮೂಲಕ ಖಾಸಗಿ ಆಸ್ತಿಯನ್ನು ಸಾಮಾಜಿಕ ಆಸ್ತಿಯಾಗಿಸಿ ಮಾನವೀಯತೆ ಪ್ರಧಾನವಾದ ಶರಣಸಂಕುಲವೆಂಬ ಸರ್ವಸಮತ್ವದ ಸಮಾಜವನ್ನು ನಿರ್ಮಿಸಿದ ಕೀರ್ತಿ ಬಸವಾದಿ ಶರಣರಿಗೆ ಸಲ್ಲುತ್ತದೆ.

ಹರಳಯ್ಯ ಮಧುವರಸರು ಲಿಂಗವಂತರಾಗುವ ಮೂಲಕ, ಮನುಧರ್ಮದಿಂದಾಗಿ ಅಂಟಿಕೊಂಡಿದ್ದ ಕೃತ್ರಿಮ ಜಾತಿ ಮತ್ತು ಮೇಲು ಕೀಳುಗಳೆಂಬ ಅಂತಸ್ತುಗಳನ್ನು ಕಳೆದುಕೊಂಡು ನಿಜಮಾನವರಾದರು. ಹರಳಯ್ಯನವರ ಮಗ ಶೀಲವಂತ ಮತ್ತು ಮಧುವರಸರ ಮಗಳು ಲಾವಣ್ಯ ಕೂಡ ಲಿಂಗವಂತರಾದ ಕಾರಣ ಅವರ ಮದುವೆ ಸಹಜವಾಗಿಯೇ ಆಗಬೇಕಿತ್ತು. ಆದರೆ ಬಿಜ್ಜಳನ ಆಸ್ಥಾನದಲ್ಲಿದ್ದ ಪಟ್ಟಭದ್ರ ಹಿತಾಸಕ್ತಿಗಳು ಆ ಮದುವೆ 'ಧರ್ಮಬಾಹಿರ' ಎಂದು ಹುಯಿಲೆಬ್ಬಿಸಿದವು. ಮನುಧರ್ಮದ ಪ್ರಕಾರ ಆ ಮದುವೆ ಧರ್ಮಬಾಹಿರ ಆಗಿತ್ತು. ಆದರೆ ಲಿಂಗವಂತ ಧರ್ಮದ ಪ್ರಕಾರ ಧರ್ಮಸಮ್ಮತವಾಗಿತ್ತು. ಮನುವಾದಿಗಳಿಗೆ ಅದು ಬ್ರಾಹ್ಮಣ ಕನ್ಯಾ ಮತ್ತು ಸಮಗಾರ ವರನ ಮಧ್ಯೆ ನಡೆಯುವ ಮದುವೆಯಾಗಿತ್ತು. ಶರಣ ಸಂಕುಲದ ಪ್ರಕಾರ ಅದು ಲಿಂಗವಂತರ ಮದುವೆಯಾಗಿತ್ತು.

ಲಿಂಗವಂತ ಧರ್ಮವು ಸನಾತನವಾದಿಗಳ ಚೌಕಟ್ಟಿನ ಧರ್ಮವಲ್ಲ. ಇದು ಚೌಕಟ್ಟಿಲ್ಲದ ಬಯಲಧರ್ಮ. 'ಶೂನ್ಯ' ಎಂಬದು ಬಯಲೇ ಆಗಿದೆ. ಇದು ಸಕಲ ಚರಾಚರಗಳ ಸಮೇತ ಎಲ್ಲವನ್ನೂ ಒಳಗೊಂಡಿದೆ. 'ಎಲ್ಲರೂ ನಮ್ಮವರು. ಯಾರೂ ಹೊರಗಿನವರಲ್ಲ' ಎಂಬುದು ಲಿಂಗವಂತ ಧರ್ಮವಾದ ಬಸವಧರ್ಮದ ಘೋಷಣೆಯಾದರೆ, ವರ್ಣ, ಜಾತಿ, ಉಪಜಾತಿ, ವರ್ಗ ಮತ್ತು ಲಿಂಗಭೇದ ಸೃಷ್ಟಿಸಿ ನಿರಂತರ ಶೋಷಣೆಯ ಸಮಾಜವನ್ನು ಮುಂದುವರಿಸುವುದೇ ಮನುಧರ್ಮದ ಉದ್ದೇಶವಾಗಿದೆ.

ಮಾನವ ಘನತೆ ಮತ್ತು ಮಾನವ ಹಕ್ಕುಗಳಿಗಾಗಿ ಮನುಧರ್ಮದ ಕ್ರೌರ್ಯದ ವಿರುದ್ಧ ಹೋರಾಡಿದ ಶರಣರು, ತತ್ತ್ವದ ಅನುಷ್ಠಾನಕ್ಕಾಗಿ ತಮ್ಮ ಭೌತಿಕ ಸಂಪತ್ತನ್ನು ಕಳೆದುಕೊಳ್ಳಲು ಸಿದ್ಧರಾದರು. ಹರಳಯ್ಯ ಮಧುವರಸರ ಮಕ್ಕಳ ಮದುವೆಗೆ ಮನುವಾದಿಗಳ ಮತ್ತು ದೊರೆ ಬಿಜ್ಜಳನ ವಿರೋಧವಿದ್ದಾಗ್ಯೂ ಶರಣರು ಆ ಮದುವೆಯನ್ನು ಸಾವಿಗಂಜದೆ ನೆರವೇರಿಸಿದರು. ಆಗ ಮನುವಾದಿಗಳಿಂದಾಗಿ ಕಲ್ಯಾಣದಲ್ಲಿ ಅಲ್ಲೋಲ ಕಲ್ಲೋಲವಾಯಿತು. ತಮ್ಮ ನಿಜ ಸಂಪತ್ತಾಗಿದ್ದ ವಚನಕಟ್ಟುಗಳ ರಕ್ಷಣೆಗಾಗಿ ಅವರು ಯಾವುದನ್ನೂ ಲೆಕ್ಕಿಸದೆ ಕಲ್ಯಾಣವನ್ನು ತೊರೆದರು. ಒಂದು ಜಾತ್ಯತೀತ ಮದುವೆಗಾಗಿ ಶರಣರು ಎಲ್ಲವನ್ನೂ ಕಳೆದುಕೊಂಡು ಮಾನವ ಘನತೆಯ ರಕ್ಷಣೆ ಮಾಡಿದರು. 'ನಡೆನುಡಿ ಸಿದ್ಧಾಂತ'ದಿಂದ ಕೂಡಿದ ತತ್ತ್ವಕ್ಕಾಗಿ ಅನೇಕ ಸಾತ್ವಿಕರು ಹುತಾತ್ಮರಾಗಲು ಕಾರಣವಾದ 'ಕಲ್ಯಾಣಕ್ರಾಂತಿ' ಎಂಬ ಇಂಥ ಘನಘೋರ ಘಟನೆ

ಮಾನವ ಚರಿತ್ರೆಯಲ್ಲಿ ಇನ್ನೊಂದಿಲ್ಲ! ನಿಜವಾದ ಅರ್ಥದಲ್ಲಿ ಆ ಘಟನೆ ಕಲ್ಯಾಣಕ್ರಾಂತಿ ಅಲ್ಲ. ಕಲ್ಯಾಣದಲ್ಲಿ ಬಸವಾದಿ ಶರಣರಿಂದ ನಡೆಯಬೇಕಿದ್ದ ಕ್ರಾಂತಿಯನ್ನು ತಡೆದಂಥ ಮನುವಾದಿಗಳ ಕ್ಷಿಪ್ರಕ್ರಾಂತಿ. ಶರಣರ ಜನಾಂಗಹತ್ಯೆ ನಡೆದ ಈ ದುರ್ಘಟನೆ ಮಾನವೀಯತೆಯ ಮೇಲೆ ನಡೆದ ಅತ್ಯಾಚಾರವಾಗಿದೆ. ಬಿಜ್ಜಳನ ಕಲ್ಯಾಣದೊಳಗೆ ಬಸವಣ್ಣನವರ ಕಲ್ಯಾಣ ಸೃಷ್ಟಿಯಾಗಿತ್ತು. ಬಸವಣ್ಣನವರ ಕಲ್ಯಾಣದಲ್ಲಿ ಪ್ರತಿಕ್ಷಣ ಕ್ರಾಂತಿ ನಡೆಯುತ್ತಿದ್ದರೆ. ಬಿಜ್ಜಳನ ಕಲ್ಯಾಣದ ವೈದಿಕರು ಪ್ರತಿಕ್ಷಣ ಕ್ಷಿಪ್ರಕ್ರಾಂತಿಯ ಲೆಕ್ಕ ಹಾಕುತ್ತಿದ್ದರು. ಕೊನೆಗೆ ಅವರು ಕ್ಷಿಪ್ರಕ್ರಾಂತಿ ಮಾಡಿಬಿಟ್ಟರು!

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ //ಪ//

ಹರಳಯ್ಯ ಮಧುವಯ್ಯನವರಿಗೆ ಎಳೆಹೂಟೆ
ದುರುಳ ಬಿಜ್ಜಳನು ಕಟ್ಟಿದನೆಂದರೆ
ಇರಬಾರದಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದರಂತೆ.

ನುಡಿಯ ಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆವರಂತೆ.
ತಡ ಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದರಂತೆ.

ಅಲ್ಲಿಗೆ ಎಮ್ಮನು ಬರಲು ಹೇಳಿದರಂತೆ
ಅಲ್ಲಿದ್ದ ಸಂಗಮನಿಲ್ಲಿಲ್ಲವೆ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ?

ಅಪ್ಪ ಅಣ್ಣಯ್ಯಗಳೆನ್ನ ಕರೆಯ ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳವ ಬೆರೆದಂತೆ ಎನ್ನ
ನಪ್ಪಿದ ಲಿಂಗವೆ ಮಾತನಾಡೋ.

ಸಂಗನಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗಮನಾಥನೆ ಈತನೆಂದು ಎ
ನ್ನಂಗಯ್ಯ ಲಿಂಗವೆ ಮಾತನಾಡೋ.

– ನೀಲಮ್ಮ

ದೃಢನಿರ್ಧಾರದಿಂದ ಕೂಡಿದ ನೀಲಮ್ಮನ ಈ ಹೃದಯ ಸ್ಪರ್ಶಿಸ್ವರ ವಚನ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಎಳೆಹೂಟೆ ಶಿಕ್ಷೆ ವಿಧಿಸಿದ ನಂತರ ಕಲ್ಯಾಣದ ಘಟನೆಗಳನ್ನು ಈ ಸ್ವರವಚನ ಸೂಕ್ಷ್ಮವಾಗಿ ವಿವರಿಸುತ್ತದೆ. ಬಸವಣ್ಣನವರು ಮಾಡಿದ ಆಟ (ಆಡಿದ ಆಟ ಅಲ್ಲ) ಯಾವುದು ಎಂಬುದನ್ನು ನೀಲಮ್ಮ ಸೂಚ್ಯವಾಗಿ ತಿಳಿಸಿದ್ದಾರೆ. ಮನುಷ್ಯರನ್ನು ಬೇರ್ಪಡಿಸುವ ಸಮಾಜದಿಂದ ಮನುಷ್ಯರನ್ನು ಒಂದಾಗಿಸುವ ಸಮಾಜದ ಕಡೆಗೆ ಜನಸಮುದಾಯವನ್ನು ಒಯ್ಯುವ ಯೋಜನೆಯನ್ನು ಬಸವಣ್ಣನವರು ರೂಪಿಸಿದ್ದರು. ಯಥಾಸ್ಥಿತಿವಾದಿಗಳು ಆ ಯೋಜನೆಯನ್ನು ನುಚ್ಚುನೂರು ಮಾಡಿದರು.

ವಿಲೋಮ ಪದ್ಧತಿಯ ಮದುವೆಯ ನಿರ್ಧಾರ ಮತ್ತು ಜಾತಿವಿನಾಶ ಚಳವಳಿಗಳು ಸನಾತನ ಧರ್ಮ ರಕ್ಷಣೆಗೆ ವಿರುದ್ಧವಾಗಿದ್ದವು. ಭೇದಭಾವದಿಂದ ಕೂಡಿದ ಸನಾತನ ಧರ್ಮ ರಕ್ಷಣೆ ರಾಜನ ಕರ್ತವ್ಯವಾಗಿತ್ತು. ಈ ವಿಚಾರವನ್ನು ಸನಾತನಿಗಳು ಬಿಜ್ಜಳ ರಾಜನ ಮುಂದಿಟ್ಟು ಬಸವಣ್ಣನವರ ವಿರುದ್ಧ ಎಚ್ಚರಿಸುತ್ತಲೇ ಇದ್ದರು. ಸನಾತನಿಗಳ ಕುತಂತ್ರವನ್ನು ನಿಷ್ಕ್ರಿಯಗೊಳಿಸುವುದು; ಸನಾತನ ಧರ್ಮಕ್ಕೆ ವಿರುದ್ಧವಾದ ಮದುವೆಯಿಂದಾಗುವ ಕ್ಷೋಭೆಯನ್ನು ತಹಬಂದಿಗೆ ತರುವುದು ಮತ್ತು ಮನುಧರ್ಮಕ್ಕೆ ಸಮ್ಮತವಲ್ಲದ ಇತರ ದುಡಿಯುವ ಜನಪರ ಚಟುವಟಿಕೆಗಳಿಂದ ಉಂಟಾದ ರಾಜತಾಂತ್ರಿಕ ಬಿಕ್ಕಟ್ಟನ್ನು ಶಮನಗೊಳಿಸುವುದಕ್ಕಾಗಿ ಬಸವಣ್ಣನವರು ಪ್ರಧಾನಿ ಪದವಿಯನ್ನು ಬಿಟ್ಟುಕೊಟ್ಟು ಕೂಡಲಸಂಗಮಕ್ಕೆ ದೇಶಾಂತರ ಬರಬೇಕಾಯಿತು. ಅಲ್ಲಿಂದಲೇ ಅವರು ಕಲ್ಯಾಣದ ವಿದ್ಯಮಾನಗಳನ್ನು ಅರಿತುಕೊಂಡು ಶರಣರಿಗೆ ಸಲಹೆ ನೀಡುತ್ತಿದ್ದರು.

ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯಿಂದಾಗಿ ಸನಾತನಿಗಳ ಹಿಡಿತದಲ್ಲಿರುವ ಬಿಜ್ಜಳನ ಕಲ್ಯಾಣದಲ್ಲಿ ಸಾಮಾಜಿಕವಾಗಿ ಪ್ರಕ್ಷುಬ್ಧ ವಾತಾವಾರಣ ಉಂಟಾಗುವುದೆಂಬುದು ಶರಣ ಸಂಕುಲಕ್ಕೆ ಚೆನ್ನಾಗಿ ಗೊತ್ತಿತ್ತು. ಅವರು ತಮ್ಮ ಜಾತ್ಯತೀತ ತತ್ತ್ವದ ಪರಿಪಾಲನೆಗಾಗಿ ಎಲ್ಲ ತ್ಯಾಗಕ್ಕೂ ಸಿದ್ಧರಾಗಿ ಹರಳಯ್ಯ – ಮಧುವರಸರ ಮಕ್ಕಳ ಮದುವೆ ಮಾಡಿದರು. ಸನಾತನವಾದಿಗಳ ಮನಸ್ಸು ಹೊತ್ತಿ ಉರಿಯತೊಡಗಿತು. ಅವರೆಲ್ಲ ಸೇರಿ ಕಲ್ಯಾಣದಲ್ಲಿ ಹಾಹಾಕಾರ ಎಬ್ಬಿಸಿದರು. ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆಯಾಯಿತು. ಶರಣರ ಮೇಲೆ ಹಲ್ಲೆ ಕಗ್ಗೊಲೆಗಳು ಆರಂಭವಾದವು. ಶರಣರ ವಚನ ಕಟ್ಟುಗಳನ್ನು ಸನಾತನಿಗಳು ಮತ್ತು ಬಿಜ್ಜಳನ ಸೈನಿಕರು ಸುಡತೊಡಗಿದರು. ಆಗ ಬಸವಣ್ಣನವರು ಕಲ್ಯಾಣದಲ್ಲಿನ ಶರಣರಿಗೆ ಕಳುಹಿಸಿದ ಸೂಚನೆಯ ಪ್ರಕಾರ ಅವರೆಲ್ಲ ಹೃದಯವಿದ್ರಾವಕ ಸ್ಥಿತಿಯಲ್ಲಿ ಕಲ್ಯಾಣ ತೊರೆದು ತಮಗೆ ಸಾಧ್ಯವಾದ ಕಡೆಗಳಲ್ಲಿ ಹೊರಟು ಹೋದರು. ಉಳಿದ ಶರಣರು ವಚನ ಕಟ್ಟುಗಳ ರಕ್ಷಣೆಗಾಗಿ ಉಳವಿಯ ಕಡೆಗೆ ಹೊರಟರು. ಮಡಿವಾಳ ಮಾಚಿದೇವ, ಡೋಹರ ಕಕ್ಕಯ್ಯ, ಕೂಗಿನಮಾರಿತಂದೆ ಮುಂತಾದ ಶರಣರು ಮಾರ್ಗ ಮಧ್ಯದಲ್ಲೇ ಲಿಂಗೈಕ್ಯರಾದರು. ಅಕ್ಕನಾಗಮ್ಮ, ನುಲಿಯ ಚಂದಯ್ಯ, ಕಿನ್ನರಿ ಬ್ರಹ್ಮಯ್ಯ ಮುಂತಾದ ಬಹುಸಂಖ್ಯೆಯ

ಶರಣರು ಚನ್ನಬಸವಣ್ಣನವರ ನೇತೃತ್ವದಲ್ಲಿ ಉಳವಿ ತಲುಪಿದರು. ವಿಪರೀತ ವಾತಾವರಣದ ಆ ದುರ್ಗಮ ಕಾಡಿನಲ್ಲಿ ಜಿಗಣೆ, ಹಿಂಸ್ರಪ್ರಾಣಿಗಳು, ವಿಷಜಂತುಗಳು ಮತ್ತು ಧಾರಕಾರ ಮಳೆಯ ಮಧ್ಯೆ ಕಷ್ಟಕರವಾದ ಜೀವನ ಸಾಗಿಸುತ್ತ ವಚನ ಸಂಪತ್ತನ್ನು ರಕ್ಷಿಸಿದರು. ಜೀವ ಮತ್ತು ಸಂಪತ್ತಿನ ಬಗ್ಗೆ ಯೋಚಿಸದ ಶರಣರು ತಮ್ಮ ಸಿದ್ಧಾಂತದ ಗೆಲವಿಗಾಗಿ ಶ್ರಮಿಸಿದರು. 12ನೇ ಶತಮಾನದಲ್ಲೇ ಸನಾತನಿಗಳ ಸಂಪ್ರದಾಯಕ್ಕೆ ವಿರುದ್ಧವಾಗಿ ಜಾತಿವಿನಾಶದ ಮದುವೆ ಮಾಡಿಸುವುದಕ್ಕಾಗಿ ಶರಣರು ಒಗ್ಗಟ್ಟಾಗಿ ದುರಂತಗಳನ್ನು ಎದುರಿಸಿದ್ದು ಇತಿಹಾಸದಲ್ಲಿನ ಅನನ್ಯ ಘಟನೆಯಾಗಿದೆ.

ನಾಗರೀಕತೆಗೆ ಅಂಟಿದ ಕಳಂಕಗಳಾದ ಜಾತಿವಾದ, ವರ್ಣವ್ಯವಸ್ಥೆ, ವರ್ಗಭೇದ ಮತ್ತು ಲಿಂಗಭೇದಗಳ ವಿರುದ್ಧ ವಚನ ಸಾಹಿತ್ಯ ಹೊಂದಿದ ಅಂಶಗಳೇ ಭಾರತ ಸಂವಿಧಾನದ ಅಂಶಗಳಾಗಿವೆ. ಅದೇ ರೀತಿ ಮಾನವ ಹಕ್ಕುಗಳ ಎಲ್ಲ ಅಂಶಗಳೂ ಬಸವಣ್ಣನವರ ವಚನಗಳಲ್ಲಿವೆ.

1948ನೇ ಡಿಸೆಂಬರ್ 10ರಂದು ನಡೆದ ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ 30 ಅಂಶಗಳುಳ್ಳ ಮಾನವ ಹಕ್ಕುಗಳನ್ನು ಜಾಗತಿಕ ಘೋಷಣೆಯೊಂದಿಗೆ ಸ್ವೀಕರಿಸಲಾಯಿತು. ಲಿಂಗಭೇದ, ವರ್ಣಭೇದ ಮುಂತಾದ ಅನಿಷ್ಟಗಳನ್ನು ತೊಡೆದು ಹಾಕಲು ಯತ್ನಿಸಿತು. ಅನೈತಿಕ 'ಸಂಬಂಧಗಳಿಂದ ಜನಿಸಿದ ಮಕ್ಕಳ ಹಕ್ಕುಗಳಲ್ಲಿ ಮತ್ತು ಸತಿ-ಪತಿಗಳ ಸಂಬಂಧದಿಂದ ಜನಿಸಿದ ಮಕ್ಕಳ ಹಕ್ಕುಗಳಲ್ಲಿ ವ್ಯತ್ಯಾಸವಿಲ್ಲವೆಂದು ವಿಶ್ವಸಂಸ್ಥೆ ಸಾರಿತು. 'ದಾಸೀಪುತ್ರನಾಗಲೀ ವೇಶ್ಯಾಪುತ್ರನಾಗಲೀ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ' ಎಂದು ಬಸವಣ್ಣನವರು ಹೇಳುವ ಮೂಲಕ ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳು ಕೂಡ ಸಮಾನ ಹಕ್ಕುಳ್ಳವರು ಎಂಬ ವಿಚಾರವನ್ನು ಎತ್ತಿ ಹಿಡಿದಿದ್ದಾರೆ. ಮಾನವರ ಮಧ್ಯದ ಜಾತಿ ಮತ್ತು ಅಂತಸ್ತುಗಳ ವಿನಾಶವೇ ಶರಣರ ಗುರಿಯಾಗಿತ್ತು.

ಬ್ರಾಹ್ಮಣ ಭಕ್ತನಾದಡೇನಯ್ಯಾ ಸೂತಕಪಾತಕಂಗಳ ಬಿಡದನ್ನಕ್ಕ
ಕ್ಷತ್ರಿಯ ಭಕ್ತನಾದಡೇನಯ್ಯಾ ಹಿಂಸೆಯ ಬಿಡದನ್ನಕ್ಕ
ವೈಶ್ಯ ಭಕ್ತನಾದಡೇನಯ್ಯಾ ಕಪಟ ಸುಳ್ಳು ಬಿಡದನ್ನಕ್ಕ
ಶೂದ್ರ ಭಕ್ತನಾದಡೇನಯ್ಯಾ ಸ್ವಜಾತಿ ಎಂಬುದ ಬಿಡದನ್ನಕ್ಕ
ಇಂತೀ ಜಾತಿಡಂಬಕರ ಮೆಚ್ಚುವನೆ ಕೂಡಲಚನ್ನಸಂಗಮದೇವ?

– ಚನ್ನಬಸವಣ್ಣ

ನಿಜವಾದ ಅರ್ಥದಲ್ಲಿ ಶರಣರು ಯಾವುದೇ ವರ್ಣ, ಕುಲ ಅಥವಾ ಜಾತಿಯ ಪರ ಇದ್ದಿದ್ದಿಲ್ಲ. ಅವರು ಯಾವ ವರ್ಣದವರ ಕಡೆಗೂ ಹೋಗಿ ಅವರನ್ನು ಶ್ಲಾಘಿಸುತ್ತ ನಿಲ್ಲಲಿಲ್ಲ. ಎಲ್ಲರೆಡೆಗೆ ಹೋಗಿ ಎಲ್ಲರನ್ನೂ ನವಮಾನವ ಸಮಾಜದ ಕಡೆಗೆ ತರಲು ಯತ್ನಿಸಿದರು. ಮೇಲ್ಜಾತಿಯವರಿಗೆ ಇದರಿಂದ ಲಾಭವಿರಲಿಲ್ಲ. ಅವರೊಳಗಿನ ವಿಚಾರವಂತರು ಮಾತ್ರ ಶರಣರ ಕಡೆಗೆ ಬಂದರು. ಆದರೆ ಬಹುಪಾಲು ಶೂದ್ರರು

ಮತ್ತು ಅತಿಶೂದ್ರರು ಬಸವಣ್ಣನವರ ಸುಲಿಗೆ ಇಲ್ಲದ ಸಮಾಜವನ್ನು ಸೇರಿದರು. ಹೀಗೆ ಸೇರಿದವರೆಲ್ಲ ನವಮಾನವರಾದರು. ಶರಣರಿಗೂ ಜಾತಿಡಂಬಕರಿಗೂ ಯಾವುದೇ ಸಂಬಂಧವಿಲ್ಲವೆಂಬುದನ್ನು ಚನ್ನಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಎಲ್ಲ ವರ್ಣದವರ ಹಾಗೆ ಶೂದ್ರ ವರ್ಣದವರು ಕೂಡ ತಮ್ಮ ಪೂರ್ವಾಶ್ರಮದ ಕುರುಹುಗಳನ್ನು ಕಳೆದುಕೊಂಡು ನವಮಾನವರಾಗಬೇಕೆಂದು ಚನ್ನಬಸವಣ್ಣನವರು ಮೇಲಿನ ವಚನದಲ್ಲಿ ಸೂಚಿಸಿದ್ದಾರೆ.

ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ!
ಮಾಲೆಗಾರನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ!
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ!
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ!
ನಾನಾ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ
ಕೂಡಲಸಂಗಮದೇವಾ.

– ಬಸವಣ್ಣ

ಬಸವಣ್ಣನವರು ಬ್ರಾಹ್ಮಣ್ಯದ ಎಲ್ಲ ಹಂಗಿನ ತೊಡಕುಗಳನ್ನು ಬಿಡಿಸಿಕೊಂಡು ಹೊಸತನವನ್ನು ಸಾಧಿಸಿದ್ದಾರೆ. 'ಶರಣರಹಂಗು' ಎಂಬ ಕ್ರಾಂತಿಕಾರಿ ಚಿಂತನಾ ಕ್ರಮದಿಂದ ಎಲ್ಲ ಜಾತಿ, ಕುಲ, ವರ್ಣ ಮತ್ತು ವರ್ಗಗಳಿಂದ ಹೊರಬಂದು ಸರ್ವಸಮತ್ವವನ್ನು ಸಾಧಿಸಲು ಸಾಧ್ಯವಾಗುವುದು ಎಂಬುದನ್ನು ಸೂಚಿಸಿದ್ದಾರೆ. ಅಸಮಾನತೆಯನ್ನು ಪ್ರತಿಪಾದಿಸುವ ಎಲ್ಲ ಚಿಂತನೆ ಮತ್ತು ಕ್ರಿಯೆಗಳನ್ನು ಬಿಡದೆ ನವಮಾನವನಾಗಲು ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಎನ್ನ ತನು ಭಕ್ತ, ಮನ ಭವಿ' ಎಂದು ಇನ್ನೊಂದು ವಚನದಲ್ಲಿ ಹೇಳಿದ ಅವರು, ಬರಿ ಬಾಹ್ಯ ಬದಲಾವಣೆಯನ್ನು ವಿರೋಧಿಸಿದ್ದಾರೆ. ಬಹುಪಾಲು ಲಿಂಗಾಯತರು ನಾಲಿಗೆ ಮೇಲೆ ಜಾತ್ಯತೀತ ಬಸವಣ್ಣ ಮತ್ತು ಮೆದುಳಿನ ಒಳಗೆ ಜಾತಿವಾದಿ ಮನುವನ್ನು ಇಟ್ಟುಕೊಂಡ ಕಾರಣ ಎಡಬಿಡಂಗಿ ಸ್ಥಿತಿಯಲ್ಲಿದ್ದು ವೈದಿಕರ ಆಚರಣೆಯಲ್ಲಿ ತೊಡಗಿದ್ದರಿಂದಲೇ ಲಿಂಗಾಯತ ಧರ್ಮ ಸ್ವತಂತ್ರ ಧರ್ಮವಾಗಿ ಮುನ್ನಡೆಯಲು ಸಾಧ್ಯವಾಗುತ್ತಿಲ್ಲವೆಂಬುದು ವಾಸ್ತವವಾಗಿದೆ.

ಬಸವ ಪ್ರಿಯರು, ಬಸವ ಭಕ್ತರು, ಬಸವ ನಿಷ್ಠರು ಮತ್ತು ಬಸವ ವಚನ ಪ್ರಿಯರು ಸಾಮೂಹಿಕ ಪ್ರಜ್ಞೆಯೊಂದಿಗೆ ಬಸವತತ್ತ್ವ ನಿಷ್ಠರಾದಾಗ ಮಾತ್ರ ಬಸವಧರ್ಮ ಉಳಿಯಲು ಸಾಧ್ಯ. 'ಲಿಂಗಾಯತ ಒಂದು ಜಾತ್ಯತೀತ ಅವೈದಿಕ ಧರ್ಮ' ಎಂಬ ಸತ್ಯವನ್ನು ಅರಿತುಕೊಂಡು ಲಿಂಗಾಯತರೊಳಗೆ ಸೃಷ್ಟಿಯಾದ ಜಾತಿ ಉಪಜಾತಿಗಳಲ್ಲಿ ರಕ್ತಸಂಬಂಧ ಬೆಳೆಸುವ ಮೂಲಕ ಅವುಗಳ ನಿರ್ನಾಮ ಮಾಡುವುದು ನಿಜವಾದ ಲಿಂಗಾಯತರ ಕರ್ತವ್ಯವಾಗಿದೆ. ವೈದಿಕರ ಜಾತಿ ವ್ಯವಸ್ಥೆ ವಿರುದ್ಧ ಹೋರಾಡುವ ಮೊದಲ ಘಟ್ಟವಿದು. ಬೇರೆ ಸಮಾಜಗಳಲ್ಲಿನ ಬಸವ ತತ್ತ್ವನಿಷ್ಠರ ಜೊತೆ ಇಷ್ಟಲಿಂಗ

ದೀಕ್ಷೆಯೊಂದಿಗೆ ರಕ್ತಸಂಬಂಧ ಬೆಳೆಸುವುದು ಎರಡನೆಯ ಘಟ್ಟದ ಹೋರಾಟವಾಗಿದೆ. ಈ ರೀತಿ ಬಸವನಿಷ್ಠರೆಲ್ಲ ಒಗ್ಗಟ್ಟಾಗುವುದರ ಮೂಲಕ ಸಾಮಾಜಿಕ ಅನಿಷ್ಟಗಳಾದ ದಲಿತರ ಮೇಲಿನ ಹಲ್ಲೆ, ಮಹಿಳೆಯರ ಮೇಲಿನ ದೌರ್ಜನ್ಯ, ಭ್ರಷ್ಟಾಚಾರ, ಕೋಮುವಾದ ಮತ್ತು ಉಗ್ರವಾದದ ವಿರುದ್ಧ ಧ್ವನಿ ಎತ್ತುವ ಅವಶ್ಯಕತೆ ಇದೆ. ಇದು ಇಷ್ಟಕ್ಕೆ ನಿಲ್ಲದೆ ಬಸವತತ್ತ್ವದ ಮೇಲೆ ರಾಜ್ಯಾಡಳಿತ ನಡೆಸುವ ದಿನಗಳ ಕನಸು ಕಾಣಬೇಕಿದೆ. 'ತುಳಿತಕ್ಕೊಳಗಾದವರು ನಮ್ಮ ನಾಯಕರಾಗಬೇಕು' ಎಂಬ ಬಸವವಾದವನ್ನು ರಾಜ್ಯಸತ್ತೆ ಪಡೆಯುವುದರ ಮೂಲಕ ಸಾಕಾರಗೊಳಿಸಬೇಕಿದೆ. ಭಾರತೀಯ ಸಮಾಜದಲ್ಲಿ ಬಡತನ, ಅಸ್ಪೃಶ್ಯತೆ ಮತ್ತು ಜಾತಿಗಳು ಇರುವವರೆಗೆ ಬಸವ ತತ್ತ್ವನಿಷ್ಠರ ಹೋರಾಟ ಮುಂದುವರಿಯುತ್ತಲೇ ಇರಬೇಕು ಎಂಬ ಕ್ರಿಯಾತ್ಮಕ ನಿರ್ಧಾರದಿಂದ ಮಾತ್ರ ಹೊಸ ಸಮಾಜದೆಡೆಗೆ ಸಾಗಲು ಸಾಧ್ಯವಾಗುವುದು. ಬಸವಣ್ಣನವರು ಇಂಥ ಮಹಾನ್ ಉದ್ದೇಶದಿಂದ ಬ್ರಾಹ್ಮಣ್ಯವನ್ನು ಅಲ್ಲಗಳೆದರು ಹೊರತಾಗಿ ದ್ವೇಷದಿಂದ ಅಲ್ಲ ಎಂಬ ಸತ್ಯವನ್ನು ಅರಿತುಕೊಂಡು ಚಾಲ್ತಿಯಲ್ಲಿರುವ ಬ್ರಾಹ್ಮಣ್ಯದ ವಿರುದ್ಧ (ಬ್ರಾಹ್ಮಣರ ವಿರುದ್ಧ ಅಲ್ಲ) ಮತ್ತು ಈ ಕಾಲದ ಸುಲಿಗೆ ವ್ಯವಸ್ಥೆ ವಿರುದ್ಧ ಹೋರಾಡುವುದು ಪ್ರತಿಯೊಬ್ಬ ಬಸವತತ್ತ್ವನಿಷ್ಠನ ಕರ್ತವ್ಯವಾಗಿದೆ.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಗೌತಮಮುನಿಗೆ ಗೋವೇಧೆಯಾಯಿತ್ತು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಬಲಿಗೆ ಬಂಧನವಾಯಿತ್ತು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ಕರ್ಣನ ಕವಚ ಹೋಯಿತ್ತು.

ಬ್ರಾಹ್ಮಣನೆ ದೈವವೆಂದು ನಂಬಿದ ಕಾರಣ
ದಕ್ಷಂಗೆ ಕುರಿದಲೆಯಾಯಿತ್ತು.

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ಪರಶುರಾಮ ಸಮುದ್ರಕ್ಕೆ ಗುರಿಯಾದನು.

ಬ್ರಾಹ್ಮಣನೇ ದೈವವೆಂದು ನಂಬಿದ ಕಾರಣ
ನಾಗಾರ್ಜುನನ ತಲೆ ಹೋಯಿತ್ತು.

ದೇವಾ, ಭಕ್ತನೆಂದು ನಂಬಿದ ಕಾರಣ
ನಮ್ಮ ಕೂಡಲಸಂಗನ ಶರಣರು ಕೈಲಾಸವಾಸಿಗಳಾದರು.

– ಬಸವಣ್ಣ

ಅಸಮಾನತೆಯ ವ್ಯವಸ್ಥೆ ಸದಾ ಮೋಸದ ಪರಿಣಾಮವನ್ನೇ ಬೀರುತ್ತದೆ ಎಂಬುದರ ಬಗ್ಗೆ ಬಸವಣ್ಣನವರಿಗೆ ಮನದಟ್ಟಾಗಿದ್ದರಿಂದಲೇ ಇಂಥ ವಚನಗಳನ್ನು ಬರೆಯಲು ಸಾಧ್ಯವಾಯಿತು.

ವಿಪ್ರರ ಕರೆದು 'ನೃಪರುಗಳು ಇಪ್ಪರೆ
ತಮ್ಮ ಶಿಶುವಿನೊಡನೆ'ಂದುಬೆಸಗೊಂಡಡೆ,
'ಇಪ್ಪರು, ಇಪ್ಪರು, ತಾವು ಬಿತ್ತಿದಫಲಂಗಳ ತಾವು ಉಣ್ಣದವರುಂಟೆ?
ಎಂದು ಕಣ್ಣ ಕಾಣದೆ ಹೇಳಿದರು, ಅಣ್ಣಗಳು, ಕರ್ಮದ ಬಟ್ಟೆಯನು.

– ಬಸವಣ್ಣ

ವಿಪ್ರರು ಯಾವರೀತಿಯಲ್ಲಿ ರಾಜ್ಯಶಕ್ತಿಗೆ ದಿಕ್ಕುತಪ್ಪಿಸಿ ತಮ್ಮ ಲಾಭಕ್ಕೇ ಅಂಟಿಕೊಂಡಿರುತ್ತಿದ್ದರು ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ. ರಾಜನು ತನ್ನ ಮಗಳನ್ನು ಬಯಸಿ ಪ್ರಾಣಿಯ ಮಟ್ಟಕ್ಕೆ ಇಳಿಯುವುದನ್ನು ಕೂಡ ವಿಪ್ರರು ಸಮ್ಮತಿಸುವುದನ್ನು ಕಂಡು ಬಸವಣ್ಣನವರು ವಿಷಣ್ಣವದನರಾಗಿದ್ದಾರೆ. ತಮ್ಮ ಶರಣರ ಧರ್ಮ ಈ ವಿಪ್ರರ ಧರ್ಮಕ್ಕೆ ತದ್ವಿರುದ್ಧವಾದುದು ಎಂಬುದನ್ನು ಈ ಕೆಳಗಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ದ್ವಿಜರಿಗೆ ಕೊಟ್ಟು ಹಲಬರು ಕೆಟ್ಟರು.
ಉದ್ಧರಿಸುವನೊಬ್ಬ, ಶಿವಶರಣ ಸಾಲದೆ?

ನಾರಾಯಣ ವೃದ್ಧಬ್ರಾಹ್ಮಣನಾಗಿ ಬಂದು ಬಲಿಯ ಭೂಮಿಯ ಬೇಡಿದ.
ಕೊಟ್ಟ ಬಲಿ ಬಂಧನಕ್ಕೆ ಸಿಕ್ಕಿದ.

ಈಶ ಭಕ್ತನಾಗಿ ಬಂದು ದಾಸನ ವಸ್ತ್ರವ ಬೇಡಿದ.
ಕೊಟ್ಟ ದಾಸ ತವನಿಧಿಯ ಪಡೆದ.

ಕಪಟದಿಂದ ನಾರಾಯಣ ಹಾರುವನಾಗಿ ಬಂದು ಕರ್ಣನ ಕವಚವ ಬೇಡಿದ.
ಕೊಟ್ಟ ಕರ್ಣ ಕಳದಲ್ಲಿ ಮಡಿದ.

ಕಾಮಾರಿ ಜಂಗಮವಾಗಿ ಬಂದು ಸಿರಿಯಾಳನ ಮಗನ ಬೇಡಿದ.
ಕೊಟ್ಟ ಸಿರಿಯಾಳಸೆಟ್ಟಿ ಕಂಚಿಯಪುರ ಕೈಲಾಸಕ್ಕೊಯ್ದ.

ನಾರಾಯಣ ಹಾರುವನಾಗಿ ಬಂದು ನಾಗಾರ್ಜುನನ ಶಿರವ ಬೇಡಿದ.
ಕೊಟ್ಟ ನಾಗಾರ್ಜುನನ ಶಿರ ಹೋಯಿತ್ತು.
ಶಿವನು ಜಂಗಮವಾಗಿ ಬಂದು ಸಿಂಧುಬಲ್ಲಾಳ ವಧುವ ಬೇಡಿದ.
ಕೊಟ್ಟ ಸಿಂಧು ಬಲ್ಲಾಳ ಸ್ವಯಲಿಂಗವಾದ.

ಇದು ಕಾರಣ ಇಲ್ಲಿಯೂ ಲೇಸು, ಅಲ್ಲಿಯೂ ಲೇಸು;
ಕೊಡಿರೆ, ನಮ್ಮ ಕೂಡಲಸಂಗನ ಶರಣರಿಗೆ.

– ಬಸವಣ್ಣ

ಶೈವರ ಮತ್ತು ವೈದಿಕರ ಪುರಾಣ ಕಥೆಗಳಲ್ಲಿನ ವೈವಿಧ್ಯವನ್ನು ಕೂಡ ಬಸವಣ್ಣನವರು ಕಂಡುಹಿಡಿದಿದ್ದಾರೆ. ಬಸವಣ್ಣನವರು ಶೈವಕ್ಕೆ ಅಂಟಿಕೊಂಡವರಲ್ಲ. ಆದರೆ ಶೈವರ

'ಭಕ್ತ ಪರ ನಿಲವು' ಅವರಿಗೆ ಇಷ್ಟವಾಗಿದೆ. ಹೀಗಾಗಿ ಅವರು ವೈದಿಕದ ಜೊತೆ ಶೈವವನ್ನು ಹೊಲಿಸುತ್ತಾರೆ. ಹೀಗೆ ಹೋಲಿಸುವಾಗ ತಮ್ಮ ಪರಂಪರೆಯ ಮೂಲ ವೈದಿಕ ಅಲ್ಲ ಎಂಬುದನ್ನು ಸೂಚಿಸುವುದೇ ಅವರ ಉದ್ದೇಶವಾಗಿದೆ.

ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದ್ದಿತ್ತಯ್ಯಾ!
ಆಗಮ ಹೊರತೊಲಗಿ ಅಗಲಿದ್ದಿತ್ತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ.

– ಬಸವಣ್ಣ

ಭಾರತೀಯ ಧರ್ಮ ಮತ್ತು ದರ್ಶನ ಪರಂಪರೆಯಲ್ಲಿ ದೇವರ ವಿಷಯದಲ್ಲಿ ಸ್ಥೂಲವಾಗಿ ಆರುಪ್ರಕಾರಗಳಿವೆ. ಇವೆಲ್ಲವುಗಳಿಗಿಂತ ವಿಶಿಷ್ಟವಾದ ದೇವರ ಕಲ್ಪನೆಯನ್ನು ಬಸವಣ್ಣನವರು ಹೊಂದಿದ್ದಾರೆ. ಬಸವಣ್ಣನವರ ದೇವರು ನಮ್ಮೊಳಗೇ ಇದ್ದಾನೆ. ಸಕಲಜೀವಪ್ರಿಯನಾದ ಆತ ಜಾತೀಯತೆಯಿಂದ ಕೂಡಿದ ವರ್ಣ ವ್ಯವಸ್ಥೆಯನ್ನು ಸಹಿಸುವುದಿಲ್ಲ. ವೈದಿಕ ವ್ಯವಸ್ಥೆಯ ಶ್ರೇಣೀಕೃತ ಸಮಾಜದ ಕಟ್ಟ ಕಡೆಯ ಜಾತಿಯಾದ ಮಾದಾರ ಜಾತಿಯ ಚನ್ನಯ್ಯನವರ ಮನೆಯಲ್ಲಿ ಅಂಬಲಿಯನ್ನು ಕುಡಿಯುವುದರ ಮೂಲಕ ಬಸವಣ್ಣನವರ ದೇವರು ವೈದಿಕ ವ್ಯವಸ್ಥೆಗೆ ಕೊಡಲಿಪೆಟ್ಟು ಹಾಕಿದ್ದಾನೆ.

ವೈದಿಕರ ಬಹುದೇವತಾವಾದ: ವೈದಿಕರ ಕರ್ಮಕಾಂಡವಾದ ವೇದಗಳಲ್ಲಿ ನಿಸರ್ಗ ಮೂಲದ ಅಗ್ನಿ, ವರುಣ, ವಾಯು ಮುಂತಾದವುಗಳ ಜೊತೆ ಗೋವಿನ ದೇಹದಲ್ಲೇ 33 ಕೋಟಿ ದೇವತೆಗಳಿವೆ! ಋಗ್ವೇದದ ಪುರುಷಸೂಕ್ತದ ಪ್ರಕಾರ ನಾಲ್ಕು ವರ್ಣಗಳಾಗಿವೆ. ಹೀಗೆ ಬಹುದೇವತೆಗಳನ್ನು ಮತ್ತು ಬಹುವರ್ಣೀಯ ಜನರನ್ನು ವೈದಿಕದರ್ಶನ ಸೃಷ್ಟಿಸಿದೆ. ಬಹುದೇವೋಪಾಸನೆ ವೈದಿಕದ ವಿಧಾನವಾಗಿದೆ. 'ಏಕಂ ಸತ್ ವಿಪ್ರಾಃ ಬಹುಧಾ ವದಂತಿ' (ಸತ್ಯ ಒಂದೇ ಇದೆ. ಜ್ಞಾನಿಗಳು ಅದನ್ನು ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ.) ಎಂದು ಋಗ್ವೇದ ಹೇಳಿದರೂ ವೇದಸಂಸ್ಕೃತಿ ದ್ವೈತದ ಮೇಲೆಯೆ ಅವಲಂಬಿತವಾಗಿದೆ. 'ದೇವನೊಬ್ಬ ನಾಮಹಲವು' ಎಂದು ಬಸವಣ್ಣನವರು ಹೇಳುವುದರ ಮೂಲಕ ಬಹದೇವತಾವಾದ ಎಂಬುದೊಂದು ಭ್ರಮೆ ಎಂದು ಎಚ್ಚರಿಸಿದ್ದಾರೆ.

ಶೈವರ ಏಕದೇವತಾವಾದ: ಸಗುಣ, ಸಾಕಾರ ಮತ್ತು ಹೆಂಡಿರು ಮಕ್ಕಳುಳ್ಳ ಶಿವನು ಶಿವಗಣಗಳೊಂದಿಗೆ ಇರುವ ಏಕದೇವತಾವಾದ. ಸಾಕಾರ ಮೂರ್ತಿ ಸ್ಥಾಪನೆ ಮಾಡುವುದರ ಮೂಲಕ ಮತ್ತು ಸೃಷ್ಟಿಕ್ರಿಯೆಯ ಸಂಕೇತವಾದ ಸ್ಥಾವರಲಿಂಗದ ಮೂಲಕ ಈತನ ಆರಾಧನೆ. ಶೂನ್ಯಧ್ಯಾನ ಪರಂಪರೆಯಲ್ಲಿ ಬರುವ ಯೋಗಿ ಶಿವ ಈತ ಎಂಬ ವಾದವೂ ಇದೆ. ಇತಿಹಾಸ ಪುರಾಣವಾಗುವ ಮತ್ತು ಪುರಾಣ ಇತಿಹಾಸವಾಗುವ ಇಂಥ ಪ್ರಕ್ರಿಯೆಯಲ್ಲಿ ವಿವಿಧ ಆಯಾಮಗಳಿಂದ ಈ ಒಗಟುಗಳನ್ನು

ಬಿಡಿಸಬೇಕಾಗುತ್ತದೆ. ಪುರಾಣದ ಶಿವದೇವನಾಗಲೀ, ಐತಿಹಾಸಿಕ ಯೋಗಿ ಶಿವನಾಗಲಿ ಈ ಲೋಕದ ಜೀವರುಗಳ ಪರವಾಗಿಯೇ ಇರುವುದು ಮುಖ್ಯವಾದದು. ಆದರೆ ಹುಟ್ಟು, ಸಾವುಗಳಿಲ್ಲದ ಬಸವಣ್ಣನವರ ನಿರಾಕಾರ ಶಿವನಿಗೂ ಈ ಶಿವನಿಗೂ ಸಂಬಂಧವಿಲ್ಲ. ವಚನಗಳು ಸೃಜನಶೀಲ ಸಾಹಿತ್ಯವೂ ಆಗಿರುವುದರಿಂದ ತತ್ತ್ವ ಪ್ರತಿಪಾದನೆಗಾಗಿ ಬಸವಣ್ಣನವರು ಪೌರಾಣಿಕ ಶಿವನನ್ನೂ ಸಾಂಕೇತಿಕವಾಗಿ ಬಳಸಿಕೊಳ್ಳುತ್ತಾರೆ ಎಂಬುದನ್ನು ಗಮನಿಸಿದಾಗ ಅಪಾರ್ಥಕ್ಕೆ ಎಡೆಯಾಗುವುದಿಲ್ಲ.

ಉಪನಿಷತ್ತುಕಾರರ ಏಕದೇವತಾವಾದ: ಜ್ಞಾನಕಾಂಡವಾದ ಉಪನಿಷತ್ತುಗಳು 'ವೇದಾಂತ' ಎನಿಸಿಕೊಂಡಿವೆ. 'ನಿರ್ಗುಣ, ನಿರಾಕಾರಬ್ರಹ್ಮ'ನೆಂಬ ಏಕದೇವನ ಉಪಾಸನೆಯ ಮೂಲಕ ಅದ್ವೈತವನ್ನು ಸಾಧಿಸಿವೆ. ಏಕದೇವೋಪಾಸನೆಯ ಮೂಲ ಉಪನಿಷತ್ತುಗಳಲ್ಲಿದೆ. (ಆದರೆ ಇದು ವಾಗದ್ವೈತ ಅಂದರೆ ಮಾತಿನ ಅದ್ವೈತದಲ್ಲೇ ಕೊನೆಗೊಳ್ಳುವುದು ಎಂದು ಶರಣ ನಗೆಯ ಮಾರಿತಂದೆ ಹೇಳುತ್ತಾನೆ.) ನಿರ್ಗುಣನೂ ನಿರಾಕಾರನೂ ಆದ ಬಸವಣ್ಣನವರ ತತ್ತ್ವರೂಪಿ ಶಿವ ತುಳಿತಕ್ಕೊಳಗಾದವರ ಪರ ಇದ್ದಾನೆ!

ಜೈನರ ಸ್ವಯಂ ದೇವತಾವಾದ: ಜೈನ ತತ್ತ್ವಜ್ಞಾನದ ಪ್ರಕಾರ ಮಾನವ ಜಿತೇಂದ್ರನಾಗುತ್ತ ಸ್ವಯಂ ದೇವರಾಗುವನು ಹೊರತಾಗಿ ಬೇರೆ ದೇವರಿಲ್ಲ. ಬಸವಣ್ಣನವರ ದೇವರು ಕೂಡ ನಮ್ಮೊಳಗೇ ಇದ್ದು ಅನ್ಯಾಯದ ವಿರುದ್ಧ ಹೋರಾಡಲು ಆದೇಶಿಸುತ್ತಾನೆ. ನಾವು ನಮ್ಮೊಳಗಿನ ದೇವರಿಗೆ ಶರಣಾಗತರಾದಾಗ ಈ ಜಗತ್ತಿನಲ್ಲಿ ಯಾರಿಗೂ ಶರಣಾಗತರಾಗಬೇಕಿಲ್ಲ. ನಮ್ಮ ಮುಂದೆ ಇರುವುದು ಸರ್ವ ಸಮತ್ವಕ್ಕಾಗಿ ಮಾಡಬೇಕಾದ ಹೋರಾಟ ಮಾತ್ರ ಎಂಬುದು ಬಸವಣ್ಣನವರ ನಿಲವಾಗಿದೆ.

ಲೋಕಾಯತರ ನಿರೀಶ್ವರವಾದ: ಭೌತಿಕವಾದವನ್ನು ಪ್ರತಿಪಾದಿಸುವ ಲೋಕಾಯತರು ನಿರೀಶ್ವರವಾದಿಗಳು. ಈ ಲೋಕ ಮತ್ತು ಲೋಗರ ಬಗ್ಗೆ ಲೋಕಾಯತರು ಸುಂದರವಾಗಿ ಮಾತನಾಡುತ್ತ 'ಚಾರ್ವಾಕರು' ಎನ್ನಿಸಿಕೊಂಡರು. ಬಸವಣ್ಣನವರು ಮಂದಿರವಿಲ್ಲದ, ಮೂರ್ತಿ ಇಲ್ಲದ, ಪೂಜಾರಿಗಳಿಲ್ಲದ ವ್ಯವಸ್ಥೆಗೆ ನಮ್ಮನ್ನು ಆಹ್ವಾನಿಸಿ, ನಮ್ಮೊಳಗಿರುವ ಅಂತಃಸಾಕ್ಷಿಯೆಂಬ ದೇವರ ಸಹಾಯದಿಂದ ಲೋಕದಲ್ಲಿ ನಡೆಯುತ್ತಿರವ ಅನ್ಯಾಯದ ವಿರುದ್ಧ ಹೋರಾಡಲು ಕಲಿಸಿದರು.

ಬುದ್ಧನ ಅಜ್ಞೇಯವಾದ: 'ದೇವರು ಮತ್ತು ಆತ್ಮ ಇವೆಯೊ, ಇಲ್ಲವೊ ಎಂಬದು ಮುಖ್ಯವಲ್ಲ; ಬದುಕು ಮುಖ್ಯ'ಎಂಬ ಈ ವಾದಕ್ಕೆ ಅಜ್ಞೇಯ (ಗೊತ್ತಿಲ್ಲ) ವಾದ ಎಂದು ಕರೆಯುತ್ತಾರೆ. ಲೋಕದ ಜನರ ದುಃಖದ ಮೂಲವನ್ನು ಕಂಡುಹಿಡಿದು ನಿವಾರಣೆ ಮಾಡುವ ಈ ಕ್ರಮವನ್ನು ಭಗವಾನ ಬುದ್ಧ ಅರುಹಿದ್ದಾರೆ. 'ಎರೆದಡೆ ನೆನೆಯದು, ಮರೆದಡೆ ಬಾಡದು, ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ; ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು.' ಎಂದು ಬಸವಣ್ಣನವರು ಹೇಳುವ ಮೂಲಕ ಜಂಗಮ (ಲೋಕ)ದ ದುಃಖ ನಿವಾರಣೆಯೇ ನಮ್ಮ

ಗುರಿಯಾಗಿರಬೇಕೆಂದು ಸ್ಪಷ್ಟಪಡಿಸಿದ್ದಾರೆ. 'ಇನ್ನು ಜಂಗಮವೇ ಲಿಂಗವೆಂದು ನಂಬಿದೆ' ಎಂದು ಬಸವಣ್ಣನವರು ಹೇಳುವ ಮೂಲಕ ಜೀವಜಗತ್ತನ್ನು ಕಾಪಾಡುವುದೇ ನಿಜವಾದ ಪೂಜೆ ಎಂದು ಸೂಚಿಸಿದ್ದಾರೆ.

ತಮ್ಮ ಮೇಲೆ ಪ್ರಭಾವ ಬೀರಿದ ಹಿಂದಿನ ಎಲ್ಲ ದಾರ್ಶನಿಕರ ಚಿಂತನೆಗಳನ್ನು ಬಸವಣ್ಣನವರು 'ಆದ್ಯರವಚನಗಳು' ಎಂದು ಕರೆದಿದ್ದಾರೆ. ಶೈವ, ಲೋಕಾಯತ, ಜೈನ, ಬೌದ್ಧ ಮತ್ತು ಉಪನಿಷತ್ ಪರಂಪರೆಯ ಮಹತ್ವದ್ದನ್ನು ಸ್ವೀಕರಿಸುವುದರ ಮೂಲಕ ತಮ್ಮದೇ ಆದ 'ಚೈತನ್ಯಾತ್ಮಕ ಭೌತಿಕವಾದ' ಎಂಬ 'ಬಸವಾದ್ವೈತ' ತತ್ತ್ವವನ್ನು ಸೃಷ್ಟಿಸಿ ಲೋಕಕ್ಕೆ ನೀಡಿದರು. ಇತರ ವಸ್ತುಗಳಂತೆ ಮಾನವರೂ ಸ್ಥಾವರರೇ. ಒಳಗಿನ ಚೈತನ್ಯ ಮಾತ್ರ ಜಂಗಮ. (ಚೈತನ್ಯಕ್ಕೆ ಜಂಗಮ ಎಂದೂ ಕರೆಯುವರು. ಜಂಗಮ ಮಾತ್ರ ಚಲನಶೀಲವಾದುದು. ಹಾರುವ ವಿಮಾನವೂ ಸ್ಥಾವರವೇ ಒಳಗಿರುವ ಇಂಧನವೆಂಬುದು ಚೈತನ್ಯ. 'ಸೋಹಂ ಎಂದೆನಿಸದೆ ದಾಸೋಹಂ ಎಂದೆನಿಸಯ್ಯಾ' ಎಂದು ಬಸವಣ್ಣನವರು ತಿಳಿಸಿದ್ದಾರೆ. ನಾವು ನಮ್ಮೊಳಗಿನ ಚೈತನ್ಯಕ್ಕೆ ಶರಣಾಗಿರಬೇಕು. ಆ ಮೂಲಕ ಚೈತನ್ಯದ ಜೊತೆ ಅದ್ವೈತವನ್ನು ಸಾಧಿಸಬೇಕು. ಆಗ ನಾವು ಸಕಲಜೀವಾತ್ಮರ ಜೊತೆ ಅದ್ವೈತ ಸಾಧಿಸಲು ಸಾಧಿಸಲು ಸಾಧ್ಯ. ಹೀಗೆ ಬಸವಣ್ಣನವರು ಲೋಕಮುಖಿಯಾದ ತತ್ತ್ವದ ಪ್ರತಿಪಾದಕರಾಗಿದ್ದಾರೆ.

ಲೋಕಾಯತದ ಭೂಮುಖಿ ಚಿಂತನೆ. ಶೈವದ ಗಣಸಂಸ್ಕೃತಿ, ಸಾಕಾರ ನಿರಾಕಾರ ಮಧ್ಯದ ಕುರುಹಾದ ಇಷ್ಟಲಿಂಗ ಸೃಷ್ಟಿಸುವ ಮೂಲಕ ದೇವರ ಪರಿಕಲ್ಪನೆ ಕೊಡುವ ಮೂಲಕ ಉಪನಿಷತ್ತಿನ ನಿರ್ಗುಣ, ನಿರಾಕಾರನಾದ ಏಕದೇವ ಉಪಾಸನೆ. ಜೈನರ ಅಹಿಂಸೆ, ಬೌದ್ಧರ 'ಬಹುಜನ ಹಿತಾಯ, ಬಹುಜನ ಸುಖಾಯ' ತತ್ತ್ವದಿಂದ ಕೂಡಿದ ಪ್ರಜ್ಞೆ, ಶೀಲ ಮತ್ತು ಕರುಣಾಭಾವ ಮುಂತಾದವು ಬಸವ ದರ್ಶನದಲ್ಲಿ ಮೇಳೈಸಿವೆ. ಇವೆಲ್ಲವುಗಳ ಸಹಾಯದೊಂದಿಗೆ ಬಸವಣ್ಣನವರು ತಮ್ಮ ಕಾಲದ ಸಮಾಜದ ವಿಶ್ಲೇಷಣೆ ಮಾಡಿದರು. ಆ ಸಮಾಜದೊಳಗಿನ ವೈರುಧ್ಯಗಳನ್ನು ಕಂಡುಹಿಡಿದರು.

ಕಾರ್ಲ್ ಮಾರ್ಕ್ಸ್ ಹೇಳಿದಂತೆ ಮಾನವ ಸಮಾಜದ ಇತಿಹಾಸವು ವರ್ಗಹೋರಾಟಗಳ ಇತಿಹಾಸವೇ ಆಗಿದೆ. ಸಮಾಜದೊಳಗಿನ ವರ್ಗಗಳನ್ನು ಕಂಡುಹಿಡಿದು ಶೋಷಣೆಯ ವಿರುದ್ಧ ವಿಜಯ ಸಾಧಿಸಿದಾಗಲೆ ಸಾಮಾಜಿಕ ನ್ಯಾಯ ಸಿಗಲು ಸಾಧ್ಯ ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿತ್ತು. ವೈದಿಕರ ಕುತಂತ್ರದಿಂದಾಗಿ ಜಾತಿಗಳ ಒಳಗೆ ಬಡ ಮತ್ತು ಶ್ರೀಮಂತ ವರ್ಗಗಳು ಅಡಗಿ ಕುಳಿತದ್ದನ್ನು ಬಸವಣ್ಣನವರು ಗುರುತಿಸಿದರು. ಜಾತಿಗಳನ್ನು ಒಡೆದರು. ಕೆಳಜಾತಿಗಳ ಒಳಗೆ ಬಡವರ್ಗ ಮತ್ತು ಮೇಲ್ಜಾತಿಗಳ ಒಳಗೆ ಶ್ರೀಮಂತ ವರ್ಗ ಇರುವುದನ್ನು ಬಹಿರಂಗ ಪಡಿಸಿದರು. ತಾವು ಉಳ್ಳವರ ಜೊತೆ ಇರುವವರಲ್ಲ, ಬಡವರ ಜೊತೆ ಇರುವವರು ಎಂಬುದನ್ನು ಸಾರಿ ಹೇಳಿದರು. ಈ ಬಡವರೇ ಅಸ್ಪೃಶ್ಯರು ಮತ್ತು ವಿವಿಧ ಕಾಯಕಗಳನ್ನು ಮಾಡುತ್ತಿದ್ದ ಶೂದ್ರರು. ತಾವು ಕೆಳಜಾತೀಕರಣ ಹಾಗೂ

ಕೆಳವರ್ಗೀಕರಣಗೊಂಡು ಬದುಕಿ ತೋರಿಸುವುದರ ಮೂಲಕ ದಲಿತರು ಮತ್ತು ಬಡವರ ಪರವಾಗಿ ಹೋರಾಡುವುದನ್ನು ಕಲಿಸಿದರು.

ಒಡೆಯರು ಬಂದರೆ ಗುಡಿ ತೋರಣವ ಕಟ್ಟಿ,
ನಂಟರು ಬಂದಡೆ ಸಮಯವಿಲ್ಲೆನ್ನಿ,
ಅಂದೇಕೆ ಬಾರರು?
ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು.
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ?

– ಬಸವಣ್ಣ

ಶೋಷಣೆ ಇಲ್ಲದ ನವಸಮಾಜ ನಿರ್ಮಾಣದ ತತ್ತ್ವಗಳನ್ನು ಸಾರುವ ಬಡ ನೀತಿಜಂಗಮರೇ ಬಸವಣ್ಣನವರ ಒಡೆಯರು. ಅವರು ಬಂದಾಗ ಧ್ವಜ ಹಿಡಿದು ಮತ್ತು ತೋರಣ ಕಟ್ಟಿ ಸ್ವಾಗತಿಸಲು ತಿಳಿಸುವ ಅವರು, ತಮ್ಮ ರಕ್ತ ಸಂಬಂಧಿಕರು ಬಂದರೆ ಸಮಯ (ಧರ್ಮ) ಇಲ್ಲ ಎಂದು ಹೇಳಬೇಕೆನ್ನುತ್ತಾರೆ. ಕಂದಾಚಾರದಿಂದ ಹೊರಗಾಗಿ ಮಾನವೀಯ ಧರ್ಮದ ಆಚರಣೆಗೆ ಒಳಗಾದಾಗ ಅವರೇಕೆ ರಕ್ತಸಂಬಂಧವನ್ನು ಹಿಡಿದುಕೊಂಡು ಬರಲಿಲ್ಲ. (ಈಗ ಪ್ರಧಾನಿಯಾದ ಮೇಲೆ ಬಂದದ್ದೇಕೆ?) ನಾನಂದು ವೈದಿಕ ವ್ಯವಸ್ಥೆಯಲ್ಲಿ ಕಬ್ಬಿಣವಾಗಿದ್ದೆ. ಈಗ ಮಾನವೀಯ ತತ್ತ್ವವೆಂಬ ಪರುಷ ಮುಟ್ಟಿದ ಕಾರಣ ಚೊಕ್ಕ ಚಿನ್ನವಾಗಿದ್ದೇನೆ. ಈಗ ನನಗೆ ವೈದಿಕ ಬಂಧುಗಳಿಲ್ಲ. ಜಾತಿಸಂಕರವಾಗಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣರೇ ನನ್ನ ಬಂಧುಗಳು ಎಂಬುದನ್ನು ದೃಢನಿರ್ಧಾರದ ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ.

ವೈದಿಕ ವ್ಯವಸ್ಥೆಯಿಂದ ಹೊರಬಂದ ಬಸವಣ್ಣನವರು ಲೋಕಾಯತ, ಬುದ್ಧ ಮುಂತಾದ ಅವೈದಿಕ ಪರಂಪರೆಯ ಮುಂದುವರಿದ ಭಾಗವಾಗುತ್ತಾರೆ. ಈ ಅವೈದಿಕ ಪರಂಪರೆಯ ಕೊಂಡಿಯನ್ನು ಮಾನವಕುಲ ಕಳಚಿಕೊಂಡರೆ ವೈದಿಕರ ಗುಲಾಮಗಿರಿಯಲ್ಲಿ ಬೀಳುವುದು ಅನಿವಾರ್ಯವಾಗುತ್ತದೆ. ಹಿಂದು ಎಂಬ ಶಬ್ದ ಯಾವುದೇ ವೇದ, ಶಾಸ್ತ್ರ ಮತ್ತು ಪುರಾಣಗಳಲ್ಲಿ ಇಲ್ಲ. ಸಿಂಧು ನದಿಯ ಪ್ರದೇಶದಲ್ಲಿರುವವರಿಗೆಲ್ಲ ಅರಬರು 'ಹಿಂದು' ಎಂದು ಕರೆದರು. ಅರಬಿ ಭಾಷೆಯಲ್ಲಿ 'ಸ' ಅಕ್ಷರ'ಹ' ಆಗಿ ಪರಿವರ್ತನೆ ಆಗುವುದರಿಂದ. ಸಿಂಧು ಹೋಗಿ ಹಿಂದು ಆಯಿತು. ಆದ್ದರಿಂದ ಹಿಂದು ಧರ್ಮವು ನಿಜವಾದ ಅರ್ಥದಲ್ಲಿ ವೈದಿಕ ಧರ್ಮವೇ ಆಗಿದೆ. ಇಂದು ಶೈವ ಮುಂತಾದ ಅವೈದಿಕ ಪಂಥಗಳು ಸಾಮಾನ್ಯ ಅರ್ಥದಲ್ಲಿ ಜಾತಿ, ಕುಲ, ಮತ, ಪಂಥಗಳಿಂದ ಕೂಡಿದ ಹಿಂದುಧರ್ಮದ ಭಾಗಗಳಾಗಿ ಹೋಗಿವೆ. ಈ ಭಾಗವಿಭಾಗಗಳಿಗೆ ಸೇರಿದವರೆಲ್ಲ ವೈರುಧ್ಯಗಳಿಂದ ಬದುಕುತ್ತಿದ್ದರೂ ಹಿಂದುಧರ್ಮ ಎಂಬ ಪರಿಧಿಯಲ್ಲಿ ಬರುವಂತೆ ವೈದಿಕರು ಸಹಸ್ರಾರು ವರ್ಷಗಳಿಂದ ವ್ಯವಸ್ಥಿತವಾಗಿ

ನೋಡಿಕೊಂಡು ಬಂದಿದ್ದಾರೆ. ಶೂದ್ರರು, ಅಂದರೆ ಜನಿವಾರ ಇಲ್ಲದವರು 'ಅವೈದಿಕ ಹಿಂದುಗಳು' ಎಂದು ಕರೆದುಕೊಳ್ಳುವುದು ಹೆಚ್ಚು ಸೂಕ್ತ. ಯಾವುದೇ ದೃಷ್ಟಿಯಿಂದಲೂ ಅವರು ವೈದಿಕ ಹಿಂದುಗಳಲ್ಲ. ವೈದಿಕವನ್ನು ಅವರ ಮೇಲೆ ಹೇರಲಾಗುತ್ತಿದೆ ಅಷ್ಟೆ. ಆದರೆ ಬಸವಧರ್ಮವಾದ ಲಿಂಗವಂತ ಧರ್ಮವು ಜೈನ, ಬೌದ್ಧ, ಸಿಖ್, ಪಾರ್ಸಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಂತೆ ಸ್ವತಂತ್ರವಾದ ಅಲ್ಪಸಂಖ್ಯಾತ ಧರ್ಮವಾಗಿದೆ.

ಶರಣರ ವಚನಗಳಲ್ಲಿನ ಅನುಭಾವ ('ಅಧ್ಯಾತ್ಮ' ಪದ ಪ್ರಯೋಗ ಶರಣರಿಗೆ ಹಿಡಿಸುವುದಿಲ್ಲ. ಅದು ಮನುಷ್ಯರನ್ನು ಭೌತಿಕ ಜಗತ್ತಿನಿಂದ ದೂರ ಒಯ್ಯುತ್ತದೆ. ಆದರೆ ಶರಣರ 'ಅನುಭಾವ' ಭೌತಿಕ ಜಗತ್ತಿನ ಅನುಭವದ ಮೇಲೆ ನಿಂತಿದೆ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' ಎಂದು ಬಸವಣ್ಣನವರು ತಿಳಿಸಿದ್ದಾರೆ.) ಭೌತಿಕ ಜಗತ್ತಿನ ಮಹತ್ವವನ್ನು ಎತ್ತಿಹಿಡಿಯುತ್ತದೆ ಮತ್ತು ಅದನ್ನು ಮಾನವೀಯಗೊಳಿಸುತ್ತದೆ. ಆದರೆ ವೈದಿಕರ ಅಧ್ಯಾತ್ಮದಲ್ಲಿ ಭೌತಿಕ ಜಗತ್ತಿಗೆ ಸ್ಥಾನವಿಲ್ಲ. ಇಂಥ ಮೋಸದ ಅಧ್ಯಾತ್ಮವನ್ನು ಸಾರುವ ಬ್ರಾಹ್ಮಣ್ಯವನ್ನು ಬಸವಣ್ಣನವರು ಅಲ್ಲಗಳೆದಿದ್ದಾರೆ.

ಎಲ್ಲವೂ ಬಯಲಿನಿಂದ ಸೃಷ್ಟಿಯಾಗಿದೆ ಎಂಬ ಬಸವಣ್ಣನವರ ವಾದ ವೈಜ್ಞಾನಿಕವಾಗಿದೆ. ಕಣ್ಣಿಗೆ ಕಾಣದ ಚೈತನ್ಯದಿಂದ ಒಡಮೂಡಿದ ವಿಶ್ವವೆಂಬ ವಸ್ತು ಕಣ್ಣಿಗೆ ಕಾಣುವ ಚೈತನ್ಯವಾಗಿದೆ. ಕಣ್ಣಿಗೆ ಕಾಣುವ ಚೈತನ್ಯವೇ ಸ್ಥಾವರ. ಕಣ್ಣಿಗೆ ಕಾಣದ ಚೈತನ್ಯವೇ ಜಂಗಮ. ಈ ಕಾರಣದಿಂದಲೇ ಬಸವಣ್ಣನವರು 'ಸ್ಥಾವರ ಜಂಗಮ ಒಂದೇ' ಎಂದಿದ್ದಾರೆ. ಆಯುಷ್ಯ ಮುಗಿದ ಮೇಲೆ ಸ್ಥಾವರವು ತನ್ನ ರೂಪ ಕಳೆದುಕೊಳ್ಳುವುದರಿಂದ 'ಸ್ಥಾವರಕ್ಕಳಿವುಂಟು' ಎಂದು ತಿಳಿಸಿದ್ದಾರೆ. ಸ್ಥಾವರವು ತನ್ನ ಅಸ್ತಿತ್ವ ಕಳೆದುಕೊಂಡಮೇಲೆ ಜಂಗಮವಾಗುತ್ತದೆ. ಅಂದರೆ ಕಣ್ಣಿಗೆ ಕಾಣುವ ಚೈತನ್ಯವು ತನ್ನ ಮೂಲಸ್ವರೂಪವಾದ ಕಣ್ಣಿಗೆ ಕಾಣದ ಚೈತನ್ಯವಾಗುತ್ತದೆ.

ಈ ಕಣ್ಣಿಗೆ ಕಾಣುವ ಚೈತನ್ಯವು ಒಂದು ದಿನ ಮಾಯವಾಗಿ ಕಣ್ಣಿಗೆ ಕಾಣದ ಚೈತನ್ಯದಲ್ಲಿ ಲೀನವಾಗುವುದು ಎಂದರೆ ಸೂರ್ಯ ಮುಂತಾದ ನಕ್ಷತ್ರಗಳು ಕೂಡ ಮಾಯವಾಗುವವು ಎಂದರ್ಥ. ಕಣ್ಣಿಗೆ ಕಾಣುವ ಚೈತನ್ಯದೊಳಗೆ ಅಂದರೆ ವಸ್ತುವಿನೊಳಗೂ ಕಣ್ಣಿಗೆ ಕಾಣದ ಚೈತನ್ಯವಿರುವದು. ಆ ಚೈತನ್ಯ ಒಳಗೆ ಇರುವವರೆಗೆ ಕಣ್ಣಿಗೆ ಕಾಣುವಂಥದ್ದು ಜೀವಂತವಗಿರುವುದು. ಪ್ರಾಣ ಹೋದಮೇಲೆ ದೇಹವು ಮೃತದೇಹವಾಗುವ ಹಾಗೆ ಅಣು ಕೂಡ ಒಂದು ದಿನ ಚೈತನ್ಯವನ್ನು ಕಳೆದುಕೊಂಡು ಬಯಲಾಗುವುದು. ಅಂದರೆ ಮೂಲಚೈತನ್ಯದಲ್ಲಿ ಒಂದಾಗುವುದು. ಈ ಮೂಲ ಚೈತನ್ಯವನ್ನೇ ಬಸವಣ್ಣನವರು ದೇವರು ಎಂದು ಕರೆದಿದ್ದಾರೆ. ಹೀಗೆ ವಚನಸಾಹಿತ್ಯವು ವೈಜ್ಞಾನಿಕ ಮನೋಭಾವದಿಂದ ಕೂಡಿದ ಆಧುನಿಕ ಸಮಾಜದ ಕನಸುಗಳನ್ನು ಬಿತ್ತುವ ಸಾಹಿತ್ಯವಾಗಿದೆ.

ಕವಿತ್ವ ಸಾಧಕರೆಲ್ಲ ಕಳವಳಿಸಿ ಹೋದರು
ವಿದ್ಯಾಸಾಧಕರೆಲ್ಲ ಬುದ್ಧಿಗೆಟ್ಟರು

ತತ್ತ್ವ ಸಾಧಕರೆಲ್ಲ ಭಕ್ತಿಹೀನರಾದರು
ಲಿಂಗಸಾಧಕರೆಲ್ಲ ಭೂಭಾರಕರಾದರು
ಕೂಡಲಚನ್ನಸಂಗಮದೇವಾ ನಿಮ್ಮ ಬಸವಣ್ಣ
ಜಂಗಮಸಾಧಕನಾಗಿ ಸ್ವಯಂಲಿಂಗವಾದನು.

– ಚನ್ನಬಸವಣ್ಣ

ಕಾವ್ಯದಲ್ಲಿ ಕರುಣಾರಸ ಹರಿಸಬಹುದು. ಆದರೆ ನಿಜಜೀವನದಲ್ಲಿ ಹಾಗೆ ಕ್ರಿಯಾಶೀಲವಾಗಿ ಜನರ ಕಣ್ಣೀರನ್ನು ಒರೆಸುವಂಥ ಸಾಧನೆ ಮಾಡುವುದು ಅವಶ್ಯವಾಗಿದೆ. ವಿದ್ಯೆಯನ್ನು ಸ್ವಾರ್ಥಕ್ಕಾಗಿ ಬಳಸುವ ಸಂಪ್ರದಾಯ ನಮ್ಮಲ್ಲಿದೆ. ಅದೇ ಕಾರಣದಿಂದ ಶೂದ್ರರಿಗೆ ಮತ್ತು ಅತಿಶೂದ್ರರಿಗೆ ಅಕ್ಷರ ಜ್ಞಾನ ಸಿಗಲಿಲ್ಲ. ಸಿಕ್ಕಿದ್ದು ಅಲ್ಪಸಂಖ್ಯಾತರಾದ ಬ್ರಾಹ್ಮಣರು ಮತ್ತು ಇತರ ಸವರ್ಣೀಯರಿಗೆ ಮಾತ್ರ! ಹೀಗೆ ವಿದ್ಯಾಸಾಧಕರು ಕ್ರೂರಿಗಳಾಗಿ ಬದುಕುತ್ತ ಬುದ್ಧಿಗೆಟ್ಟು ಹೋದರು. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ ತ್ರಿಮತಸ್ಥರು ಸದಾ ತಮ್ಮ ಮತ ಶ್ರೇಷ್ಠ ಎನ್ನುವುದರಲ್ಲೇ ಕಾಲ ಕಳೆದರು. ಇಂಥ ತತ್ತ್ವ ಸಾಧನೆಯಲ್ಲಿ ಮಾನವೀಯತೆ ಎಂಬ ಭಕ್ತಿಭಾವ ಮರೆತು ಭಕ್ತಿಹೀನರಾದರು. ಸರ್ವಸಮತ್ವದಿಂದಿರುವುದೇ ಭಕ್ತಿ ಎಂಬುದು ಅವರಿಗೆ ಹೊಳೆಯಲೇ ಇಲ್ಲ. ಲಿಂಗಸಾಧಕರು ಕೂಡ ಧಾರ್ಮಿಕ ಸಂಪ್ರದಾಯಗಳಲ್ಲೇ ಮುಳುಗುತ್ತ ಭೂಮಿಗೆ ಭಾರವಾದರು. ಆದರೆ ಬಸವಣ್ಣನವರು ಈ ಭೂಮಿಯ ಮೇಲಿನ ದುಃಖ ನಿವಾರಣೆಗಾಗಿ ತಮ್ಮ ಬದುಕನ್ನೇ ಮುಡಿಪಿಟ್ಟು ಸಮಾಜವೆಂಬ ಜಂಗಮದಲ್ಲಿ ಸಮಾನತೆಯ ಯಶಸ್ಸನ್ನು ಸಾಧಿಸಿ ಸ್ವಯಂ ದೇವಸ್ವರೂಪರೇ ಆದರು ಎಂಬುದನ್ನು ಚನ್ನಬಸವಣ್ಣನವರು ಭಾವಪೂರ್ಣವಾಗಿ ತಿಳಿಸಿದ್ದಾರೆ.

ಲಿಂಗಭಕ್ತನ ವಿವಾಹದಲ್ಲಿ ಶಿವಗಣಂಗಳಿಗೆ
ವಿಭೂತಿ ವೀಳೆಯವ ಕೊಟ್ಟು ಆರೋಗಣೆಯ ಮಾಡಿಸಿ
ಶಿವಗಣಂಗಳು ಸಾಕ್ಷಿಯಾಗಿ ಪ್ರಸಾದವನಿಕ್ಕುವುದೇ ಸದಾಚಾರವಲ್ಲದೆ,
ವಾರ ತಿಥಿ ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ
ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚನ್ನಸಂಗಮದೇವಾ.

– ಚನ್ನಬಸವಣ್ಣ

ಎಂದು ಚನ್ನಬಸವಣ್ಣನವರು ಅನಿಶ್ಚಿತ ಹೇಳಿಕೆಗಳ ಪಂಚಾಂಗವನ್ನು ತಿರಸ್ಕರಿಸುತ್ತ ವೈಚಾರಿಕ ಪ್ರಜ್ಞೆಯನ್ನು ಎತ್ತಿ ಹಿಡಿದಿದ್ದಾರೆ. 'ಗುರು ಕೊಂಡುಮಾರಿದ ಈ ಲಿಂಗಬಿದ್ದಡೆ ಸಮಾಧಿಯುಂಟೆ?' ಎಂದು ಮೂಢನಂಬಿಕೆಗಳನ್ನು ಅಲ್ಲಗಳೆದಿದ್ದಾರೆ.

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ–ವ್ಯತೀಪಾತದಿಂದ ವೆಗ್ಗಳ,

ಸೂಕ್ಷ್ಮ ಶಿವಪಥವನರಿದಂಗೆ
ಹೋಮ-ನೇಮ-ಜಪ-ತಪದಿಂದ ವೆಗ್ಗಳ,
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ.

– ಬಸವಣ್ಣ

ಎಂದು ಬಸವಣ್ಣನವರು ವೈದಿಕದ ಎಲ್ಲ ಅಂಗಾಂಗಗಳನ್ನು ನಿಷ್ಕ್ರಿಯಗೊಳಿಸುತ್ತಾರೆ. ಶಿವಪಥವನು ಅರಿಯುವುದು ಎಲ್ಲಕ್ಕಿಂತ ಹೆಚ್ಚಿನದು ಎಂದು ಹೇಳುತ್ತಾರೆ. 'ಅಷ್ಟಮಿ ನವಮಿ ಎಂಬ ಕಲ್ಪಿತವೇಕೊ ಶರಣಂಗೆ?' ಎಂದು ಪ್ರಶ್ನಿಸುತ್ತಾರೆ. 'ವೇದಶಾಸ್ತ್ರದವರ ಹಿರಿಯರೆನ್ನೆ, ಮಾಯಾಭ್ರಾಂತಿ ಕವಿದ ಗೀತಜ್ಞರ (ಭಗವದ್ಗೀತಾ ತಜ್ಞರ) ಹಿರಿಯರೆನ್ನೆ' ಎಂದು ಘೋಷಿಸುತ್ತಾರೆ.

ಪುಣ್ಯ ಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯಾ?
ಇವನಾರುಂಬರು?
ಕಾಯ ತಾನುಂಬಡೆ ಕಾಯ ತಾ ಮಣ್ಣು,
ಜೀವ ತಾನುಂಬಡೆ ಜೀವ ತಾ ಬಯಲು,
ಈ ಉಭಯ ನಿರ್ಣಯವ ಕೂಡಲಸಂಗಮದೇವಾ
ನಿಮ್ಮ ಶರಣ ಬಲ್ಲ.

– ಬಸವಣ್ಣ

ಕರ್ಮ ಸಿದ್ಧಾಂತದ ಪುಣ್ಯ ಪಾಪಗಳನ್ನು ಹೀಗೆ ಬಸವಣ್ಣವರು ತಿರಸ್ಕರಿಸಿದ್ದಾರೆ. ಇವು ದೇಹಕ್ಕಾಗಲೀ ಜೀವಕ್ಕಾಗಲೀ ಅಂಟಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಮಣ್ಣಾಗುವ ದೇಹಕ್ಕೆ ಮತ್ತು ಬಯಲಾಗುವ ಜೀವಕ್ಕೆ ಪುನರ್ಜನ್ಮವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಆಚಾರವೇ ಸ್ವರ್ಗ, ಅನಾಚಾರವೇ ನರಕ' ಎಂದು ಹೇಳುವ ಮೂಲಕ ಸ್ವರ್ಗ ನರಕಗಳನ್ನು ಅಲ್ಲಗಳೆದಿದ್ದಾರೆ. 'ಕೂಡಲಸಂಗನ ಶರಣರು ಅಚ್ಚ ಲಿಂಗೈಕ್ಯರು' ಎಂದು ತಿಳಿಸಿ ಮೋಕ್ಷವನ್ನು ಅಲ್ಲಗಳೆದಿದ್ದಾರೆ. 'ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ, ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ' ಎನ್ನುತ್ತ ಮಾನವನ ಅಭ್ಯುದಯಕ್ಕೆ ಮಾರಕವಾಗಿರುವ ಕರ್ಮಸಿದ್ಧಾಂತವನ್ನು ತಿರಸ್ಕರಿಸಿದ್ದಾರೆ. ಕರ್ಮಸಿದ್ಧಾಂತವು ಬಹಳ ದುಷ್ಟ ತಂತ್ರವಾಗಿದೆ. ಸಂಚಿತ ಕರ್ಮ, ಪ್ರಾರಬ್ಧ ಕರ್ಮ ಮತ್ತು ಆಗಾಮಿ ಕರ್ಮದ ಬಲೆಗಳಲ್ಲಿ ಸಿಲುಕಿಸುವುದರ ಮೂಲಕ ವ್ಯಕ್ತಿಯ ಪೂರ್ವಾಪರಗಳೊಂದಿಗೆ ಭವಿಷ್ಯ ಹೇಳುವ ದುಷ್ಕರ್ಮಿಗಳು ಎಲ್ಲ ರೀತಿಯ ಐಶಾರಾಮಿ ಜೀವನ ಸಾಗಿಸುತ್ತಾರೆ.

ವೈದಿಕ ಧರ್ಮ ಇಂಥ ಕರ್ಮಸಿದ್ಧಾಂತದ ಮೇಲೆ ನಿಂತಿದ್ದನ್ನು ಬಸವಣ್ಣನವರು ಚನ್ನಾಗಿ ಗುರುತಿಸಿದ್ದಾರೆ. ಬಸವಣ್ಣನವರ ಭಕ್ತಿಸಾಮ್ರಾಜ್ಯ ಸರ್ವಸಮತ್ವದ ಮೇಲೆ ನಿಂತಿದೆ. ಅಂದರೆ ಅಲ್ಲಿ ಅಸ್ಪೃಶ್ಯತೆ ಇಲ್ಲ, ಜಾತಿಭೇದವಿಲ್ಲ, ಕಾಯಕಭೇದವಿಲ್ಲ, ಲಿಂಗಭೇದವಿಲ್ಲ, ವರ್ಣ ಮತ್ತು ವರ್ಗಭೇದಗಳಿಲ್ಲ. ಇಂಥ ಭಕ್ತಿ ಸಾಮ್ರಾಜ್ಯದ ಸಮಾಜಕ್ಕೆ

ಬಸವಣ್ಣನವರು ಶರಣಸಂಕುಲವೆಂದು ಕರೆದರು. ಶರಣರು ಸರ್ವಸಮಾನತೆಯ ವಕ್ತಾರರಾಗಿ 'ನುಡಿದಂತೆ ನಡೆದು' ಬದುಕಿ ತೋರಿಸಿದರು. 'ಜಾತಿ ಸಂಕರವಾದ ಬಳಿಕ ಕುಲವನರಸುವರೆ' ಎಂದು ಬಸವಣ್ಣನವರು ಪ್ರಶ್ನಿಸಿದರು. ಶೂದ್ರರಿಗೆ ಯಾತನಾಮಯವಾಗಿರುವ 'ವರ್ಣವ್ಯವಸ್ಥೆ' ಮನುವಾದಿಗಳಿಗೆ ಐಶಾರಾಮಿ ವ್ಯವಸ್ಥೆಯಾಗಿದೆ. ಈ ವರ್ಣವ್ಯವಸ್ಥೆಯು ಕರ್ಮಸಿದ್ಧಾಂತದ ಮೇಲೆ ನಿಂತ ಕಾರಣ ಕರ್ಮಸಿದ್ಧಾಂತದ ತಾಯಿಬೇರಾದ ಅಸಮಾನತೆಯನ್ನು ಕೊಚ್ಚಿಹಾಕದೆ ವರ್ಣವ್ಯವಸ್ಥೆಯನ್ನು ನಿರ್ನಾಮ ಮಾಡಲು ಸಾಧ್ಯವಿಲ್ಲ. ಬಹುಜನರಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಶೋಷಣೆಯ ಮೂಲವಾದ ಕರ್ಮಸಿದ್ಧಾಂತವು ಮೂಢನಂಬಿಕೆಯ ಆಗರವಾಗಿದೆ; ಭೇದಭಾವದ ಗಂಗೋತ್ರಿಯಾಗಿದೆ. ಈ ಕರ್ಮಸಿದ್ಧಾಂತವು ಲೋಕಕ್ಕೆ ಪುಣ್ಯ, ಮೋಕ್ಷ ಮತ್ತು ಸ್ವರ್ಗದ ಆಸೆ ಹಚ್ಚಿಸಿದೆ. ಪಾಪ, ನರಕ ಮತ್ತು ದುಃಖದಿಂದ ಕೂಡಿದ ಪುನರ್ಜನ್ಮದ ಭಯ ಹುಟ್ಟಿಸಿದೆ. 'ಭಯವೇ ಧರ್ಮದ ಮೂಲ' ಎನ್ನುವಂತೆ ಧರ್ಮದ ರೂಪುರೇಷೆಗಳನ್ನು ಸೃಷ್ಟಿಸಲು ಸಹಕಾರಿಯಾಗಿದೆ. ಮಾನವನ ಸುಖ ಮತ್ತು ದುಃಖಗಳು ಪೂರ್ವ ನಿರ್ಧಾರಿತ ಎಂಬ ಭ್ರಮೆಯನ್ನು ಸೃಷ್ಟಿಸಿದೆ. 'ಇದುಶುಭ ಗಳಿಗೆ, ಇದು ಕೆಟ್ಟ ಗಳಿಗೆ' ಎಂದು ಕಾಲನಿರ್ಣಯ ಮಾಡಿದೆ. ನಮ್ಮ ಹಸ್ತರೇಖೆಗಳು ನಮ್ಮನ್ನು ಭವಿಷ್ಯದ ಕಡೆಗೆ ಒಯ್ಯುವ ದಾರಿಪಟ ಎಂಬ ನಂಬಿಕೆಗೆ ಕಾರಣವಾಗಿವೆ. ಜನ್ಮಜನ್ಮಾಂತರಗಳಲ್ಲಿ ರಾಶಿಯಾಗುತ್ತ ಬಿದ್ದಿರುವ ಸಂಚಿತ ಕರ್ಮ, ನಿಕಟಪೂರ್ವ ಜನ್ಮದ ಪ್ರಾರಬ್ಧ ಕರ್ಮ ಮತ್ತು ಮುಂಬರುವ ಜನ್ಮದಲ್ಲಿ ಬರುವ ಆಗಾಮಿ ಕರ್ಮಗಳ ಸುಳ್ಳು ಸೃಷ್ಟಿಯ ಮೂಲಕ ಮಾನವ ಸಮಾಜ ಎಂದೆಂದೂ ಬದಲಾಗದೆ ಮನೋರೋಗಿಗಳ ತಾಣವಾಗುವಂತೆ ನೋಡಿಕೊಂಡಿದೆ.

ಲಿಂಗವ ಪೂಜಿಸಿ ಫಲವೇನಯ್ಯಾ
ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

– ಬಸವಣ್ಣ

ಬಸವಣ್ಣನವರು ತಿಳಿಸಿದ ಇಷ್ಟಲಿಂಗ ಪೂಜೆ ಎಲ್ಲ ಅನಿಷ್ಟಗಳಿಗೆ ಮಾರಕವಾಗಿದೆ. ಇದೊಂದು ಅರಿವಿನ ಮಾರ್ಗವಾಗಿದೆ. ಮನುಷ್ಯರನ್ನು ಎಲ್ಲ ರೀತಿಯ ಮೂಢನಂಬಿಕೆಗಳಿಂದ ಹೊರತಂದು ಎಲ್ಲರೀತಿಯ ಸಮಾನತೆಯ ಕಡೆಗೆ ಒಯ್ಯುವಂಥದ್ದಾಗಿದೆ. 'ಪುರುಷರು ಮೇಲು ಮತ್ತು ಸ್ತ್ರೀಯರು ಕೀಳು' ಎಂಬ ಲಿಂಗಭೇದ ಮಾಡದೆ ಇರುವುದು (ಸಮರತಿ), 'ಬ್ರಹ್ಮಕಳೆ', 'ಕ್ಷಾತ್ರಕಳೆ' ಎಂದು ವರ್ಣಭೇದ ಮಾಡದೆ ಇರುವುದು (ಸಮಕಳೆ), ಮತ್ತು 'ಬಡವ' ಮತ್ತು 'ಶ್ರೀಮಂತ' ಎಂಬ ವರ್ಗಭೇದ ಮಾಡದೆ ಇರುವುದು (ಸಮಸುಖ) ಲಿಂಗಪೂಜಾ ಫಲವಾಗಿದೆ.

ಅಲ್ಲದೆ ನದಿಯೊಳಗೆ ನದಿ ಬೆರೆಸಿದಂತೆ ಸಕಲಜೀವಾತ್ಮರೊಂದಿಗೆ ಒಂದಾಗಿ ಬದುಕುವ ಅರಿವು ಕೂಡ ಇಷ್ಟಲಿಂಗಪೂಜಾ ಫಲವೇ ಆಗಿದೆ. ಹೀಗೆ ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದಗಳನ್ನು ಅಲ್ಲಗಳೆದು ಸಮತಾವಾದಿ ಸಮಾಜವನ್ನು ಸ್ಥಾಪಿಸುವುದೇ ಬಸವಧರ್ಮದ ಗುರಿಯಾಗಿದೆ. ಬಸವಧರ್ಮ ಎಂದರೆ ಸಮಾನತೆಯ ತತ್ತ್ವಜ್ಞಾನದಿಂದ ಕೂಡಿದ ಜೀವನವಿಧಾನ.

'ಫಲಾಪೇಕ್ಷೆ ಇಲ್ಲದೆ ಕರ್ಮಮಾಡು' ಎಂದು ಭಗವದ್ಗೀತೆ ಹೇಳುತ್ತದೆ. ಆದರೆ ಫಲಾಪೇಕ್ಷೆ ಇಲ್ಲದೆ ಲಿಂಗಪೂಜೆಯನ್ನೂ ಮಾಡಬೇಡ ಎಂದು ದುಡಿಯುವ ವರ್ಗದ ನಾಯಕ ಬಸವಣ್ಣನವರು ತಿಳಿಸುತ್ತಾರೆ. 'ಲಿಂಗವಪೂಜಿಸಿ ಫಲವೇನಯ್ಯಾ' ಎಂಬುದು ಬಸವಣ್ಣನವರು ಲಿಂಗವಂತರಿಗೆ ಹಾಕಿದ ಪ್ರಶ್ನೆಯಾಗಿದೆ. ಬಸವಣ್ಣನವರು ಲಿಂಗಪೂಜಾ ಫಲವನ್ನು ಬಯಸುತ್ತಾರೆ. ಈ ಪೂಜಾ ಫಲವು ಭೌತಿಕವಾದುದಲ್ಲ, ಅರಿವಿಗೆ ಸಂಬಂಧಿಸಿದುದು. ಲಿಂಗಪೂಜಾ ಫಲವೆಂಬ ಅರಿವು ನಮ್ಮ ಒಳಲೋಕ ಮತ್ತು ಹೊರಲೋಕವನ್ನು ಒಂದಾಗಿಸುವಂಥದ್ದು. ಸಕಲ ಜೀವಾತ್ಮರ ಬಗ್ಗೆ ಸಮಾನತೆಯ ಭಾವ ತಾಳುವಂಥ ಅರಿವನ್ನು ಪಡೆಯುವುದೇ ಇಷ್ಟಲಿಂಗ ಪೂಜಾಫಲ.

ದೇವರ ಸಂಕೇತವಾದ ಇಷ್ಟಲಿಂಗದ ಪೂಜೆ ಎಂಬ ಶಿವಯೋಗದಿಂದ 'ದೊರೆಯುವ' ಪರಮಾತ್ಮ ಮತ್ತು ನಮ್ಮ ಅಂಗದಲ್ಲಿರುವ ಜೀವಾತ್ಮ ಒಂದಾಗಬೇಕು. ಆಗ ಜೀವಾತ್ಮನ ದೃಷ್ಟಿ ಪರಮಾತನ ದೃಷ್ಟಿಯಾಗುತ್ತದೆ. ಆ ದೃಷ್ಟಿ ಸರ್ವರೀತಿಯ ಸಮಭಾವದಿಂದ ತುಂಬಿರುತ್ತದೆ. ಇದನ್ನು ಸಾಧಿಸಲಿಕ್ಕಾಗಿಯೇ ಇಷ್ಟಲಿಂಗ ಪೂಜೆ ಅಥವಾ ಶಿವಯೋಗದ ಸಾಧನೆ ಮಾಡುವುದು ಅವಶ್ಯವಾಗಿದೆ. ಹೀಗೆ ಸಾಧನೆ ಮಾಡಿದವರು ತಮ್ಮ ಆತ್ಮದಲ್ಲಿರುವ ಘನವನ್ನು ಅರಿತುಕೊಳ್ಳುತ್ತಾರೆ.

ಲಿಂಗಾಂಗಸಾಮರಸ್ಯವನ್ನು ಸಾಧಿಸಬೇಕಾದರೆ, ಹೀಗೆ ಜೀವಾತ್ಮನು ಸಮಭಾವದ ಮೂಲಕ ಜಂಗಮಾತ್ಮನಾದಮೇಲೆ ಪರಮಾತ್ಮನ ಜೊತೆ ಒಂದಾಗುವ ಯೋಗ್ಯತೆಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ರಹಸ್ಯವನ್ನು ಅರಿತು ಸಾಧಿಸುವುದೇ ಶಿವಯೋಗವೆಂಬ ಇಷ್ಟಲಿಂಗ ಪೂಜೆಯ ಫಲವಾಗಿದೆ.

ವ್ಯಕ್ತಿಯಾಗಿರುವ ಜೀವಾತ್ಮನು, ಸಾಮಾಜೀಕರಣಗೊಂಡು ಜಂಗಮಾತ್ಮನಾಗಲು ಸಮರತಿ, ಸಮಕಳೆ ಮತ್ತು ಸಮಸುಖದ ಅರಿವನ್ನು ಪಡೆಯಬೇಕು. ಆಗ ಆತನು ತನ್ನೊಳಗಿನ ಪರಮಾತ್ಮನನ್ನು ಅರಿಯಲು ಸಾಧ್ಯವಾಗುವುದು. ಹೀಗೆ ಒಳಗಿನ ಮೂಲಕ ಹೊರಗಿನದನ್ನು ಮತ್ತು ಹೊರಗಿನ ಮೂಲಕ ಒಳಗಿನದನ್ನು ನಿರಂತರವಾಗಿ ಅರಿಯುತ್ತ ವ್ಯಕ್ತಿತ್ವ ವಿಕಸನಗೊಂಡು ವಿಶ್ವಮಾನವರಾಗುವುದೇ ಶರಣರ ಗುರಿಯಾಗಿತ್ತು. ಹೀಗೆ ಈ ಲಿಂಗತತ್ತ್ವವು ಮನಸ್ಸನ್ನು ಒಂದಾಗಿಸುವ ತತ್ತ್ವವಾಗಿದೆ. ಲೇಸನ್ನೇ ಬಯಸುವ ಶರಣರು ನದಿಯೊಳಗೆ ನದಿ ಬೆರೆತಂತೆ ಇಡೀ ಮಾನವಕುಲದೊಂದಿಗೆ ಬೆರೆಯುತ್ತಾರೆ. ಎಲ್ಲವೂ ಇಷ್ಟಲಿಂಗದಲ್ಲೇ ಇರುವುದರಿಂದ ಇಷ್ಟಲಿಂಗ ಪೂಜೆ ಎಂಬುದು ವಿಶ್ವದ ಪೂಜೆ ಆಗುತ್ತದೆ. ಈ ಕ್ರಮದೊಂದಿಗೆ ಶರಣರು ಎಲ್ಲ ಧರ್ಮಗಳವರೊಂದಿಗೆ ಬೆರೆತು ಮಾನವಕುಲವನ್ನು ಒಂದಾಗಿಸುವ ಶಕ್ತಿಯನ್ನು ಪಡೆಯುತ್ತಾರೆ. ಮಾನವ

ಕುಲವನ್ನು ಒಂದಾಗಿಸುವಲ್ಲಿ ಅಡ್ಡ ಬರುವ ಎಲ್ಲವನ್ನೂ ಬಸವಣ್ಣನವರು ಎದುರಿಸಲು ಸಿದ್ಧವಾಗುತ್ತಾರೆ.

ಲಿಂಗಭೇದ, ವರ್ಣಭೇದ, ಜಾತಿಭೇದ, ವರ್ಗಭೇದ, ಕೋಮುವಾದ ಮತ್ತು ಉಗ್ರವಾದದಿಂದಾಗಿ 21ನೇ ಶತಮಾನದ ಜಗತ್ತು ನರಳುತ್ತಿದೆ. ಬಸವಣ್ಣನವರು ಹೇಳಿದಂತೆ ಮನುಷ್ಯರು ನದಿಯೊಳಗೆ ನದಿ ಕೂಡಿದ ಹಾಗೆ ಒಂದಾಗುವುದರಿಂದ ಮಾತ್ರ ಈ ಎಲ್ಲ ದುರಂತಗಳಿಂದ ಪಾರಾಗಲು ಸಾಧ್ಯ.

ವೇದಕ್ಕ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯಿವೆ,
ನೋಡಯ್ಯಾ ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ.

– ಬಸವಣ್ಣ

ಎಂದು ಬಸವಣ್ಣನವರು ಹಳೆಯ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ತಿರಸ್ಕರಿಸಿದ್ದರಿಂದಲೆ ನವಸಮಾಜದ ನಿರ್ಮಾಣ ಮಾಡಲು ಸಾಧ್ಯವಾಯಿತು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಈ ವ್ಯವಸ್ಥೆಯನ್ನು ಆರಂಭದಲ್ಲೇ ಕೊಚ್ಚಿಹಾಕಿದವು.

ಶರಣ ಸಂಸ್ಕೃತಿ ವಚನಗಳಲ್ಲಿ ಜೀವಂತವಿರುವುದು ಸಮಾಧಾನದ ಸಂಗತಿ. ಅದನ್ನು ಬದುಕಿಗೆ ಅಳವಡಿಸಿಕೊಳ್ಳುವುದರ ಮೂಲಕ ಜನಸಮುದಾಯವನ್ನು ವೈದಿಕ ಸಂಸ್ಕೃತಿಯಿಂದ ಮತ್ತು ಅದಕ್ಕೆ ಪೂರಕವಾಗಿರುವ ಸಾಮ್ರಾಜ್ಯಶಾಹಿ ಸಂಸ್ಕೃತಿಯಿಂದ ವಿಮೋಚನೆಗೊಳಿಸುವುದು ತುರ್ತು ಅವಶ್ಯಕತೆಯಾಗಿದೆ.

ಲಿಂಗಾರ್ಚನೆಯ ಮಾಡುವ ಮಹಿಮರೆಲ್ಲರೂ
ಸಲಿಗೆವಂತರಾಗಿ ಒಳಗೈದಾರೆ.
ಆನು ದೇವಾ ಹೊರಗಣವನು.
'ಸಂಬೋಳಿ', 'ಸಂಬೋಳಿ' ಎನ್ನುತ್ತ ಇಂಬಿನಲ್ಲಿ ಇದೇನೆ.
ಕೂಡಲಸಂಗಮದೇವಾ
ನಿಮ್ಮ ನಾಮವಿಡಿದ ಅನಾಮಿಕ ನಾನು.

– ಬಸವಣ್ಣ

ಬಸವಣ್ಣನವರು ಅಸ್ಪೃಶ್ಯರ ಜೊತೆ ಒಂದಾಗುವ ಕ್ರಮವಿದು. ಅವರು ಈ ವಚನದಲ್ಲಿ ಬಳಸಿದ 'ಹೊರಗಣವನು', 'ಸಂಬೋಳಿ', 'ಇಂಬು' (ದೂರ), 'ಅನಾಮಿಕ' ಪದಗಳು ಅಸ್ಪೃಶ್ಯನನ್ನು ಸೂಚಿಸುತ್ತವೆ. 'ತಾನೂ ಅಸ್ಪೃಶ್ಯ' ಎಂದು ಬಸವಣ್ಣನವರು ಒತ್ತಿಹೇಳಿದ್ದಾರೆ. ಅಲ್ಲದೆ ಬೂಟಾಟಿಕೆಯ ಭಕ್ತರು ಸ್ಥಾವರಲಿಂಗದೇವರ ಮಂದಿರದಲ್ಲಿ ಸಲಿಗೆವಂತರಾಗಿ ಇದ್ದುದಕ್ಕೆ 'ಮಹಿಮರು' ಎಂದು ವ್ಯಂಗ್ಯವಾಡಿದ್ದಾರೆ. ಗುಡಿಯ ಒಳಗಡೆ ಪ್ರವೇಶ ಸಿಗದ ಅಸ್ಪೃಶ್ಯರ ಜೊತೆಗೆ ಹೊರಗಡೆ ನಿಂತು ಒಳಗಿದ್ದವರಿಗೆ ಎಚ್ಚರಿಸುತ್ತಿದ್ದಾರೆ. ('ಸಂಬೋಳಿ' ಪದಕ್ಕೆ 'ಎಚ್ಚರ' ಎಂಬ ಅರ್ಥವೂ ಇದೆ.)

ಗೋತ್ರನಾಮವ ಬೆಸಗೊಂಡಡೆ
ಮಾತು ನೂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ ನೆಲನ ಬರೆವುತ್ತಿದ್ದಿರಿದೇನಯ್ಯಾ?
ಗೋತ್ರನಾಮ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯನೆಂಬುದೇನು
ಕೂಡಲಸಂಗಯ್ಯ.

– ಬಸವಣ್ಣ

ಬಸವಣ್ಣನವರು ಈ ವಚನದಲ್ಲಿ ದೇವರನ್ನೂ ಅಸ್ಪೃಶ್ಯರ ಸಾಲಿನಲ್ಲಿ ತಂದು ನಿಲ್ಲಿಸುತ್ತಾರೆ. ಮಾದಾರ ಚೆನ್ನಯ್ಯ ಮತ್ತು ಡೋಹರ ಕಕ್ಕಯ್ಯನವರನ್ನು ದೇವರ ಗೋತ್ರಪುರುಷರನ್ನಾಗಿ ಮಾಡುತ್ತಾರೆ!

ಶಿವಪುರಾಣದ ಪ್ರಸಂಗವೊಂದು ಈ ವಚನಕ್ಕೆ ಹಿನ್ನೆಲೆಯಾಗಿದೆ. 'ಗಿರಿಜಾಕಲ್ಯಾಣ'ದ ಸಂದರ್ಭದಲ್ಲಿ ವರನಾದ ಶಿವನಿಗೆ ಮದುವೆ ಮಾಡಿಸುವ ಪುರೋಹಿತ ಗೋತ್ರನಾಮ ಕೇಳುತ್ತಾನೆ. ಗೋತ್ರವಿಲ್ಲದ ಅವೈದಿಕ ಶಿವ ಕಕ್ಕಾಬಿಕ್ಕಿಯಾಗುತ್ತಾನೆ. ಆತನ ಬಾಯಿಯಿಂದ ಮಾತುಗಳು ಹೊರಡುವುದಿಲ್ಲ. ಏನೂ ತೋಚದವನಾಗಿ ತಲೆ ಕೆಳಗೆ ಮಾಡಿ ಹೆಬ್ಬೆರಳಿನಿಂದ ನೆಲ ಗೀಚತೊಡಗುತ್ತಾನೆ! ಈ ಪುರಾಣ ಪ್ರಸಂಗದಿಂದ ಬಸವಣ್ಣನವರು ಸಿಡಿಮಿಡಿಗೊಂಡಿದ್ದಾರೆ. ನಿಮ್ಮದು ಮಾದಾರ ಚೆನ್ನಯ್ಯನ ಗೋತ್ರ –ಡೋಹರ ಕಕ್ಕಯ್ಯನ ಗೋತ್ರ ಎಂಬುದು ಗೊತ್ತಿಲ್ಲವೆ ಎಂದು ಈ ವಚನದಲ್ಲಿ ದೇವರನ್ನು 'ಗದರಿಸಿದ್ದಾರೆ'. ಜಾತೀಯತೆಯ ಬಗ್ಗೆ ಬಸವಣ್ಣನವರಿಗೆ ಇದ್ದ ತೀವ್ರ ತಿರಸ್ಕಾರಕ್ಕೆ ಈ ವಚನ ಸಾಕ್ಷಿಯಾಗಿದೆ.

ತಾವು ಸಾಕ್ಷಾತ್ಕರಿಸಿಕೊಂಡ ಸತ್ಯದ ಪ್ರತಿಪಾದನೆಗಾಗಿ ಬಸವಣ್ಣನವರು, ಮಾನವ ಕುಲ ನಡೆದು ಬಂದ ದಾರಿಯ ಅರಿವಿನೊಂದಿಗಿನ ಬದುಕಿನ ವಾಸ್ತವತೆಯ ಜೊತೆಗೆ ಸಾಹಿತ್ಯದ ಸೃಜನಶೀಲತೆ ಮತ್ತು ಪುರಾಣದ ಕಲ್ಪನೆಯನ್ನೂ ಬಳಸಿಕೊಳ್ಳುತ್ತಾರೆ. ಮೇಲಿನ ವಚನದಲ್ಲಿ ತಾವು ನಂಬದ ಪುರಾಣದ ಶಿವನನ್ನು ಮತ್ತು ತಾವು ನಂಬಿದ ಜೊತೆಗಾರರಾದ ಚನ್ನಯ್ಯ ಮತ್ತು ಕಕ್ಕಯ್ಯನವರನ್ನು ತಂದು ದಲಿತರ ಪರವಾಗಿ ನಿಂತು ಪುರಾಣದ ಶಿವನನ್ನು ಟೀಕಿಸುತ್ತಾರೆ. ಪುರಾಣದ ಶಿವನಿಗೆ 'ಕೂಡಲಸಂಗಯ್ಯಾ' ಎಂದು ಕರೆದು ನಮ್ಮ ಒಳಗನ್ನು ಎಚ್ಚರಗೊಳಿಸಿಕೊಳ್ಳುವ ಕ್ರಮವನ್ನು ಸೂಚಿಸುತ್ತಾರೆ.

ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತೇಕೆ?
ಹಗಲುಗಾಣದ ಗೂಗೆ ಇರುಳಾಯಿತ್ತೆಂದಡೆ
ಜಗಕೆ ಇರುಳಪ್ಪುದೆ ಮರುಳೆ?

ವೈದಿಕ ವ್ಯವಸ್ಥೆ 12ನೇ ಶತಮಾನದಲ್ಲಿ ಜನಸಮುದಾಯದ ಮೇಲೆ ಯಾವರೀತಿ ಹಿಡಿತ ಸಾಧಿಸಿತ್ತು ಎಂಬುದನ್ನು ಈ ವಚನ ತಿಳಿಸುತ್ತದೆ. 'ತನಗೆ ಅನಿಸಿದ್ದೇ ಸತ್ಯ' ಎಂಬ ವೈದಿಕದ ಅಹಂಕಾರವನ್ನು ಬಸವಣ್ಣನವರು ಯಾವ ರೀತಿ ಪ್ರಶ್ನಿಸಿದರು

ಎಂಬುದಕ್ಕೆ ಈ ವಚನ ಸಾಕ್ಷಿಯಾಗಿದೆ. 'ಮಮಕರ್ತ ಕೂಡಲಸಂಗನಶರಣರು ಅಕ್ಷಯರಧಿಕರು. ವಿಪ್ರರು ಕೀಳು ಜಗವೆಲ್ಲ ಅರಿಯಲು' ಎಂದು ಬಸವಣ್ಣನವರು ಹೇಳುತ್ತ ಹಳೆಯ ವ್ಯವಸ್ಥೆಯ ಕ್ರೌರ್ಯ ಮತ್ತು ಹೊಸವ್ಯವಸ್ಥೆಯ ಮಾನವೀಯತೆಯ ದರ್ಶನ ಮಾಡಿಸುತ್ತಾರೆ.

'ಜನನಸೂತಕ, ಕುಲಸೂತಕ, ರಜಃಸೂತಕ, ಎಂಜಲಸೂತಕ, ಪ್ರೇತಸೂತಕ ಎಂಬಿವಾದಿಯಾದ ಸರ್ವಸೂತಕಂಗಳು ಅಂಗಲಿಂಗ ಸಂಬಂಧಿಗಳಾದ ಲಿಂಗಭಕ್ತರಿಗಿಲ್ಲ ನೋಡಾ' ಎಂದು ಬಸವಣ್ಣನವರು ಸೂತಕಧರ್ಮವನ್ನು ತಿರಸ್ಕರಿಸಿ ಮಾನವರನ್ನು ಪರಿಶುದ್ಧತೆಯ ಕಡೆಗೆ ಒಯ್ಯುವಂಥ ಲಿಂಗವಂತ ಧರ್ಮದ ಮಹತ್ವವನ್ನು ಸಾರುತ್ತಾರೆ.

ತ್ರಿವಿಧ ಸಾಹಿತ್ಯ: ವಚನ ಸಾಹಿತ್ಯ ಎಲ್ಲ ದೃಷ್ಟಿಯಿಂದಲೂ ಆಧುನಿಕ ಸಾಹಿತ್ಯವೇ ಆಗಿದೆ. ಅದರ ಶೈಲಿ ಕೂಡ ಆಧುನಿಕವಾದ ಗದ್ಯಶೈಲಿಗೆ ಸಮೀಪವಾಗಿದೆ. ಅದೇರೀತಿ ಹಾಡುಗಾರಿಕೆಗೆ ಬೇಕಾದ ಅಂಶಗಳನ್ನೂ ಒಳಗೊಂಡಿದೆ. ಹೀಗೆ ಗದ್ಯದ ದೇಹ ಮತ್ತು ಪದ್ಯದ ಜೀವವನ್ನು ಹೊಂದಿರುವ ಸಾಹಿತ್ಯ ಎಲ್ಲಿಯೂ ಕಾಣಸಿಗುವುದಿಲ್ಲ.

ವಚನಗಳು ಶಾಸ್ತ್ರ, ಸಾಹಿತ್ಯ ಮತ್ತು ಸಮಾಜವೆಂಬ ತ್ರಿವಿಧ ಅಂಶಗಳನ್ನು ಒಳಗೊಂಡಿವೆ. ಮೊದಲನೆಯದಾಗಿ ಧಾರ್ಮಿಕ ಸಾಹಿತ್ಯವಾಗಿರುವುದರಿಂದ ಇದರಲ್ಲಿ ಲಿಂಗವಂತ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದ ಆಚರಣೆ ಮತ್ತು ತತ್ತ್ವದ ವಿಚಾರಗಳಿವೆ. ಇದು ಸೃಜನಶೀಲ ಸಾಹಿತ್ಯವೂ ಆಗಿರುವುದರಿಂದ ಶಬ್ದಾರ್ಥದ ಜೊತೆಗೆ ಲಕ್ಷಣಾರ್ಥ ಮತ್ತು ಧ್ವನ್ಯರ್ಥಗಳು ಸಹಜವಾಗಿಯೇ ಮೂಡಿಬಂದಿವೆ. ಇವುಗಳ ಜೊತೆಗೇ ತತ್ತ್ವಾರ್ಥ ಮತ್ತು ಬೆಡಗಿನ ಅರ್ಥಗಳನ್ನೂ ಒಳಗೊಂಡಿವೆ. ಅನ್ಯೋಕ್ತಿ. ಅಲಂಕಾರ, ಪ್ರತಿಮೆ, ಪ್ರತೀಕ ಮುಂತಾದ ಕಾವ್ಯಮೀಮಾಂಸೆಯ ಇತರ ಅಂಶಗಳೂ ಸೇರಿಕೊಂಡಿವೆ. ಹೀಗೆ ಲಿಂಗಾಯತದ ಧರ್ಮಶಾಸ್ತ್ರವೇ ಆಗಿರುವ ವಚನಗಳು ಸಾಹಿತ್ಯಕವಾಗಿ ಸಾರ್ವತ್ರಿಕವಾಗಿವೆ. ಅಲ್ಲದೆ ಸಕಲಜೀವಾತ್ಮರ ಬಗೆಗಿನ ಕಾಳಜಿಯಿಂದಾಗಿ ಜನಮನವನ್ನು ಸೂರೆಗೊಳ್ಳುವ ಮೂಲಕ ಸಾಮಾಜಿಕವಾಗಿ ಮಹತ್ವದ್ದೆನಿಸುತ್ತವೆ. ಈ ಎಲ್ಲ ಕಾರಣಗಳಿಂದಾಗಿ ವಚನಗಳು ಶಾಸ್ತ್ರವೂ ಹೌದು, ಸಾಹಿತ್ಯವೂ ಹೌದು. ಅಷ್ಟೇ ಅಲ್ಲದೆ 'ನಡೆ ನುಡಿ ಸಿದ್ಧಾಂತ'ದ ಪರಿಣಾಮ ಬೀರುವ ನವಸಮಾಜದ ರೂಪುರೇಷೆಯೂ ಹೌದು.

ವಚನ ಸಾಹಿತ್ಯವು ಸಮಷ್ಟಿ ಪ್ರಜ್ಞೆಯಿಂದ ಕೂಡಿದ ಸಾಹಿತ್ಯವಾಗಿದೆ. ವಚನಕಾರರು ತಮ್ಮ ವಚನಗಳನ್ನು ಸಮಾಜೋ ಆಧ್ಯಾತ್ಮಿಕ ಸಂಸತ್ ಆಗಿದ್ದ ಅನುಭವ ಮಂಟಪದಲ್ಲಿ ಮಂಡಿಸಬೇಕಿತ್ತು. ಅಲ್ಲಿ ಚರ್ಚೆ ನಡೆದ ನಂತರವೇ ಅದಕ್ಕೆ ಅನುಭಾವ ಎಂಬ ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಸಾಮಾಜಿಕ ಮಹತ್ವ ಬರುತ್ತಿತ್ತು. ಈ ರೀತಿ ಸಾಮಾಜಿಕವಾಗುವ ಮತ್ತು 'ನಡೆ ನುಡಿ ಸಿದ್ಧಾಂತ'ದಿಂದ ಕೂಡಿದ ವಚನ ಸಾಹಿತ್ಯದಂಥ ಸಮೂಹ ಸಾಹಿತ್ಯವೊಂದು ಧರ್ಮಗ್ರಂಥವಾಗಿರುವುದು ಜಗತ್ತಿನಲ್ಲಿ ಎಲ್ಲಿಯೂ ಕಾಣಸಿಗುವುದಿಲ್ಲ. ವಚನಕಾರರ ನಂತರ ಎಷ್ಟೋ ಶತಮಾನಗಳಾದ ಮೇಲೆ ಅಂದರೆ

1708ರಲ್ಲಿ ಸಿಖ್ಖರು ಸ್ವೀಕರಿಸಿದ 'ಗುರು ಗ್ರಂಥಸಾಹೀಬ್' ಧರ್ಮಗ್ರಂಥವೊಂದನ್ನು ಬಿಟ್ಟರೆ ಜಗತ್ತಿನಲ್ಲಿ ದೇವರನ್ನು ನಂಬುವ ಎಲ್ಲ ಧರ್ಮಗ್ರಂಥಗಳು ದೇವರ ವಾಕ್ಯಗಳಾಗಿವೆ. ದೇವರು ಮನುಷ್ಯರಿಗೆ ಹೇಳಿದ ಕ್ರಮ ಅವುಗಳಲ್ಲಿದೆ. ಆದರೆ ಲಿಂಗವಂತ ಧರ್ಮಗ್ರಂಥ 'ಗುರುವಚನ' ದೇವರ ವಾಕ್ಯಗಳಿಂದ ಕೂಡಿಲ್ಲ. ಸರ್ವ ಶರಣರ ವಚನಗಳಿಂದ ಕೂಡಿದೆ. ಬಸವಣ್ಣನವರು ಪದೆ ಪದೆ 'ಗುರುವಚನ' ಪದಪ್ರಯೋಗ ಮಾಡಿದ್ದಾರೆ. 'ಗುರುವಚನ' ಎಂದರೆ ಬರಿ ಬಸವಣ್ಣನವರ ವಚನಗಳಲ್ಲ. ಸತ್ಯಶುದ್ಧ ಶರಣರೆಲ್ಲ ತಮ್ಮೊಳಗಿನ ದೇವರಿಗೆ ಮಾಡಿಕೊಂಡ ನಿವೇದನೆಯೆ 'ಗುರುವಚನ'. ತಮ್ಮ ನಡೆ ನುಡಿ ಸಿದ್ಧಾಂತದ ಕುರಿತು ಅವರೆಲ್ಲ ವಚನಗಳ ಮೂಲಕ ತಮ್ಮೊಳಗಿನ ದೇವರಿಗೆ ವರದಿ ಒಪ್ಪಿಸಿದ್ದಾರೆ.

ಮುಖ್ಯವಾಗಿ ಬಸವಣ್ಣನವರ 'ಷಟ್‌ಸ್ಥಲದ ವಚನಗಳು', ಅಲ್ಲಮಪ್ರಭುದೇವರ 'ಮಂತ್ರಗೋಪ್ಯ' ಮತ್ತು ಚನ್ನಬಸವಣ್ಣನವರ 'ಕರಣಹಸಿಗೆ' ಗಳೆಂಬ ಮೂರು ಗ್ರಂಥಗಳು ಸೇರಿ ಲಿಂಗವಂತರ ಧರ್ಮಗ್ರಂಥ ಎಂಬ ಪರಿಭಾವನೆ ಶರಣರ ಚಳವಳಿಯ ನಂತರದ ಮಧ್ಯಕಾಲೀನ ಲಿಂಗಾಯತರಲ್ಲಿ ಅಸ್ತಿತ್ವಕ್ಕೆ ಬಂದಿತು. ಕಲ್ಯಾಣ ಹತ್ಯಾಕಾಂಡದ ನಂತರ ಮಠೀಯ ವ್ಯವಸ್ಥೆ ಲಿಂಗಾಯತರಲ್ಲಿ ಜಾರಿಗೆ ಬಂದು ಸ್ವಾಮಿಗಳ ಸೃಷ್ಟಿಯಾದಾಗ ಅವರನ್ನು ಮಠಕ್ಕೆ ಪಟ್ಟಗಟ್ಟುವ ಸಂದರ್ಭದಲ್ಲಿ ಗುರುಗಳು ಮೇಲೆ ತಿಳಿಸಿದ ಮೂರೂ ವಚನ ಕಟ್ಟುಗಳನ್ನು ಅವರ ಜೋಳಿಗೆಯಲ್ಲಿ ಹಾಕುತ್ತಿದ್ದರು. ಆದರೆ ಎಲ್ಲ ಶರಣರ ವಚನಗಳು ಕೂಡ ಲಿಂಗವಂತ ಧರ್ಮಗ್ರಂಥದ ಭಾಗಗಳು ಎಂಬುದು ಸಮಂಜಸವಾಗಿದೆ.

ಬಸವಣ್ಣನವರ ವಚನಗಳು ಭೂಮಿ ಪ್ರಧಾನವಾಗಿವೆ, ಅಲ್ಲಮಪ್ರಭುಗಳ ಮಂತ್ರಗೋಪ್ಯ ಬಾಹ್ಯಾಕಾಶ ಪ್ರಧಾನವಾಗಿದೆ. ಚನ್ನಬಸವಣ್ಣನವರ ಕರಣಹಸಿಗೆ ದೇಹ ಮತ್ತು ಮನಸ್ಸು ಪ್ರಧಾನವಾಗಿದೆ. ಹೀಗೆ ಲಿಂಗವಂತರ ಧರ್ಮಗ್ರಂಥ, ಭೂಮಿ (ಬಸವಣ್ಣನವರ ಲೋಕಜ್ಞಾನ), ಬಾಹ್ಯಾಕಾಶ (ಅಲ್ಲಮ ಪ್ರಭುಗಳ ವ್ಯೋಮಜ್ಞಾನ) ದೇಹ ಮತ್ತು ಮನಸ್ಸಿನ (ಚನ್ನಬಸವಣ್ಣನವರ ಸ್ವಯಂಜ್ಞಾನ) ಕಡೆಗೆ ಒಯ್ಯುವ ಮಾರ್ಗದರ್ಶಿಯಾಗಿದೆ. ಆದರೆ ಇತರ ಶರಣರ ವಚನಗಳು ಈ ಧರ್ಮಗ್ರಂಥವನ್ನು ಇನ್ನೂ ಪರಿಪೂರ್ಣಗೊಳಿಸುವ ಸಾಮರ್ಥ್ಯ ಹೊಂದಿವೆ.

'ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು' ಎಂದು ಹೇಳುವಲ್ಲಿ ಬಸವಣ್ಣನವರ ಜೀವಕಾರುಣ್ಯ ಎದ್ದು ಕಾಣುತ್ತದೆ. ಮಾನವ ಈ ಜಗತ್ತಿನ ಕೇಂದ್ರಬಿಂದು ಅಲ್ಲ, ಸಕಲ ಜೀವಾತ್ಮರೇ ಈ ಜಗತ್ತಿನ ಕೇಂದ್ರಬಿಂದು ಎಂಬುದನ್ನು ಬಸವಣ್ಣನವರು ಈ ವಚನದಲ್ಲಿ ಸೂಚಿಸಿದ್ದಾರೆ. ಆಧುನಿಕ ಪರಿಸರ ವಿಜ್ಞಾನಿಗಳು 20ನೇ ಶತಮಾನದಲ್ಲಿ ಹೇಳಿದ್ದನ್ನು ಬಸವಣ್ಣನವರು 12ನೇ ಶತಮಾನದಲ್ಲೇ ಹೇಳಿದ್ದಾರೆ. 'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವಣ್ಣನವರು ಹೇಳುವ ಮೂಲಕ ಪರಿಸರದ ಮಹತ್ವವನ್ನು ಸಾರಿದ್ದಾರೆ. ವಸ್ತುಗಳು ಮತ್ತು ಜೀವಿಗಳೆಲ್ಲ

ಜೀವಜಾಲದಲ್ಲಿ ಬರುತ್ತವೆ ಎಂದು ಈ ಕಾಲದ ಪರಿಸರ ವಿಜ್ಞಾನಿಗಳು ಹೇಳುತ್ತಿದ್ದಾರೆ. ಬಸವಣ್ಣನವರು ನಿಶ್ಚಲವಾದ ಹಿಮಾಲಯದಂಥ ಭೌತಿಕವಸ್ತುಗಳನ್ನು ಕೂಡ ಜೀವಜಾಲದಲ್ಲಿ ಸೇರಿಸಿದ ಮೊದಲಿಗರು.

ಕಾಯಕಜೀವಿಗಳು ವಸ್ತುಗಳ ಉತ್ಪಾದನೆ ಮಾಡುತ್ತಲೇ ತತ್ತ್ವ, ಸಾಹಿತ್ಯ ಮತ್ತು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿರುವಂಥ ಸಾಹಿತ್ಯ ರಚನೆ ಮಾಡಿದ್ದು ನಮಗೆಲ್ಲ ಮಾದರಿಯಾಗಿದೆ. 21ನೇ ಶತಮಾನದ ಹಾಹಾಕಾರವನ್ನು ತಡೆಗಟ್ಟಲು ಮತ್ತು ಸರಳ ಸಹಜವಾದ ಸಮೃದ್ಧ ಬದುಕನ್ನು ಕಟ್ಟಲು ವಚನಗಳು ಬಹಳ ಅವಶ್ಯವಾಗಿವೆ. ಹೀಗೆ ವಚನ ಸಾಹಿತ್ಯ ಆಧುನಿಕ ಯುಗದಲ್ಲೂ ಪ್ರಸ್ತುತವಾಗಿದೆ.

ಬಸವಣ್ಣನವರು ಮಾನವಕುಲದ ವಿಮೋಚಕರಾಗಿದ್ದಾರೆ. ಮಾನವ ಕುಲದ ವಿಮೋಚಕರಾಗಬೇಕಾದರೆ ಮಾನವರು ಮೊದಲಿಗೆ ತಮ್ಮನ್ನು ಅರಿತುಕೊಳ್ಳಬೇಕು. ಸತಿಪತಿ ಮಧುರಭಾವದ ಮಹತ್ವವನ್ನು ತಿಳಿದುಕೊಳ್ಳಬೇಕು. ಆ ಮೂಲಕ ಮಧುರಭಕ್ತಿಯ ಸಂಸ್ಕಾರ ಪಡೆಯಬೇಕು. ಆ ಮಧುರಭಕ್ತಿಯು ಅವರಿಬ್ಬರೊಳಗೆ ಶಾಂತಿ ಸಮಾಧಾನ ತರುವಂಥದ್ದಾಗಿರಬೇಕು. ಈ ಶಾಂತಿ ಸಮಾಧಾನದ ಸಂಸ್ಕಾರವು ಇಡೀ ಕುಟುಂಬವನ್ನು ಆವರಿಸಬೇಕು. ಮಕ್ಕಳು ಬೆಳೆಯಲು ಸಹಕಾರಿಯಾಗುವ ಇಂಥ ವಾತಾವರಣ ಮನೆಯಲ್ಲೇ ನಿರ್ಮಾಣವಾಗಬೇಕು. ಹೀಗೆ ಮಧುರಭಾವವು ಕುಟುಂಬವನ್ನು ಆವರಿಸಿದಾಗ ಮಕ್ಕಳು ಸುಸಂಸ್ಕೃತರಾಗಿ ಬೆಳೆಯುವರು. ನಂತರ ಸಮಾಜದಲ್ಲಿ ಬೆಳೆಯುವಾಗ ಅವರ ನಡತೆ ಶಾಂತಿ ಸಮಾಧಾನಕ್ಕೆ ಪೂರಕವಾಗಿರುವುದರಿಂದ ಸಹಜವಾಗಿಯೇ ಸಾಮಾಜಿಕ ನೆಲೆಯಲ್ಲಿ ಸಂಸ್ಕೃತಿ ಮತ್ತು ನಾಗರೀಕತೆಯ ವಿಕಸನಕ್ಕೆ ಅವರು ತಮ್ಮ ಅಳಿಲು ಸೇವೆ ಸಲ್ಲಿಸುವರು.

ಇಂಥ ಸಮಾನತೆಯ ಪ್ರಜ್ಞೆ ಮೂಡಿಸುವ ವ್ಯಕ್ತಿತ್ವ ವಿಕಸನ ಹೊಂದಿದವರೇ ಶರಣರು. ಇಂಥವರು ಯಾವ ದೇಶದಲ್ಲೇ ಇದ್ದರೂ ಕಳ್ಳರಾಗಿರುವುದಿಲ್ಲ; ಕೊಲೆಗಡುಕರಾಗಿರುವುದಿಲ್ಲ; ಸುಳ್ಳು ಹೇಳುವವರಾಗಿರುವುದಿಲ್ಲ; ಸಿಟ್ಟಿನ ಕೈಗೆ ಬುದ್ಧಿಯನ್ನು ಕೊಡುವವರಾಗಿರುವುದಿಲ್ಲ; ತಮ್ಮನ್ನೇ ಹೊಗಳಿಕೊಳ್ಳುವಂಥ ಆತ್ಮರತಿಯಲ್ಲಿ ತೊಡಗಿರುವುದಿಲ್ಲ; ಪರನಿಂದೆಯನ್ನು ಮಾಡುವವರಾಗಿರುವುದಿಲ್ಲ; ಬೇರೆಯವರು ಟೀಕಿಸಿದಾಗ ಅವರು ಟೀಕಿಸಿದರೇಕೆ? ಎಂಬುದಕ್ಕೆ ಕಾರಣವನ್ನು ಹುಡುಕದೆ ಪ್ರತಿಯಾಗಿ ಟೀಕಿಸುವ ಅನಾಗರೀಕತೆಯನ್ನು ಪ್ರದರ್ಶಿಸುವವರಾಗಿರುವುದಿಲ್ಲ.

ಹೀಗೆ ಬದುಕುವುದರಿಂದ ಅಂತರಂಗ ಶುದ್ಧಿಯಾಗುತ್ತದೆ. ಬಹಿರಂಗದಲ್ಲಿ ಸಮಾಜದ ಶುದ್ಧಿಯಾಗುತ್ತದೆ. ಇಂಥ ಜೀವನಕ್ರಮದಿಂದ ಮಾತ್ರ ದೇವರನ್ನು ಒಲಿಸಲು ಸಾಧ್ಯ ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿದೆ. ಈ ಮಾತಿನಲ್ಲಿ ವ್ಯಕ್ತಿ, ಕುಟುಂಬ, ಸಮಾಜ, ದೇಶ ಮತ್ತು ವಿಶ್ವದ ಸಂಬಂಧವನ್ನು ಹೊಸೆಯುವ ಶಕ್ತಿ ಇದೆ. ಇಂಥ ಶರಣರು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತಾರೆ. ಲೇಸನ್ನೇ ಬಯಸುವುದರಲ್ಲಿ ಶಾಂತಿ, ಪ್ರೀತಿ ಮತ್ತು ಸಮಾನತೆಯ ತತ್ತ್ವ ಅಡಗಿದೆ. ವ್ಯಕ್ತಿಯಿಂದ ವಿಶ್ವದ ವರೆಗೆ

ಜೀವಜಾಲದ ಸಂಬಂಧ ಅಡಗಿದೆ. ಇಂಥ ಶರಣರಿದ್ದ ದೇಶ ಪಾವನವಾಗುತ್ತದೆ. ಅದುವೇ ವಿಶ್ವಶಾಂತಿಗೆ ಕಾರಣವಾಗುತ್ತದೆ. ಇಷ್ಟಲಿಂಗದಿಂದ ಅಂತರಂಗದ ಸಂಸ್ಕಾರ ಪಡೆದು ಬಹಿರಂಗದಲ್ಲಿ 'ಜಂಗಮಲಿಂಗ'ದ ಅಂದರೆ ಸರ್ವಸಮತ್ವಭಾವದಿಂದ ಕೂಡಿದ ಸಮಾಜವೆಂಬ ದೇವರ ಸೇವೆಯನ್ನು ದಾಸೋಹಂ ಭಾವದೊಂದಿಗೆ ಮಾಡಲು ಸಾಧ್ಯವಾಗುತ್ತದೆ. ವ್ಯಷ್ಟಿಯಿಂದ ಸಮಷ್ಟಿಯವರೆಗೆ, ಸರ್ವಸಮತ್ವದ ಪ್ರಜ್ಞೆಯಿಂದ ಮತ್ತು ಪ್ರೇಮಭಾವದಿಂದ ಬದುಕುವುದೇ ಮಧುರಭಕ್ತಿ. ದಯವನ್ನೇ ಧರ್ಮದ ಮೂಲವಾಗಿಸಿ ವಿಶ್ವಕಲ್ಯಾಣವನ್ನು ಸಾಧಿಸುವ ಭಕ್ತಿ.

ಹಳೆಯ ಸಾಮಾಜಿಕ ವ್ಯವಸ್ಥೆ ಇಂಥ ಮಧುರಭಕ್ತಿಯ ಸಾಧನೆಗೆ ತೊಡಕಾಗುವುದನ್ನು ಬಸವಣ್ಣನವರು ಗಮನಿಸಿದರು. ಹಳೆಯ ವ್ಯವಸ್ಥೆಯಿಂದಾಗಿ ಬಹುಪಾಲು ಜನಸಾಮಾನ್ಯರ ಬದುಕು ಕಷ್ಟಕರವಾಗಿತ್ತು. ಜಾತಿಭೇದದ ಕಾರಣ ಮೇಲ್ಜಾತಿಯವರು ಕೆಳಜಾತಿಯವರನ್ನು ಮುಟ್ಟಿಸಿಕೊಳ್ಳದಿರುವುದು, ಹೆಣ್ಣು ಗಂಡಿನ ಮಧ್ಯದ ಭೇದಭಾವದಿಂದಾಗಿ ಹೆಣ್ಣನ್ನು ಕೀಳಾಗಿ ನೋಡುವುದು. ಬಡವರು ಮತ್ತು ಉಳ್ಳವರು ಎಂಬ ಭೇದದಿಂದ ಬಡವರನ್ನು ಕೀಳಾಗಿ ನೋಡುವುದು. ಮಹಿಳೆಯರು, ಕೆಳಜಾತಿ ಮತ್ತು ಹಿಂದುಳಿದ ಜಾತಿಗಳಿಗೆ ಶಿಕ್ಷಣವನ್ನು ಕೊಡದಿರುವುದು. ಎಲ್ಲ ರೀತಿಯಿಂದಲೂ ಅವರು ಸದಾ ಸೇವಕರಾಗಿಯೇ ಇರುವಂತೆ ನೋಡಿಕೊಳ್ಳುವುದು. ಅಸಮಾನತೆಯ ಸಮಾಜದಲ್ಲಿ ಕಾಯಕಜೀವಿಗಳ ಶೋಷಣೆ ಮಾಡುವುದರ ಮೂಲಕ ಐಹಿಕ ಸುಖವನ್ನು ಅನುಭವಿಸುತ್ತ ದಾಸಿಯರನ್ನು ಮತ್ತು ವೇಶ್ಯೆಯರನ್ನು ಸುಖದ ಸಾಧನಗಳಾಗಿ ಬಳಸಿಕೊಳ್ಳುವುದು ವೈದಿಕ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿತ್ತು.

ಪುರೋಹಿತಶಾಹಿಗಳು, ಅಧಿಕಾರಶಾಹಿಗಳು ಮತ್ತು ಕುಲೀನರು ಎನ್ನಿಸಿಕೊಳ್ಳುವವರು ಯಥಾಸ್ಥಿತಿವಾದಿಗಳಾಗಿ ಬದುಕುವುವಂಥ ಈ ಸಮಾಜವನ್ನು ಕಳೆದ ಐದುಸಾವಿರ ವರ್ಷಗಳಿಂದ ಪೋಷಿಸಿಕೊಂಡು ಬರಲಾಗಿತ್ತು. ಇಂಥವರ ಸುಖಲೋಲುಪತೆಗೆ ತಕ್ಕಂತೆ ಲೈಂಗಿಕಶಿಲ್ಪಗಳಿಂದ ಕೂಡಿದ ಬೃಹತ್ ದೇವಾಲಯಗಳನ್ನು ನಿರ್ಮಿಸುವುದು ಮತ್ತು ಆ ದೇವಾಲಯಗಳನ್ನು ದೇವದಾಸಿಯರಿಂದ ಕೂಡಿದ ಸುಖದ ತಾಣಗಳನ್ನಾಗಿಸುವುದು ಜಗಜ್ಜಾಹೀರವಾಗಿತ್ತು. ಮೃಷ್ಟಾನ್ನಭೋಜನ, ಹಾಡು, ಕುಣಿತ, ರಸಿಕತೆಯೊಂದಿಗೆ ಧನಕನಕ ಸಂಪತ್ತಿನ ರಕ್ಷಣಾ ತಾಣವನ್ನಾಗಿಯೂ ದೇವಾಲಯಗಳನ್ನು ಬೆಳೆಸುತ್ತ ಪಟ್ಟಭದ್ರರು ರಾಜ್ಯಸತ್ತೆಯನ್ನು ಕೂಡ ತಮ್ಮ ಅಂಕಿತದಲ್ಲಿಟ್ಟುಕೊಳ್ಳುವಂಥ ಸಾಮರ್ಥ್ಯ ಪಡೆದದ್ದನ್ನು ಬಸವಣ್ಣನವರು ಗಮನಿಸಿದರು. ರಾಜರ ಸ್ಥಾನದಿಂದ ಅಷ್ಟೇ ಅಲ್ಲದೆ ದೇವಸ್ಥಾನಗಳಿಂದಲೂ ಕಾಯಕಜೀವಿಗಳ ನಿರಂತರ ಶೋಷಣೆ ನಡೆಯುತ್ತಿರುವುದನ್ನು ಕೊನೆಗೊಳಿಸಿದರು. ದೇಗುಲಸಂಸ್ಕೃತಿಗೆ ತಿಲಾಂಜಲಿಯನ್ನಿಟ್ಟು ಭಕ್ತಿಸಾಮ್ರಾಜ್ಯದ ಸ್ಥಾಪನೆಗೆ ಪಣತೊಟ್ಟರು.

ಕುಂಡಲಿಗನ ಕೀಟದಂತೆ ಮೈ ಮಣ್ಣಾಗದಂತೆ ಇದ್ದೆಯಲ್ಲಾ ಬಸವಣ್ಣ;
ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದಂತೆ ಇದ್ದೆಯಲ್ಲಾ ಬಸವಣ್ಣ;
ಜಲದಿಂದಾದ ಮೌಕ್ತಿಕದಂತೆ ಜಲವು ತಾನಾಗದಂತೆ ಇದ್ದೆಯಲ್ಲಾ ಬಸವಣ್ಣ;

ಗುಹೇಶ್ವರಲಿಂಗದಾಣತಿವಿಡಿದು ತನುಗುಣಮತ್ತರಾಗಿದ್ದ
ಐಶ್ವರ್ಯಾಂಧಕರ ಮತವನೇನ ಮಾಡಿ ಬಂದೆಯೈ ಬಸವಣ್ಣ.

– ಅಲ್ಲಮಪ್ರಭು

ಬಸವಣ್ಣನವರು ಐಶ್ವರ್ಯಾಂಧಕರ ಮತಕ್ಕೆ ಗತಿಗಾಣಿಸಿದ್ದನ್ನು ಅಲ್ಲಮಪ್ರಭುಗಳು ಹೊಗಳಿದ ಕ್ರಮ ಬಸವಣ್ಣನವರ ಕರ್ತೃತ್ವ ಶಕ್ತಿಗೆ ಹಿಡಿದ ಕನ್ನಡಿಯಾಗಿದೆ.

ದೇವಸ್ಥಾನ ಸಂಸ್ಕೃತಿಯು ಅಸ್ಪೃಶ್ಯತೆ, ಅಸಮಾನತೆ, ಭೇದಭಾವ ಮತ್ತು ಮೂಢನಂಬಿಕೆಯ ರಕ್ಷಣಾ ಸ್ಥಾನವಾಗಿದೆ. ಬಡವರ ಶೋಷಣೆ ಮತ್ತು ಶ್ರೀಮಂತರ ಅಭಿವೃದ್ಧಿಗೆ ಕಾರಣವಾಗಿದೆ. ಈ ಕಾರಣದಿಂದಲೇ ಶೋಷಕವರ್ಗ ದೇವಾಲಯಗಳನ್ನು ನಿರ್ಮಿಸಿತು. ಶೋಷಿತವರ್ಗ ಆ ದೇವರುಗಳ ಮುಂದೆ ನಿಂತು ತಮ್ಮ ದುಃಖ ನಿವಾರಣೆಗೆ ಯತ್ನಿಸಿತು. ಹೀಗೆ ಶೋಷಕರ ವಾಸ್ತವ ಮತ್ತು ಶೋಷಿತರ ಭ್ರಮೆಗಳು ಒಟ್ಟೊಟ್ಟಿಗೆ ಸಾಗುತ್ತಿರುವುದನ್ನು ಬಸವಣ್ಣನವರು ಗಮನಿಸಿದರು. 'ಉಳ್ಳವರು ಶಿವಾಲಯ ಮಾಡಿಹರು, ನಾನೇನು ಮಾಡಲಿ ಬಡವನಯ್ಯಾ' ಎಂದು ಬಡವರಪರವಾಗಿ ನಿಂತರು. ಉಳ್ಳವರು 'ಶಿವಾಲಯುಗಳನ್ನೇಕೆ ನಿರ್ಮಿಸುವರು?' ಎಂಬ ರಹಸ್ಯವನ್ನು ಬಹಿರಂಗಪಡಿಸಿದರು. ತಾವು ದೇಗುಲ ಸಂಸ್ಕೃತಿಯಿಂದ ದೂರವಾದವರು ಎಂಬುದನ್ನು ಬಸವವಣ್ಣನವರು ಸ್ಪಷ್ಟಪಡಿಸಿದರು. 'ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಸ್ಥಾವರ ದೈವಕ್ಕೆರಗಲಾಗದು' ಎಂದು ಎಚ್ಚರಿಸಿದರು. 'ವೇದ, ಶಾಸ್ತ್ರ ಆಗ ಮಂಗಳ ನೋದಿದವರು ಹಿರಿಯರೆ? .. .. .. ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?' ಎಂದು ಪ್ರಶ್ನಿಸಿ ಕಟ್ಟಕಡೆಯ ಮನುಷ್ಯನ ಮತ್ತು ಆತನ ಜೀವನಾನುಭವದ ಪರವಾಗಿ ವಾದಿಸಿದರು. ಗಿಳಿಪಾಠದ ಶಾಸ್ತ್ರ ಪಂಡಿತರು ಅದು ಹೇಗೆ ಹಿರಿಯರಾಗುತ್ತಾರೆ ಎಂದು ಪ್ರಶ್ನಿಸಿದರು.

'ಕಳ್ಳನಾಣ್ಯ ಸಲುಗೆಗೆ ಸಲ್ಲದು' ಎಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದರು. 'ಇಂದಿಂಗೆ ನಾಳಿಂಗೆ ಬೇಕೆಂದೆ ನಾದಡೆ ನಿಮ್ಮಾಣೆ' ಎಂದು ಸಂಗ್ರಹ ಬುದ್ಧಿಗೆ ಕಡಿವಾಣ ಹಾಕಿದರು. 'ಕಾಯಕವಾವುದೆಂದು ಬೆಸಗೊಂಡಡೆ ನಿಮ್ಮಾಣೆ' ಎಂದು ಎಲ್ಲ ಕಾಯಕ ಜೀವಿಗಳು ಸಮಾನರು ಎಂಬುದನ್ನು ಸೂಚಿಸಿದರು. 'ಒಮ್ಮೆ ಶರಣೆಂದಡೆ ಪಾಪ ಕರ್ಮ ಓಡುವವು' ಎಂದು ಕರ್ಮಸಿದ್ಧಾಂತದಿಂದ ತುಳಿತಕ್ಕೊಳಗಾದ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದರು. 'ಅಹಂಕಾರವೆಂಬಸದಮದಗಜವೇರಿ ವಿಧಿಗೆ ಗುರಿಯಾಗಿ ನೀವುಹೋದಿರಲ್ಲಾ' ಎಂದು ಶೋಷಕವರ್ಗದ ಕೃತ್ರಿಮ ಬದುಕಿನ ಬಗ್ಗೆ ವಿಷಾದ ವ್ಯಕ್ತಪಡಿಸಿದರು. 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ ತಮಗೊಂದುಬಟ್ಟೆ (ದಾರಿ), ಶಾಸ್ತ್ರಕ್ಕೊಂದು ಬಟ್ಟೆ!' ಎಂದುಪುರೋಹಿತಶಾಹಿಗಳ ಜೀವನವಿಧಾನಕ್ಕೆ ಅಸಹ್ಯಪಟ್ಟರು. 'ಉಂಬು ಜಂಗಮ ಬಂದಡೆ ನಡೆಯಂಬರು; ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ' ಎಂದು ಸಾಮಾಜಿಕಪ್ರಜ್ಞೆ ಇಲ್ಲದೆ ಲಿಂಗಪೂಜೆ ಮಾಡುವುದು ನಿಷ್ಪ್ರಯೋಜಕ ಎಂದು ಸಾರಿದರು. 'ಕುಲಕ್ಕೆ ತಿಲಕ

ನಮ್ಮ ಮಾದಾರಚೆನ್ನಯ್ಯ, ನಿಮ್ಮಿಂದಧಿಕ ಕೂಡಲಸಂಗಮದೇವಾ' ಎಂದು ತಿಳಿಸುತ್ತ ಮನುವಾದಿ ಸಮಾಜದಿಂದ ಬಂದ ಕಟ್ಟಕಡೆಯ ಮನುಷ್ಯರು ಕೂಡ ತಮ್ಮಸಚ್ಚಾರಿತ್ರ್ಯದಿಂದ ವ್ಯಕ್ತಿತ್ವ ವಿಕಸನ ಹೊಂದುತ್ತ ದೇವರಿಗಿಂತ ದೊಡ್ಡವರಾಗಬಲ್ಲರು ಎಂಬ ಆಶಾಭಾವವನ್ನು ಮೂಡಿಸಿದರು. 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ. ಲೋಕವಿರೋಧಿ ಶರಣನಾರಿಗಂಜುವವನಲ್ಲ' ಎಂದು ಅನ್ಯಾಯವನ್ನು ವಿರೋಧಿಸಿದರು. 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎಂದು ಎಲ್ಲರನ್ನೂ ರಕ್ತ ಸಂಬಂಧದಿಂದ ಕರೆಯುತ್ತ ಮಾನವಕುಲದ ಏಕತೆಯ ಬಗ್ಗೆ ಅರಿವು ಮೂಡಿಸಿದರು. 'ಕೈಲಾಸವೆಂಬುದೇನೊ, ಪೃಥ್ವಿಯ ಮೇಲೊಂದು ಮೊರಡಿ' ಎಂದು ಸ್ವರ್ಗದ ಮಹತ್ವವನ್ನು ಅಲ್ಲಗಳೆದರು. ಸಕಲ ಜೀವತ್ಮಾರಿಗೆ ಲೇಸನೆ ಬಯಸುವ ಜೀವಕಾರುಣ್ಯವೊಂದೇ ಧರ್ಮದ ತಳಹದಿ ಎಂಬುದನ್ನು ಲೋಕದ ಜನರಿಗೆ ತಿಳಿಸಿಕೊಟ್ಟರು. 'ಗಣತಿಂಥಿಣಿಯೊಳಗಿರಿಸೆನ್ನಲಿಂಗವೆ' ಎಂದು ಜನಸಾಗರದ ಮಧ್ಯೆ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. 'ಭಕ್ತಿ ಇಲ್ಲದ ಬಡವ ನಾನಯ್ಯ; ಕಕ್ಕಯ್ಯನ ಮನೆಯಲ್ಲೂ ಬೇಡಿದೆ, ಚೆನ್ನಯ್ಯನ ಮನೆಯಲ್ಲೂ ಬೇಡಿದೆ' ಎಂದು ಹೇಳುತ್ತ ಕೆಳಜಾತಿ ಮತ್ತು ಕೆಳವರ್ಗದ ಜನರ ಅನುಭವಗಳನ್ನು ಎತ್ತಿಹಿಡಿದು ಅವುಗಳಿಂದ ಪಾಠ ಕಲಿತಿರುವುದಾಗಿ ತಿಳಿಸಿದರು. ವಿವಿಧ ದೇವರುಗಳ ಆರಾಧಕರ ಮೂಲ ದೇವರು ಒಬ್ಬನೆ ಮತ್ತು ಆರಾಧಕರೆಲ್ಲರೂ ಒಂದೇ ಮಾನವ ಜನಾಂಗ ಹಾಗೂ ಒಂದೇ ಜಗತ್ತಿಗೆ ಸೇರಿದವರು ಎಂಬುದನ್ನು ಮನದಟ್ಟು ಮಾಡಿಕೊಟ್ಟರು. 'ಕರ್ಣದಲಿ ಜನಿಸಿದವರುಂಟೆ ಜಗದೊಳು?' ಎಂದು ಮುಂತಾಗಿ ಪ್ರಶ್ನಿಸುವ ಮೂಲಕ ಎಲ್ಲ ತೆರನಾದ ಮೂಢನಂಬಿಕೆಗಳನ್ನು ಬಸವಣ್ಣನವರು ಅಲ್ಲಗಳೆದರು. 'ಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ' ಎಂದು ಬೇಡುವ ಮೂಲಕ ಆದರ್ಶಗಳಿಗೆ ಅಂಟಿಕೊಂಡು ಸಮಾಜಪ್ರೇಮಿಗಳಾಗಿರಬೇಕು ಎಂಬ ಭಾವ ವ್ಯಕ್ತಪಡಿಸಿದರು. ಹೀಗೆ ಬಸವಣ್ಣನವರಿಗೆ ಸಮಾಜವೇ ದೇವರಾಗಿದೆ. ಜನಸೇವೆಯೇ ಪೂಜೆ, ಪ್ರಾರ್ಥನೆಗಳಾಗಿವೆ. ಬಸವಧರ್ಮವು ನಿಜವಾದ ಅರ್ಥದಲ್ಲಿ ಸಮಾಜಸೇವಾ ಧರ್ಮವಾಗಿದೆ. ಸರ್ವಸಮತ್ವವನ್ನು ಸಾಧಿಸುವ ಮಹಾಸಾಧನವಾಗಿದೆ.

ಬಸವಣ್ಣನವರ ಜೊತೆಗಿದ್ದ ಶರಣರೆಲ್ಲರೂ ಇದೇ ಕ್ರಮದಲ್ಲಿ ಚಿಂತನೆ ಮಾಡಿದ್ದಾರೆ. ವೈವಿಧ್ಯದಲ್ಲಿ ಏಕತೆಯನ್ನು ಸಾಧಿಸಿದ್ದಾರೆ.

ಕುರಿ ಕೋಳಿ ಕಿರಿಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂದೆಂಬರು.
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು.
ಅವರೆಂತು ಕೀಳುಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೊ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.
ಅದೆಂತೆಂದಡೆ; ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು.

ಸಿದ್ಧಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದಯ್ಯಾ;
ಉರಿಲಿಂಗಪೆದ್ದಿಗಳ ಅರಸು ಒಲ್ಲನವ್ವಾ.

– ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ

ದಲಿತ ವಚನಕಾರ್ತಿ ಕಾಳವ್ವೆ ಎಷ್ಟೊಂದು ನೋವಿನಿಂದ ಈ ವಚನವನ್ನು ಬರೆದಿರಬಹುದು! ತರ್ಕಹೀನ ಜಾತೀಯತೆಯ ಜನಕರಾದ ವಿಪ್ರರು ಚರ್ಮದ ಸಿದ್ದಲಿಕೆಯಲ್ಲಿನ ತುಪ್ಪವನ್ನು ಮತ್ತು ಚರ್ಮದ ಚೀಲವಾದ ಸಗ್ಗಳೆಯ ನೀರನ್ನು ಶುದ್ಧ ಎಂದು ಕುಡಿಯುವ ಬುದ್ಧಿಗೇಡಿಗಳೆಂದು ಕಾಳವ್ವೆ ಮೂದಲಿಸುತ್ತಾಳೆ. ಜಾತೀಯತೆಯ ನೋವು ಮತ್ತು ಅಪಮಾನಗಳು ಅನುಭವಿಸುವವರಿಗೇ ಗೊತ್ತು. ಆ ನೋವನ್ನು ತಮ್ಮದಾಗಿಸಿಕೊಂಡ ಬಸವಣ್ಣನವರಿಗೇ ಗೊತ್ತು.

'ಪೃಥ್ವಿಯಿಂದ ಸಕಲ ಜೀವರೆಲ್ಲರೂ ಉದ್ಭವ ಗುಹೇಶ್ವರಾ' ಎಂದು ಅಲ್ಲಮಪ್ರಭುಗಳು ಹೇಳುವಲ್ಲಿ ಸಕಲ ಜೀವರಾಶಿಗಳ ಮಧ್ಯದ ಘನಸಂಬಂಧವನ್ನು ಸೂಚಿಸುತ್ತಾರೆ. ಸರ್ವಸಮತ್ವದ ಚಿಂತನೆಗೆ ಮೂಲ ಆಕರ ಒದಗಿಸುತ್ತಾರೆ. 'ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ ಜೀವಾತ್ಮ ಎಂದಾಯಿತು' ಎಂದು ಉರಿಲಿಂಗಪೆದ್ದಿಗಳು ಜೀವ ಮತ್ತು ದೇವರ ಮಧ್ಯದ ಅವಿರತ ಸಂಬಂಧವನ್ನು ಗುರುತಿಸುತ್ತಾರೆ. 'ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ' ಎಂದು ಹೇಳುವ ಮೂಲಕ ನುಲಿಯ ಚಂದಯ್ಯನವರು, ಎಲ್ಲರೂ ಉತ್ಪಾದನೆಯಲ್ಲಿ ತೊಡಗಿದಾಗ ಮಾತ್ರ ಸರ್ವಸಮತ್ವದ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸೂಚಿಸುತ್ತಾರೆ. 'ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು' ಎಂದು ಆಯ್ದಕ್ಕಿ ಮಾರಯ್ಯನವರು ಇನ್ನೂ ಮುಂದುವರಿದು ಮೇಲಿನ ಮಾತಿಗೆ ಪುಷ್ಟಿ ಕೊಡುತ್ತಾರೆ. 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ' ಎಂದು ಕಾಳವ್ವೆ ಹೇಳುತ್ತ ಉತ್ಪಾದನಾ ವ್ಯವಸ್ಥೆ ಮತ್ತು ಮಾನವಸಂಪನ್ಮೂಲದ ಮಹತ್ವವನ್ನು ಸಾರುತ್ತಾಳೆ. 'ಹದ ಮಣ್ಣಲ್ಲದೆ ಮಡಕೆಯಾಗಲಾರದು' ಎಂದು ಹೇಳುವ ಕೇತಲದೇವಿ, ಗುಣಮಟ್ಟದ ಉತ್ಪನ್ನವಿರಬೇಕು ಮತ್ತು ಬದುಕು ಕೂಡ ಹಾಗೇ ಉನ್ನತವಾಗಿ ಇರಬೇಕು ಎಂದು ಸೂಚಿಸುತ್ತಾಳೆ. 'ಲಂಚವಂಚನಕ್ಕೆ ಕೈಯಾನದಭಾಷೆ' ಎಂದು ಕಸಗುಡಿಸುವ ಸತ್ಯಕ್ಕ ಪ್ರತಿಜ್ಞೆ ಮಾಡುವುದರ ಮೂಲಕ ಸಮಾಜವು ಕಾಯಕದಿಂದ ಬದುಕಬೇಕೆ ಹೊರತು ಭ್ರಷ್ಟಾಚಾರದಿಂದ ಅಲ್ಲ ಎಂಬ ಸಂದೇಶವನ್ನು ನೀಡುತ್ತಾಳೆ. 'ಆನೆ ಕುದುರೆ ಭಂಡಾರವಿರ್ದಡೇನೊ ತಾನುಂಬುದು ಪಡಿಯಕ್ಕಿ' ಎಂದು ದೊರೆಯಾಗಿದ್ದ ಮಹಾದೇವ ಭೂಪಾಲರು, ಕಾಯಕ ಸಿದ್ಧಾಂತವನ್ನು ಸ್ವೀಕರಿಸಿ ಮೋಳಿಗೆಯಮಾರಯ್ಯನವರಾಗಿ ಸಂಗ್ರಹಬುದ್ಧಿಗೆ ಕಡಿವಾಣ ಹಾಕುತ್ತಾರೆ.

ಹೀಗೆ ಎಲ್ಲ ಶರಣರು ಬಸವಣ್ಣನವರ ಜಾತ್ಯತೀತ ಕಾಯಕತತ್ತ್ವವನ್ನು ಎತ್ತಿಹಿಡಿದಿದ್ದಾರೆ. ಬಸವತತ್ತ್ವ, ಕಾಯಕತತ್ತ್ವ ಮತ್ತು ಇಷ್ಟಲಿಂಗತತ್ತ್ವ ಬೇರೆ ಅಲ್ಲ

ಎಂದು ತೋರಿಸಿಕೊಟ್ಟಿದ್ದಾರೆ. ಸಮಾನತೆಯಿಂದ ಕೂಡಿದ ಸಮಾಜದ ಬೇರುಗಳು 'ಯೋಗ್ಯ ರೀತಿಯಲ್ಲಿ ಉತ್ಪಾದನೆ, ಯೋಗ್ಯರೀತಿಯಲ್ಲಿ ಬಳಕೆ ಮತ್ತು ಯೋಗ್ಯರೀತಿಯಲ್ಲಿ ಸಾಮಾಜಿಕ ವಿತರಣೆ' ಎಂಬ ಸೂತ್ರದ ಮೇಲೆ ನಿಂತಿವೆ ಎಂಬುದನ್ನು ಶರಣರು ಸೂಚಿಸಿದ್ದಾರೆ. ಇದನ್ನೇ ಬಸವಧರ್ಮದ ಪರಿಭಾಷೆಯಲ್ಲಿ 'ಕಾಯಕ – ಪ್ರಸಾದ – ದಾಸೋಹ' ಎಂದು ಹೇಳಲಾಗಿದೆ. ಕಾಯಕದಿಂದ ಬಂದದ್ದು ವೈಯಕ್ತಿಕ ಆಸ್ತಿಯಾಗುವುದು. ಅದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರಿಂದ ಸಮಾಜವೆಂಬ ದೇವರಿಗೆ ವಿನಿಂಯೋಗಿಸುವ ಜವಾಬ್ದಾರಿಯಿಂದಾಗಿ ಇತಿಮಿತಿಯಿಂದ ಬಳಸಬೇಕಾಗುವುದು. ಹೀಗೆ ಪ್ರಸಾದ ಪ್ರಜ್ಞೆಯು ಖಾಸಗಿ ಆಸ್ತಿಯನ್ನು ಸಾಮೂಹಿಕ ಆಸ್ತಿಯಾಗಿ ಪರಿವರ್ತಿಸುವುದು. ನಂತರ ಮಿಗುತಾಯವೆಲ್ಲ ದಾಸೋಹ ರೂಪದಲ್ಲಿ ಶಿವನಿಧಿಗೆ ಸೇರುವುದು. ಆ ಮೂಲಕ ಆರ್ಥಿಕ ಸಮಸ್ಯೆ ಬಗೆಹರಿದು ಸಾಮಾಜಿಕ ಸ್ವಾಸ್ಥ್ಯಕ್ಕೆ ಕಾರಣವಾಗುವುದು. ಈ ಕ್ರಮದೊಂದಿಗೆ ಬಸವಧರ್ಮದಲ್ಲಿ ಮಾನವರು ವಿಶ್ವಮಾನವರಾಗುತ್ತಾರೆ.

ಅನುಭವದ ಬದುಕಿನಲ್ಲಿ ಸಂಗ್ರಹವಾಗುವ ಖಾಸಗಿ ಆಸ್ತಿ, ಅನುಭಾವದ ಬದುಕಿನಲ್ಲಿ ಶಿವನಿಧಿಗೆ ಸಲ್ಲುವ ಮೂಲಕ ಸಾಮೂಹಿಕ ಆಸ್ತಿಯಾಗುತ್ತದೆ. ಆಗ 'ಎಲ್ಲವೂ ನನ್ನದು' ಎಂಬ ಭಾವವನ್ನು ಕಳೆದುಕೊಂಡು 'ಎಲ್ಲವೂ ನಮ್ಮದು' ಎಂಬ ಭಾವದೊಂದಿಗೆ ಕ್ರಿಯಾಶೀಲವಾಗಿ ಬದುಕುವಾಗ ಸಕಲಜೀವಿಗಳಿಗೆ ಲೇಸೆನಿಸುವ ಸಮಾಜದ ನಿರ್ಮಾಣವಾಗುವುದು.

'ಕರುಣಿ ಬಸವಾ, ಕಾಲಹರ ಬಸವಾ, ಕರ್ಮಹರ ಬಸವಾ, ನಿರ್ಮಳ ಬಸವಾ, ಶಿವಜ್ಞಾನಿ ಬಸವಾ, ನಿಮ್ಮ ಧರ್ಮವಯ್ಯಾ ಈ ಭಕ್ತಿಯ ಪದವು ಕರುಣಿ ಕಪಿಲಸಿದ್ಧಮಲ್ಲಿನಾಥಯ್ಯಾ ನಿಮಗೂ ಎನಗೂ ಬಸವಣ್ಣನ ಧರ್ಮವಯ್ಯಾ' ಎಂದು ಸಿದ್ಧರಾಮರು ಹೇಳುವಲ್ಲಿ ಬಸವಣ್ಣನವರೇ ಸಮಾನತೆ ಸಾರುವ ಲಿಂಗವಂತ ಧರ್ಮಸ್ಥಾಪಕರು ಎಂಬುದನ್ನು ಸೂಚಿಸಿದ್ದಾರೆ.

ಕನ್ನಡದ ಏಕೈಕ ಧರ್ಮಗ್ರಂಥ 'ಗುರುವಚನ'

ಜಗತ್ತಿನಲ್ಲಿ ಅನೇಕ ಧರ್ಮಗ್ರಂಥಗಳಿವೆ. ಬಹುತೇಕ ಧರ್ಮಗ್ರಂಥಗಳನ್ನೆಲ್ಲ ಅಪೌರುಷೇಯ ಎಂದೇ ಕರೆಯುತ್ತಾರೆ. ಆ ಧರ್ಮಗ್ರಂಥಗಳು ದೇವರ ಮಾತುಗಳೇ ಆಗಿವೆ. ಹಿಂದುಗಳ ವೇದ ಮತ್ತು ಭಗವದ್ಗೀತಾ, ಪಾರ್ಸಿಗಳ ಜೆಂದಾ ಅವೆಸ್ತಾ, ಯಹೂದಿಗಳ ಧರ್ಮಗ್ರಂಥವಾದ ಹಳೆಯ ಒಡಂಬಡಿಕೆ, ದೇವಪುತ್ರ ಏಸು ಕ್ರಿಸ್ತನ ಜೀವನ ಮತ್ತು ಸಂದೇಶಗಳನ್ನು ಒಳಗೊಂಡ ಕ್ರೈಸ್ತರ ಹೊಸ ಒಡಂಬಡಿಕೆ, ಇವೆರಡನ್ನೂ ಒಳಗೊಂಡ ಬೈಬಲ್, ಅಲ್ಲಾಹನು ಮುಹಮ್ಮದ್ ಪೈಗಂಬರರಿಗೆ (ಸ) ಅವತೀರ್ಣಗೊಳಿಸಿದ ಅಂತಿಮ ಗ್ರಂಥವಾದ ಪವಿತ್ರ ಕುರಾನ್ ಮುಂತಾದ ಧರ್ಮಗ್ರಂಥಗಳು ದೇವರ ವಾಕ್ಯಗಳಿಂದ ಕೂಡಿವೆ.

ಆದರೆ ಲಿಂಗಾಯತರ ಧರ್ಮಗ್ರಂಥವೆನಿಸಿದ ವಚನಕಟ್ಟುಗಳು ದೇವರ ವಾಕ್ಯಗಳಲ್ಲ. ಅವು, ಶರಣರು ತಮ್ಮೊಳಗಿನ ಅಂತಃಸಾಕ್ಷಿಯ ರೂಪದಲ್ಲಿರುವ ದೇವರಿಗೆ ತಿಳಿಸಿದ ಮಾತುಗಳಾಗಿವೆ! ಈ ಕಾರಣದಿಂದಲೇ 12ನೇ ಶತಮಾನದ ವಚನಗಳ ಸಂಗ್ರಹ ವಿಶ್ವದಲ್ಲೇ ವಿಶಿಷ್ಟವಾದ 'ಗುರುವಚನ' ಧರ್ಮಗ್ರಂಥ ಎನಿಸಿದೆ. ಲಿಂಗಾಯತರ ಈ ವಚನಧರ್ಮಗ್ರಂಥದಿಂದಾಗಿ ವಿಶ್ವದ ಧರ್ಮಕ್ಷೇತ್ರದಲ್ಲಿ 12ನೇ ಶತಮಾನದಲ್ಲೇ ಹೊಸದೊಂದು ಕ್ರಾಂತಿಯೇ ಆಗಿದೆ. ಆದರೆ ಕೋಟ್ಯಂತರ ಲಿಂಗಾಯತರಲ್ಲಿ ಬೆರಳೆಣಿಕೆಯಷ್ಟು ಲಿಂಗಾಯತರಿಗೆ ಮಾತ್ರ ಗುರುವಚನ ಧರ್ಮಗ್ರಂಥದಿಂದಾದ ಕ್ರಾಂತಿಯ ಅರಿವಿದೆ. ವಚನಗಳಲ್ಲಿ ಸೃಷ್ಟಿಯಾದ ಕ್ರಾಂತಿ ಶರಣಸಂಕುಲದಲ್ಲಿ ಹಬ್ಬಿತು. ಈ ಕ್ರಾಂತಿ ಬಿಜ್ಜಳನ ಕಲ್ಯಾಣ ರಾಜ್ಯದಲ್ಲಿ ಹಬ್ಬುವುದರಲ್ಲಿತ್ತು. ಆದರೆ ಪಟ್ಟಭದ್ರ ಹಿತಾಸಕ್ತಿಗಳು ಕ್ಷಿಪ್ರಕ್ರಾಂತಿ ಮಾಡಿ ಬಸವಕ್ರಾಂತಿಗೆ ತಡೆಯೊಡ್ಡಿದವು. ಮನುಧರ್ಮದ ಪ್ರಕಾರ ನಿಮ್ನ ಕುಲಕ್ಕೆ ಸೇರಿದ ಅಲ್ಲಮಪ್ರಭುಗಳು ಬಸವಣ್ಣನವರ ಪ್ರಭಾವದಿಂದ ಲಿಂಗವಂತರಾಗಿ ಶಿವಸ್ವರೂಪಿಗಳೆನಿಸಿ ಶೂನ್ಯಸಿಂಹಾಸನ ಏರಿದರು. ವರ್ಣಾಶ್ರಮ ವ್ಯವಸ್ಥೆಯನ್ನು ಬಲವಾಗಿ ನಂಬಿ ಧರ್ಮಶಕ್ತಿ ಮತ್ತು ರಾಜಶಕ್ತಿಯಾಗಿ ಬೆಳೆದಿದ್ದ ಮೇಲ್ಜಾತಿ ಹಾಗೂ ಮೇಲ್ವರ್ಗದ ಪಟ್ಟಭದ್ರ ಹಿತಾಸಕ್ತಿಗಳು ಈ ಕಾರಣದಿಂದಾಗಿ ಶರಣ ಸಂಕುಲದ ಮೇಲೆ ಉರಿಯತೊಡಗಿದವು. ಮನುಧರ್ಮ ಸಿಂಹಾಸನ ಮತ್ತು ರಾಜಸಿಂಹಾಸನಕ್ಕೆ ಮಾಡಿದ ಅಪಮಾನವಿದು ಎಂದು ಭಾವಿಸಿದವು.

ತದನಂತರ ಬ್ರಾಹ್ಮಣ ಮೂಲದ ಶರಣ ಮಧುವರಸರ ಮಗಳು ಲಾವಣ್ಯ ಮತ್ತು ಶರಣ ಸಮಗಾರ ಹರಳಯ್ಯನವರ ಮಗ ಶೀಲವಂತನ ಮದುವೆಯಿಂದಾಗಿ ಆ ಪಟ್ಟಭದ್ರರ ಬ್ರಹ್ಮಾಂಡಕ್ಕೆ ಬೆಂಕಿ ಹತ್ತಿತು. ಈ ಮದುವೆ ಸನಾತನ ಧರ್ಮಶಾಸ್ತ್ರಕ್ಕೆ ವಿರುದ್ಧ ಎಂಬುದನ್ನು ಮನುವಾದಿ ಪಂಡಿತರು ರಾಜ ಬಿಜ್ಜಳ ಒಪ್ಪುವಂತೆ ಒತ್ತಡ ಹೇರಿದರು.

ಹರಳಯ್ಯ ಮಧುವರಸರಿಗೆ ಎಳೆಹೂಟಿ ಶಿಕ್ಷೆಯಾಯಿತು. ಆಗ ಕಲ್ಯಾಣ ಹೊತ್ತಿ ಉರಿಯಿತು! ಧರ್ಮಶಕ್ತಿಯಾಗಿದ್ದ ವೈದಿಕರ ಶಾಸ್ತ್ರಗಳು ಮತ್ತು ರಾಜಶಕ್ತಿಯಾಗಿದ್ದ ಬಿಜ್ಜಳನ ಶಸ್ತ್ರಗಳು ಅಹಿಂಸಾವಾದಿ ಶರಣರ ರಕ್ತವನ್ನು ಹೀರತೊಡಗಿದವು. ಕಲ್ಯಾಣ ಹಾಳಾದ ಈ ಸಂದರ್ಭದಲ್ಲಿ ಅರಾಜಕತೆಯುಂಟಾಯಿತು. ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಯಿತು. ಮಾನವಕುಲದ ಏಳ್ಗೆಗಾಗಿ ಅವರು ರಚಿಸಿದ ವಚನಕಟ್ಟುಗಳು ಬೆಂಕಿಗೆ ಆಹುತಿಯಾಗತೊಡಗಿದವು. ಬಹಳಷ್ಟು ಶರಣರು ಮನೆ ಮಠ ಕಳೆದುಕೊಂಡು ದಿಕ್ಕಾಪಾಲಾದರು. ಅನೇಕರು ಹುತಾತ್ಮರಾದರು. ಸಹಸ್ರಾರು ಜನ ಆಸ್ತಿಪಾಸ್ತಿ ತೊರೆದು, ಮಾನವಕುಲದ ಆಸ್ತಿಯಾದ ವಚನಕಟ್ಟುಗಳನ್ನು ಹೊತ್ತುಕೊಂಡು, ಅವುಗಳ ರಕ್ಷಣೆಗಾಗಿ ದುರ್ಗಮ ಅರಣ್ಯದಲ್ಲಿನ ಉಳವಿ ಕಡೆಗೆ ಹೊರಟರು. ದಾರಿ ಮಧ್ಯೆ ಸುರಕ್ಷಿತವೆನಿಸಿದ ಸ್ಥಳಗಳಲ್ಲಿ ವಿಶ್ವಾಸಿಕರೆನಿಸಿದ ಜನರಿಗೆ ಅವರು ವಚನಕಟ್ಟುಗಳನ್ನು ವಿತರಿಸುತ್ತ ಸಾಗಿದರು. ಹೀಗೆ 12ನೇ ಶತಮಾನದ ಲಕ್ಷಾಂತರ ವಚನಗಳಲ್ಲಿ 15 ಸಾವಿರದಷ್ಟು ವಚನಗಳು ಮಾತ್ರ ಮಾನವಕುಲದ ಮಾರ್ಗದರ್ಶಿಯಾಗಿ ಉಳಿದಿವೆ.

ಒಂದೇ ಕಾಲಘಟ್ಟದಲ್ಲಿ, ಒಂದೇ ಸ್ಥಳದಲ್ಲಿ ನಡೆದ ಕಲ್ಯಾಣ ಹತ್ಯಾಕಾಂಡದಲ್ಲಿ ಬಹಳಷ್ಟು ಜನ ಸಾತ್ವಿಕ ಶರಣರು ಹುತಾತ್ಮರಾದರು. ಕಲ್ಯಾಣ ಹತ್ಯಾಕಾಂಡದಂಥ ದಾರ್ಶನಿಕರ ಹತ್ಯೆಯ ಹೃದಯವಿದ್ರಾವಕ ಘಟನೆ ಜಗತ್ತಿನ ಇತಿಹಾಸದಲ್ಲಿಯೇ ಇಲ್ಲ. ಶಸ್ತ್ರ ಮತ್ತು ಶಾಸ್ತ್ರಗಳು ಒಂದಾಗಿ ಸಹಸ್ರಾರು ಅಹಿಂಸಾವಾದಿ ವಚನಕಾರರ ಮೇಲೆ ಈ ರೀತಿಯಲ್ಲಿ ಮಾರಣಾಂತಿಕ ಹಲ್ಲೆ ಮಾಡಬೇಕಾದರೆ ವಚನಗಳಲ್ಲಿನ ಶೋಷಣೆ ಮತ್ತು ಅಸಮಾನತೆಯ ವಿರುದ್ಧದ ವಿಚಾರಗಳು ಎಷ್ಟೊಂದು ಪ್ರಭಾವಶಾಲಿಯಾಗಿರಬೇಕು ಎಂಬುದರ ಮನವರಿಕೆಯಾಗುವುದರಲ್ಲಿ ಸಂಶಯವಿಲ್ಲ. ನಿಜವಾಗಿಯೂ ವಚನಗಳು ಈ ಜಗತ್ತನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿವೆ. ಮಾನವಕುಲವನ್ನು ಹೊಸದಾದ ವಿಮೋಚನಾ ಮಾರ್ಗದಲ್ಲಿ ಒಯ್ಯುವ ಯೋಜನೆಗಳನ್ನು ತಮ್ಮೊಳಗೆ ಇಟ್ಟುಕೊಂಡಿವೆ. 12ನೇ ಶತಮಾನದ ಈ ರಹಸ್ಯವನ್ನು ಭೇದಿಸುವ ಜವಾಬ್ದಾರಿ 21ನೇ ಶತಮಾನದ ಮೇಲಿದೆ.

ವಚನಗಳಿಗೆ ಅನುಭಾವಿಕ (ಆಧ್ಯಾತ್ಮಿಕ), ಧಾರ್ಮಿಕ, ಸಾಹಿತ್ಯಕ ಮತ್ತು ಕ್ರಾಂತಿಕಾರಕ ಎಂಬ ನಾಲ್ಕು ಮಗ್ಗಲುಗಳಿವೆ. ಈ ಮಗ್ಗಲುಗಳನ್ನು ಅರಿತುಕೊಳ್ಳದ ನಾವು ಒಂದೊಂದೇ ಮಗ್ಗಲುಗಳನ್ನು ಮುಟ್ಟುತ್ತ 'ಆನೆಯೂ ಕುರುಡರೂ' ಎಂಬ ಕಥೆಯಲ್ಲಿನ ಕುರುಡರಂಥಾಗಿದ್ದೇವೆ. ನಮಗೆ ತಿಳಿದದ್ದೇ ವಚನಸಾರವಲ್ಲ; ವಚನಸಾರದ ಒಂದು

ಅಂಶ ಮಾತ್ರ. ಅನುಭಾವಿಗಳು ವಚನಗಳ ಆನುಭಾವಿಕ ನೆಲೆಯನ್ನು ಮಾತ್ರ ಗುರುತಿಸುತ್ತಾರೆ. ಧಾರ್ಮಿಕ ವ್ಯಕ್ತಿಗಳು ವಚನಧರ್ಮಸಾರವನ್ನು ಮಾತ್ರ ಪರಿಗಣಿಸುತ್ತಾರೆ. ಸಾರಸ್ವತ ಲೋಕದವರು ವಚನಗಳಲ್ಲಿನ ಸಾಹಿತ್ಯ ಶಕ್ತಿಯನ್ನು ತಮ್ಮದಾಗಸಿಕೊಳ್ಳಲು ಹೆಣಗುತ್ತಾರೆ. ಸಮಾಜ ಪರಿವರ್ತನೆಯ ಹೋರಾಟಗಾರರು ವಚನಗಳಲ್ಲಿನ ಕ್ರಾಂತಿಕಾರಿ ನಿಲವನ್ನು ಪ್ರತಿಪಾದಿಸುತ್ತಾರೆ.

ವಚನಧರ್ಮವು ನಿಜವಾದ ಅರ್ಥದಲ್ಲಿ ಯೋಗಧರ್ಮವಾಗಿದೆ. ಜಗಜ್ಯೋತಿ ಬಸವಣ್ಣನವರು ಯೋಗಗುರು ಆಗಿದ್ದಾರೆ. (ಇಂದು ಯೋಗಾಸನ ಗುರುಗಳೇ ಯೋಗಗುರು ಎಂದು ಪ್ರಸಿದ್ಧರಾಗುತ್ತಿರುವುದೊಂದು ವಿಪರ್ಯಾಸ. ಈ ಯೋಗಾಸನ ಗುರುಗಳು ಯೋಗದ ಹೆಸರಿನಲ್ಲಿ ಜನಸಮುದಾಯವನ್ನು ಭ್ರಮೆಯಲ್ಲಿ ಮುಳುಗಿಸಿ ಐಹಿಕ ಅಭ್ಯುದಯ ಸಾಧಿಸುತ್ತ ಭೋಗಿಗಳಾಗುತ್ತಿದ್ದಾರೆ. ಸ್ಪಿರಿಚ್ಯುವಲ್ ಮರ್ಚೆಂಟ್ಸ್ ಅಂದರೆ ಅಧ್ಯಾತ್ಮದ ವ್ಯಾಪಾರಿಗಳಾಗುತ್ತಿದ್ದಾರೆ.) ಆದರೆ ಬಸವಣ್ಣನವರ ಯೋಗ ಶಿವಯೋಗವಾಗಿದೆ. ಮಂಗಲಮಯವಾದುದಕ್ಕೆ ಶಿವ ಎನ್ನುತ್ತಾರೆ. ಮಂಗಲಮಯವಾದುದು ಸತ್ಯವೂ ಸುಂದರವೂ ಆಗಿರುತ್ತದೆ. ಜೀವಾತ್ಮ ಮತ್ತು ಪರಮಾತ್ಮ ಕೂಡುವ ಕ್ರಿಯೆಗೆ ಯೋಗ ಎನ್ನತ್ತಾರೆ. ಬಸವಣ್ಣನವರ ಈ ಶಿವಯೋಗದಲ್ಲಿ ಲೋಕಾತ್ಮದೊಂದಿಗೆ ಜೀವಾತ್ಮವು ಪರಮಾತ್ಮನ ಜೊತೆ ಕೂಡುವ ರಹಸ್ಯವಿದೆ. ಸರ್ವಸಮತ್ವದ ಅರಿವೇ ಬಸವಾದಿ ಶರಣರ ವಚನಗಳ ಆತ್ಮವಾಗಿದೆ. ಈ ತೆರನಾಗಿ ಶಿವಯೋಗವು ಮಂಗಲಮಯವಾದ ಒಂದುಗೂಡುವಿಕೆಯಾಗಿದೆ. ವಸ್ತು ಮತ್ತು ಚೈತನ್ಯದ ಒಂದುಗೂಡುವಿಕೆ, ಜೀವಾತ್ಮವು ಲೋಕಾತ್ಮರ ಜೊತೆ ಒಂದಾದ ನಂತರ ಪರಮಾತ್ಮನ ಜೊತೆ ಐಕ್ಯವಾಗುವಿಕೆ. ಹೀಗೆ ಮನುಷ್ಯರು ತಮ್ಮೊಳಗಿನ ದೇವರ ಜೊತೆ ಒಂದಾಗುವಿಕೆ. ಈ ರೀತಿ ಒಂದುಗೂಡುವಾಗ ಆಗುವ ಅನುಭಾವದಲ್ಲಿ ವಸ್ತು ಮತ್ತು ಚೈತನ್ಯದಿಂದ ಕೂಡಿದ ಸಕಲ ಜೀವಾತ್ಮರು ಸರ್ವಸಮತ್ವದ ಏಕೋಭಾವ ತಾಳುತ್ತಾರೆ. ಚೈತನ್ಯವು ಸಕಲ ವಸ್ತುಗಳು ಮತ್ತು ಜೀವಗಳ ಮೂಲವಾಗಿದೆ ಎಂಬ ಸತ್ಯದ ಅರಿವೇ ಗುರುವಾಗಿ ಬಿಡುತ್ತದೆ. ಆ ಗುರುವೇ ದೇವರು ಎಂಬುದನ್ನು ಬಸವಣ್ಣನವರು ಸೂಚಿಸಿದ್ದಾರೆ. ಈ ಅರಿವಿನ ಮಾತುಗಳೇ ಗುರುವಚನವಾಗಿವೆ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.ಇಂಥ ಮಾತಿನ ರಾಶಿಯಲ್ಲಿ ಕೂಡಲಸಂಗಮದೇವ ಇರುತ್ತಾನೆ ಎಂದು ಬಸವಣ್ಣನವರು ತಿಳಿಸಿದ್ದಾರೆ. ಹೀಗೆ ಮರೆತ ಮಾನವರು ಅರಿತು ಶರಣರಾಗುವುದರ ಮೂಲಕ ಅಚ್ಚ ಲಿಂಗೈಕ್ಯರಾಗಿ ಆಡಿದ್ದೇ ದೇವರವಾಕ್ಯಗಳಾಗುವ ಪರಿ ಮಾನವ ಇತಿಹಾಸದಲ್ಲಿ ಅದ್ವಿತೀಯವಾಗಿದೆ.

ಗುರುವಚನವಲ್ಲದೆ ಲಿಂಗವೆಂದೆನಿಸದು,
ಗುರುವಚನವಲ್ಲದೆ ಜಂಗಮವೆಂದೆನಿಸದು,
ಗುರುವಚನವಲ್ಲದೆ ನಿತ್ಯವೆಂದೆನಿಸದು,
ಗುರುವಚನವಲ್ಲದೆ ನೇಮವೆಂದೆನಿಸದು,

ತಲೆ ಇಲ್ಲದ ಅಟ್ಟೆಗೆ ಪಟ್ಟವ ಕಟ್ಟುವ
ಉಭಯ ಭ್ರಷ್ಟರ ಮೆಚ್ಚುವನೆ
ನಮ್ಮ ಕೂಡಲಸಂಗಮದೇವ?

ಇಷ್ಟಲಿಂಗತತ್ತ್ವ ವಚನದಲ್ಲಿದೆ ಹೊರತಾಗಿ ವೇದಾಗಮಗಳಲ್ಲಿ ಇಲ್ಲ. ವಚನಗಳಲ್ಲಿ ಸಕಲಜೀವಾತ್ಮರ ಲೋಕವಿದೆ. ವಚನಗಳು ಶಾಶ್ವತವಾದ ಸತ್ಯವನ್ನು ಒಳಗೊಂಡಿವೆ. ಅವು ಬದುಕಿನ ನಿಯಮಗಳಾಗಿವೆ. ಇಂಥ ಜ್ಞಾನವಿಲ್ಲದೆ ಐಹಿಕ ಆಶೆ ಆಕಾಂಕ್ಷೆಗಳಲ್ಲೇ ಮುಳುಗಿದ ದೇಹಕ್ಕೆ ಗುರು ಎಂದು ಪಟ್ಟಾಭಿಷೇಕ ಮಾಡುವವರು ಆತ್ಮವಂಚಕರೂ ಲೋಕವಂಚಕರೂ ಆಗಿರುತ್ತಾರೆ. ಇಂಥ ದಾರಿತಪ್ಪಿದವರನ್ನು ದೇವರು ಮೆಚ್ಚುವನೆ ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಹೀಗೆ ಶರಣರ ಮಾತುಗಳು ದೇವರವಾಕ್ಯಗಳೆನಿಸಿ ವಚನಗಳೆಂದು ಪ್ರಸಿದ್ಧವಾಗಿವೆ. ಈ ವಚನಗಳೆಂದರೆ, ಶರಣರು ತಮ್ಮೊಳಗಿನ ದೇವರಿಗೆ ಕೇವಲ ಆತ್ಮನಿವೇದನೆ ಮಾಡಿಕೊಳ್ಳುವ ಮಾತುಗಳಲ್ಲ. ಬರಿ ವ್ಯಕ್ತಿಗತ ನಿಲವುಗಳಲ್ಲ. ಅವರ ಆತ್ಮ ಸಕಲ ಜೀವಾತ್ಮರೊಂದಿಗೆ ಅಂದರೆ ಲೋಕಾತ್ಮರೊಂದಿಗೆ ಒಂದಾದ ನಂತರ ಪರಮಾತ್ಮನಿಗೆ ಮಾಡಿಕೊಂಡ ನಿವೇದನೆಗಳಾಗಿವೆ. ಪ್ರತಿ ವಚನ ಲೋಕಕ್ಕೆ ಬೆಳಕಾಗುವ ಮೊದಲು ಅನುಭವ ಮಂಟಪದಲ್ಲಿನ 770 ಅಮರಗಣಂಗಳ ಒಪ್ಪಿಗೆಯ ಮುದ್ರೆಯನ್ನು ಒತ್ತಿಕೊಂಡದ್ದಾಗಿರುತ್ತದೆ! ವಿವಿಧ ಧರ್ಮಗ್ರಂಥಗಳಲ್ಲಿನ ದೇವರ ವಾಕ್ಯಗಳು ಬದಲಾವಣೆಗೆ ಒಳಪಡುವಂತವುಗಳಲ್ಲ. ಆದರೆ ಪರಿಣತರ ವ್ಯಾಖ್ಯಾನಗಳು ಮತ್ತು ವಿವರಣೆಗಳು ಇದ್ದೇ ಇರುತ್ತವೆ.

ಶರಣರ ವಚನಗಳಲ್ಲಿನ ತಾತ್ತ್ವಿಕ ಸಂಘರ್ಷ ಬದುಕಿನ ಜೀವಂತಿಕೆಗೆ ಸಾಕ್ಷಿಯಾಗಿದೆ. ಚನ್ನಬಸವಣ್ಣನವರು ಅಪಾತ್ರರಿಗೆ ಗುರುಕಾರುಣ್ಯವೆಂಬ ಇಷ್ಟಲಿಂಗದೀಕ್ಷೆ ಕೊಡುವುದನ್ನು ಸಮ್ಮತಿಸುವುದಿಲ್ಲ. ಆದರೆ ಬಸವಣ್ಣನವರು ಶರಣರ ಕಾಯಕ ಮಡಿವಾಳರ ಕಾಯಕ ಎಂದು ಸಾರುತ್ತಾರೆ. ಮಾನವರ ಮನದ ಮೈಲಿಗೆಯನ್ನು ತೊಳೆಯುವುದೇ ಶರಣರ ಕಾಯಕ ಎಂಬುದು ಬಸವಣ್ಣನವರ ಅಚಲ ನಿರ್ಧಾರವಾಗಿತ್ತು.

'ವಿಶ್ವವು ವಸ್ತು ಮತ್ತು ಚೈತನ್ಯದ ಸಮ್ಮಿಲನದಿಂದ ಸೃಷ್ಟಿಯಾಗಿದೆ. ಸಕಲ ಜೀವಾತ್ಮರಿಗೆ ಲೇಸಾಗಬೇಕೆಂಬ ಅರಿವಿನಿಂದ ಕೂಡಿದ ಆತ್ಮವು ಪರಮಾತ್ಮನ ಜೊತೆ ಐಕ್ಯವಾಗುವುದೇ ಬದುಕಿನ ಸಾರ್ಥಕತೆಯಾಗಿದೆ.'ಎಂಬುದು ಲಿಂಗಾಯತ ಧರ್ಮದ ತಿರುಳಾಗಿದೆ. ಹೀಗಾಗಿ ಇಲ್ಲಿ ಎಲ್ಲರಿಗೂ ಮಹತ್ವವಿದೆ. ಎಲ್ಲದಕ್ಕೂ ಮಹತ್ವವಿದೆ. ಶರಣರು ತಮ್ಮ ಲೋಕಾನುಭವದ ಮೂಲಕ ಒಂದಾಗುತ್ತ ಅನುಭಾವದ ಎತ್ತರಕ್ಕೆ ಏರಿದರು. ಪ್ರತಿ ಶರಣ ಶರಣೆಯರ ಅನುಭವವೆಂಬುದು ಮಕರಂದದಂತಾದರೆ ಅವೆಲ್ಲವನ್ನು ಸಂಗ್ರಹಿಸಿ ಅನುಭಾವವೆಂಬ ಜೇನಾಗಿಸುವ ಕ್ರಿಯೆ ಅನುಭವ ಮಂಟಪದಲ್ಲಿ ನಡೆಯುತ್ತಿತ್ತು. ಹೀಗೆ ಅನುಭಾವವೆಂಬುದು ಸಕಲಜೀವಾತ್ಮರ ಅನುಭವದಿಂದ ಕೂಡಿದ್ದಾಗಿರುತ್ತದೆ. ಈ ಅನುಭಾವವನ್ನೇ ಶಿವಾನುಭವ ಎಂದು ಕರೆಯುತ್ತಾರೆ. ಮಂಗಲಮಯವಾದ ಈ ಶಿವ ಶಬ್ದ, ಏಕಮೇವಾದ್ವಿತೀಯವಾದ ಆ ಪರವಸ್ತುವಿನ ನಾಮವೇ ಆಗಿದೆ.

ಹೀಗೆ ಎಲ್ಲವನ್ನೂ ಎಲ್ಲರನ್ನೂ ಮಂಗಲಕರವಾಗಿ ಒಂದಾಗಿಸುತ್ತ ಹೋಗುವುದೇ ಬಸವಾದ್ವೈತ. ಇದುವೇ ಶಿವತತ್ತ್ವ, ಇದುವೇ ಶಿವಾದ್ವೈತ, ಇದುವೇ ಇಷ್ಟಲಿಂಗತತ್ತ್ವ. ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ ಎಂದರೆ ಇಷ್ಟಲಿಂಗವೆಂಬುದು ಬಸವತತ್ತ್ವದ ಮೂರ್ತಿಯಾಗಿದ್ದು ಆ ತತ್ತ್ವವೇ ಧ್ಯಾನದ ಮೂಲವಾಗಿದೆ. ಸರ್ವಸಮತ್ವದಿಂದ ಕೂಡಿದ ಆ ತತ್ತ್ವವನ್ನು ಅರಿವಿನ ಕುರುಹು ಎಂದು ಕರೆಯಲಾಗುವ ಇಷ್ಟಲಿಂಗದ ಮೂಲಕ ಧ್ಯಾನಿಸುವುದೇ ನಿಜವಾದ ಶಿವಯೋಗ. ಆಗ ಉಂಟಾಗುವ ಸರ್ವಸಮತ್ವದ ಅರಿವಿನಿಂದ ಹೊರಹೊಮ್ಮುವ ಭಾವವೇ ಭಕ್ತಿಭಾವ. ಇಂಥ ಬಸವಯೋಗತತ್ತ್ವದಿಂದ ಕೂಡಿರುವಂಥದ್ದೇ ಶಿವಯೋಗ.

ಖಾಸಗಿ ಆಸ್ತಿ, ವ್ಯಕ್ತಿಗತ ಅಭ್ಯುದಯ, ಲಿಂಗ, ವರ್ಗ, ವರ್ಣ ಮತ್ತು ಜಾತಿಭೇದಗಳಿಂದ ಕೂಡಿದ ಅಸಮಾನತೆ ಮತ್ತು ಮೇಲು ಕೀಳು ಭಾವಗಳು ಬಸವಯೋಗತತ್ತ್ವಕ್ಕೆ ವಿರುದ್ಧವಾಗಿವೆ. ಜೀವಸಂಕುಲದ ವೈವಿಧ್ಯದಲ್ಲಿನ ಏಕತೆಯನ್ನು ಕಾಪಾಡಿಕೊಂಡು ಸಕಲಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಬಯಲಿನಿಂದ ಬಂದುದನನ್ನು ಅರಿತು ಲೋಕಕಲ್ಯಾಣ ಸಾಧಿಸುತ್ತ ಬಯಲಾಗಿ ಹೋಗುವ ಮಾರ್ಗವೇ ಬಸವ ಮಾರ್ಗ. ಹೀಗೆ 'ಬಸವ' ಎಂಬುದು ವ್ಯಕ್ತಿಗತ ಹೆಸರಾಗಿ ಉಳಿಯದೆ ತತ್ತ್ವವಾಗಿ ಬೆಳಗುತ್ತದೆ. ಅಸಂಖ್ಯಾತ ಶರಣ ಗಣಂಗಳು ಈ ಬಸವ ಬೆಳಗಿನಲ್ಲಿ ಒಂದಾಗಿ ಹೋಗಿರುತ್ತಾರೆ. ಬಸವಣ್ಣನವರನ್ನು ನೆನೆಯುವುದೆಂದರೆ ಇಡೀ ಶರಣ ಸಂಕುಲವನ್ನೇ ನೆನೆದಂತೆ. ವಿಶ್ವದ ಎಲ್ಲ ದಾರ್ಶನಿಕರನ್ನು ನೆನೆದಂತೆ. ಲೋಕದ ಎಲ್ಲ ಮಂಗಲಮಯವಾದುದನ್ನು ನೆನೆದಂತೆ.

ಲಿಂಗಾಯತ ಧರ್ಮ ಎಂಬುದು ನಿಜವಾದ ಅರ್ಥದಲ್ಲಿ ಬಸವಧರ್ಮವೇ ಆಗಿದೆ. ಗುರುವಚನವೆಂಬ ಲಿಂಗಾಯತ ಧರ್ಮಗ್ರಂಥ ಬಸವಧರ್ಮಗ್ರಂಥವೇ ಆಗಿದೆ. ಲಿಂಗಾಯತ ಧರ್ಮಗ್ರಂಥ ಮೂರು ಕಟ್ಟುಗ್ಗಳಿಂದ ಕೂಡಿದೆ. ಬಸವಣ್ಣನವರ 'ಷಟ್‌ಸ್ಥಲದ ವಚನಗಳು', ಚನ್ನಬಸವಣ್ಣನವರ 'ಕರಣಹಸಿಗೆ' ಮತ್ತು ಅಲ್ಲಮ ಪ್ರಭುದೇವರ 'ಮಂತ್ರಗೋಪ್ಯ' ಎಂಬ ಈ ಮೂರುಕಟ್ಟುಗಳನ್ನು ಬಸವ ಪರಂಪರೆಯ ವಿರಕ್ತ ಮಠಗಳಲ್ಲಿ ಮಾಹೇಶ್ವರ ದೀಕ್ಷೆ ಪಡೆಯುವವರ ಜೋಳಿಗೆಯಲ್ಲಿ ಹಾಕುವ ಪರಂಪರೆಯನ್ನು ಗುರುತಿಸಿದ ರೆವರೆಂಡ್ ಉತ್ತಂಗಿ ಚನ್ನಪ್ಪನವರು ತಮ್ಮ ಬದುಕು ಬರಹಗಳ ಸಂಶೋಧನಾ ವಿದ್ಯಾರ್ಥಿಯಾಗಿದ್ದ ಡಾ. ಎಸ್. ಆರ್. ಗುಂಜಾಳ ಅವರಿಗೆ ವಿವರಿಸಿದರು. ಅಲ್ಲಿಯವರೆಗೆ ಈ ಮೂರು ಕಟ್ಟುಗಳಿಂದ ಕೂಡಿದ ಗ್ರಂಥವೇ ಲಿಂಗಾಯತ ಧರ್ಮಗ್ರಂಥ ಎಂಬ ವಿಚಾರ ಯಾರ ತಲೆಯಲ್ಲೂ ಹೊಳೆದಿರಲಿಲ್ಲ! ಈ ಸತ್ಯವನ್ನು ಡಾ. ಎಸ್.ಆರ್. ಗುಂಜಾಳ ಅವರಿಂದ ಅರಿತ ಬಸವ ಸೇವಾ ಪ್ರತಿಷ್ಠಾನದವರು, ಮೂರೂ ಕಟ್ಟುಗಳನ್ನು ಕೂಡಿಸಿ ಲಿಂಗಾಯತ ಧರ್ಮಗ್ರಂಥ 'ಗುರುವಚನ' ಎಂದು ಪ್ರಕಟಿಸುವುದರ ಮೂಲಕ ಲಿಂಗಾಯತ ಧರ್ಮಗ್ರಂಥಕ್ಕೆ ಪ್ರಚಾರ ನೀಡಿದ್ದಾರೆ.

ಬಸವಣ್ಣನವರ ವಚನಗಳು ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮೂಲಕ ಭೂಮಿ ಪ್ರಧಾನವಾದುವು, ಚನ್ನಬಸವಣ್ಣನವರ 'ಕರಣಹಸಿಗೆ' ದೇಹ ಮತ್ತು ಮನಸ್ಸು ಪ್ರಧಾನವಾದುದು, ಅಲ್ಲಮ ಪ್ರಭುಗಳ ಮಂತ್ರಗೋಪ್ಯ ಆಕಾಶ ಪ್ರಧಾನವಾದುದು. ಹೀಗೆ ಮೂರೂ ಕಟ್ಟುಗಳ ಸಂಕಲನ ನಮ್ಮ ದೇಹ, ಮನಸ್ಸು, ಬದುಕುವ ಭೂಮಿ ಮತ್ತು ಇವೆಲ್ಲವನ್ನು ಒಳಗೊಂಡ ವಿಶ್ವದ ಕುರಿತು ವಿವರಿಸುವ ಧರ್ಮಗ್ರಂಥವಾಗಿದೆ.

ಈ ಧರ್ಮಗ್ರಂಥವನ್ನು ಸಿಖ್ಖರ ಧರ್ಮಗ್ರಂಥವಾದ ಗುರು ಗ್ರಂಥಸಾಹೀಬ್ ಹಾಗೆ ವಿದ್ವತ್‌ಪೂರ್ಣವಾಗಿ ಸಂಪಾದನೆ ಮಾಡುವುದು ಈ ಕಾಲದ ಅವಶ್ಯಕತೆಯಾಗಿದೆ. ವಚನಗಳ ವಿದ್ವತ್‌ಪೂರ್ಣ ಸಂಪಾದನೆಗೆ ಮೊದಲು 12ನೇ ಶತಮಾನದಲ್ಲಿ ಲಿಂಗಾಯತ ಧರ್ಮಗ್ರಂಥದ ಆರಂಭ ಹೇಗಾಗಿರಬಹುದು? ಕಲ್ಯಾಣ ಹತ್ಯಾಕಾಂಡದ ನಂತರ ಯಾವರೀತಿ ಅಳಿದುಳಿದ ವಚನಗಳನ್ನು ಸಂಗ್ರಹಿಸಿರಬಹುದು? ನಂತರ 15ನೇ ಶತಮಾನದಿಂದ ವಚನ ಸಂಕಲನಕಾರರು ವಚನಗಳನ್ನು ಸಂಕಲನ ಮಾಡುವ ವೇಳೆ ವಚನಕಾರರ ವಚನಕಟ್ಟುಗಳು ಯಾವ ರೀತಿಯಲ್ಲಿ ಇದ್ದವು? ಸಂಸಾರ ಹೇಯಸ್ಥಲದಂಥ ಸ್ಥಲಗಳು ಬಸವಣ್ಣನವರ ವಚನಗಳಲ್ಲಿ ಇರಲು ಸಾಧ್ಯವೆ? ಹೀಗೆ ಅನೇಕ ಪ್ರಶ್ನೆಗಳು 21ನೇ ಶತಮಾನದ ವಚನಪ್ರಿಯರಿಗೆ ಕಾಡುವುದು ಸ್ವಾಭಾವಿಕವಾಗಿದೆ. ಇಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೊದಲು ಡಾ. ಎಸ್. ಆರ್. ಗುಂಜಾಳ ಅವರು ರೆವೆರೆಂಡ್ ಉತ್ತಂಗಿ ಚನ್ನಪ್ಪನವರ ವಿಚಾರಧಾರೆಯನ್ನು ಪ್ರಸ್ತುತ ಪಡಿಸಿದ ಹಿನ್ನೆಲೆಯಲ್ಲಿ ಒಂದಿಷ್ಟು ಚಿಂತನೆ ಮಾಡುವುದು ಅವಶ್ಯವಾಗಿದೆ.

"ನನ್ನ ಅಭಿಪ್ರಾಯದಂತೆ ಬಸವಾದಿ ಶರಣರ ಕಾಲಾನಂತರ ಧರ್ಮವು ಜಾಗೃತವಾಗಿದ್ದು ಶರಣತತ್ತ್ವಗಳು ಸಕಲ ಮಾನವರಲ್ಲಿ ಅರಿಕೆಯಾಗಬೇಕಾದರೆ, ಅವರ ತತ್ತ್ವಗಳನ್ನು ಆಚರಣೆಯಲ್ಲಿಟ್ಟುಕೊಂಡು ಹೋಗುವವರು ಬೇಕಷ್ಟೆ. ಶರಣ ತತ್ತ್ವಗಳ ಅನುಷ್ಠಾನ ಮಾಡಬೇಕೆಂದು ಮನಸಾರೆ ಬಯಸುವವರು ಕೆಲವರು ಆಗ ಮುಂದೆ ಬಂದರು. ಅವರಿಗೆ ಸಮಾಜ ಸೇವಕರು, ಸಮಾಜ ಸುಧಾರಕರು, ಸಮಾಜ ಮಾರ್ಗದರ್ಶಕರು– ಎಂದು ಕರೆಯಬಹುದು. ಇವರು ಲಿಂಗಾನುಭಾವಿಗಳಿದ್ದು ಇವರಿಗೆ 'ಮಾಹೇಶ್ವರ ದೀಕ್ಷೆ'ಯನ್ನು ಕೊಟ್ಟು ಜನಸೇವೆಗೆ ಅಣಿಗೊಳಿಸುವ ಪದ್ಧತಿಯೊಂದು ಪ್ರಾರಂಭವಾಗಿತ್ತು." ಎಂದು ಉತ್ತಂಗಿ ಚನ್ನಪ್ಪನವರು ತಿಳಿಸಿದ್ದಾರೆ.

ಕಲ್ಯಾಣ ಹತ್ಯಾಕಾಂಡದ ನಂತರ ನೂರಾರು ವರ್ಷಗಳ ವರೆಗೆ ಲಿಂಗವಂತರಿಗೆ ಶರಣರ ವಚನಗಳ ರಕ್ಷಣೆ ಮಾಡುವುದೇ ಬಹು ಪ್ರಯಾಸದ ಕೆಲಸವಾಗಿತ್ತು. ಆ ಸಂದರ್ಭದಲ್ಲಿ ಬಸವಾದಿ ಪ್ರಮಥರ ಲಿಂಗಾಯತ ತತ್ತ್ವವನ್ನು ಪ್ರಚಾರ ಮಾಡುವ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ ಇರಲಿಲ್ಲ. ಆದರೆ ಬದುಕಿನ ನವಸಂಸ್ಕೃತಿ ಮತ್ತು ನಾಗರೀಕತೆಯ ಸಂಸ್ಕಾರದಿಂದ ಕೂಡಿದ ಈ ಶರಣಮಾರ್ಗವನ್ನು ಧರ್ಮದ ಚೌಕಟ್ಟಿನಲ್ಲಿ ಉಳಿಸಿಕೊಳ್ಳುವುದು ಅತ್ಯವಶ್ಯಕವಾಗಿತ್ತು.

ಶರಣರ ವಚನ ಚಳವಳಿಯ ಮೊದಲೇ ಪಾಶುಪತ, ಕಾಳಾಮುಖ, ನಾಥ ಮುಂತಾದವರ ಮಠಗಳಿದ್ದವು. ಶರಣರ ಚಳವಳಿಯಿಂದಾಗಿ ಈ ಮಠಗಳು ತಮ್ಮ ಮಹತ್ವವನ್ನು ಕಳೆದುಕೊಂಡು ನಿರ್ಗತಿಕವಾದವು. ಆದರೆ ಶರಣರನ್ನು ಪಟ್ಟಭದ್ರರು ದಿಕ್ಕಾಪಾಲು ಮಾಡಿದ ಮೇಲೆ ವಚನ ಚಳವಳಿ ಸ್ಥಗಿತಗೊಂಡಿತು. ಆಗ ಮೇಲ್ಜಾತಿಗಳಿಂದ ಮತ್ತು ವಿವಿಧ ಪಂಥಗಳಿಂದ ಬಂದು ಇಷ್ಟಲಿಂಗ ತತ್ತ್ವ ಪ್ರಸಾರದ ಜಂಗಮರಾದವರು ಹಳೆಯ ಜಾಡನ್ನು ಹಿಡಿದು ನಿರ್ಗತಿಕ ಮಠಗಳ ಮೇಲೆ ಪ್ರಭುತ್ವ ಸಾಧಿಸಿದರು. ಆ ಮೂಲಕ ಶರಣರ ಲಿಂಗವಂತ ಸನ್ಮಾರ್ಗದಲ್ಲಿ ಶೈವ ಶಾಖೆಗಳ ಸಂಪ್ರದಾಯಗಳು ನುಸುಳಿದವು.

ಶರಣ ಚಳವಳಿಯಲ್ಲೇ ಇದ್ದ ಇಂಥ ಅವಕಾಶವಾದಿ ಜಂಗಮರ ಬಗ್ಗೆ ಬಸವಣ್ಣನವರು ಅನೇಕ ವಚನಗಳಲ್ಲಿ ಎಚ್ಚರಿಸಿದ್ದು ಅವರ ಅನನ್ಯ ಪ್ರತಿಭೆಗೆ ಸಾಕ್ಷಿಯಾಗಿದೆ. ಹೀಗೆ ಮಠಗಳಿಲ್ಲದ ಲಿಂಗವಂತ ಸಮಾಜದಲ್ಲಿ ಅನನ್ಯವಾಗಿದ್ದ ಅನುಭವಮಂಟಪ ಮೂಲೆಗುಂಪಾಗಿ ಹೊಸ ಮುಖವಾಡದೊಂದಿಗೆ ಹಳೆಯ ಮಠಗಳ ಪ್ರವೇಶವಾಯಿತು. ಆಗ ಶರಣರ ಚಳವಳಿಯ ಮೂಲ ಉದ್ದೇಶಕ್ಕೆ ಹಿನ್ನಡೆಯುಂಟಾಗತೊಡಗಿತು.

ಹಿಂಸೆ ಮತ್ತು ಸ್ವಯಂ ಹಿಂಸಾಭಕ್ತಿಯಿಂದ ಕೂಡಿದ್ದ ವೀರಶೈವವು ಶೈವದ ಒಂದು ಆತ್ಮಾರ್ಪಣೆಯ ಆಚರಣೆಯಾಗಿದ್ದು ಅದರ ಅನುಯಾಯಿಗಳು ಶರಣರ ಚಳವಳಿಯ ನಂತರ ಪ್ರಬಲವಾಗತೊಡಗಿದ ಕಾರಣ ಕಳೆದ ಐದಾರು ಶತಮಾನಗಳ ಅವಧಿಯಲ್ಲಿ ಲಿಂಗಾಯತಕ್ಕೆ ಪರ್ಯಾಯವಾಗಿ ವೀರಶೈವ ಪದವು ಹಳೆ ಮೈಸೂರು ಭಾಗದಲ್ಲಿ ಪ್ರಭಾಶಾಲಿಯಾಯಿತು.

ಉತ್ತರ ಕರ್ನಾಟಕದಲ್ಲಿ ಲಿಂಗಾಯತವೇ ಪ್ರಮುಖವಾಗಿತ್ತು. ಲಿಂಗವಂತ ರೈತರನ್ನು ಒಕ್ಕಲಿಗರೆಂದೂ ಲಿಂಗವಂತ ವ್ಯಾಪಾರಿಗಳನ್ನು ಬಣಜಿಗರೆಂದೂ ಕರೆಯುವುದೇ ವಾಸ್ತವವಾಗಿತ್ತು. ಆದರೆ 20ನೇ ಶತಮಾನದ ಆರಂಭದಿಂದ ಉತ್ತರ ಕರ್ನಾಟಕದ ಭಾಗದಲ್ಲೂ ವೀರಶೈವ ಪದದ ಬಳಕೆಗೆ ಪ್ರಚಾರ ದೊರೆಯಲಾರಂಭಿಸಿತು. ವಿರಕ್ತಮಠದ ಸ್ವಾಮಿಗಳು ಕೂಡ ಕಾಶಿಗೆ ಹೋಗಿ ಒಂದಿಷ್ಟು ವೇದಾಗಮಗಳನ್ನು ಓದಿ ಸಂಸ್ಕೃತ ಪಂಡಿತರೆನಿಸಿಕೊಂಡು ಬರುವುದೇ ಮಹತ್ವದ ವಿಷಯವಾಗಿತ್ತು. ಶೈವಾಗಮಗಳೇ ಅನೇಕರಿಗೆ ಮುಖ್ಯವಾದವು. 'ಸಿದ್ಧಾಂತ ಶಿಖಾಮಣಿ'ಯು ವಚನಗಳಿಗಿಂತ ಪೂರ್ವದ್ದು ಮತ್ತು ಮೂಲ ಧರ್ಮಗ್ರಂಥ ಎಂಬ ಭ್ರಮೆಯನ್ನು ಅನೇಕ ವಿರಕ್ತ ಸ್ವಾಮಿಗಳು ಕೂಡ ಹೊಂದಿದ್ದರು. ಈ ಎಲ್ಲ ಹಿನ್ನೆಲೆಯಲ್ಲಿ ಲಿಂಗಾಯತವು ವೀರಶೈವ ಆಗುವ ಪ್ರಕ್ರಿಯೆ ವಚನ ಚಳವಳಿ ಕುಸಿದಾಗಲೇ ಸಣ್ಣಗೆ ಆರಂಭವಾಗಿ ಈ ರೀತಿಯಲ್ಲಿ ಮುಂದುವರಿಯಿತು. ಇಂದು ಅದರ ಆಘಾತಕಾರಿ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಈಗ ಅದು ಸ್ವತಂತ್ರ ಧರ್ಮವಾಗಿ ಉಳಿಯದೆ ಹಿಂದೂ ಧರ್ಮದ ಭಾಗವಾಗಿ ಹೋಗುವಂಥ ದುಸ್ಥಿತಿಯನ್ನು ತಲುಪಿದೆ. ಅನೇಕ 'ವಿರಶೈವ ಲಿಂಗಾಯತ' ಸ್ವಾಮಿಗಳು ಮತ್ತು ಜನನಾಯಕರು ಹೋಮ ಹವನಗಳಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಲಿಂಗಾಯತ

ಧರ್ಮಕ್ಕೆ ವಿರುದ್ಧವಾದ ಇಂಥ ಆಚರಣೆಗಳನ್ನು ತಡೆಯಲು ಮತ್ತು 'ಲಿಂಗಾಯತ ಸ್ವತಂತ್ರ ಧರ್ಮ' ಎಂಬ ಸತ್ಯವನ್ನು ಜಗತ್ತಿಗೆ ಸಾರಲು 'ಗುರುವಚನ' ಲಿಂಗಾಯತ ಧರ್ಮಗ್ರಂಥ ಅತ್ಯಂತ ಅವಶ್ಯವಾಗಿದೆ.

ಐತಿಹಾಸಿಕ ಹಿನ್ನೆಲೆಯ ಕಾರಣದಿಂದ ಮಠಗಳು ವರ್ಜ್ಯವೆನಿಸಿದರೂ 20ನೇ ಶತಮಾನದಲ್ಲಿ ಬಹುಪಾಲು ವಿರಕ್ತ ಮತ್ತು ಅನೇಕ ಗುರುವರ್ಗದ ಮಠಗಳು ಕರ್ನಾಟಕದಲ್ಲಿ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಮಹತ್ ಕಾರ್ಯವನ್ನು ಮಾಡಿವೆ. ಇಂದು ಕರ್ನಾಟಕದ ಶೈಕ್ಷಣಿಕ ಉನ್ನತಿಗೆ ಈ ಮಠಗಳ ಶೈಕ್ಷಣಿಕ ಸೇವೆಯೆ ಅಡಿಪಾಯವಾಗಿದೆ. ಇನ್ನು ವೀರಶೈವ ಪದದ ಬಗೆಗೆ ಹೇಳಬೇಕೆಂದರೆ, ಲಿಂಗಾಯತ ಜನಸಮುದಾಯ ಅದನ್ನು ಲಿಂಗಾಯತಕ್ಕೆ ಪರ್ಯಾಯ ಎಂದೇ ಭಾವಿಸಿದೆ. ಮೊದಮೊದಲು ಜಂಗಮ ವಿದ್ವಾಂಸರು ಸೊಲ್ಲಾಪುರದ ವಾರದ ಮಲ್ಲಪ್ಪನವರಂಥ ದೊಡ್ಡ ದಾನಿಗಳ ಮನವೊಲಿಸಿ ವೀರಶೈವ ಪದಕ್ಕೆ ಹೆಚ್ಚಿನ ಚಾಲನೆ ನೀಡಿದರು. 'ವೀರಶೈವ' ಎಂದರೆ ಏನು ಎಂಬುದು ಲಿಂಗಾಯತರಿಗೆ ಗೊತ್ತಾಗದ ಕಾರಣದಿಂದಲೇ ಉತ್ತರ ಕರ್ನಾಟಕದ ಭಾಗದಲ್ಲಿ 'ವೀರಶೈವ ಲಿಂಗಾಯತ' ಎಂಬ ಪದಪುಂಜ ಬಳಕೆಗೆ ಬಂದಿತು. ಲಿಂಗಾಯತ ವಿದ್ವಾಂಸರು 'ಲಿಂಗಾಯತ ವಚನಧರ್ಮವಾದರೆ ವೀರಶೈವ ಆಗಮ ಧರ್ಮ' ಎಂಬ ಸತ್ಯವನ್ನು ಇತ್ತೀಚಿನ ವರ್ಷಗಳಲ್ಲಿ ಪ್ರತಿಪಾದಿಸುತ್ತಿದ್ದಾರೆ. ಹೀಗೆ ಪ್ರತಿಪಾದಿಸುವವರು ಕೂಡ ಈ ಸತ್ಯದ ಅರಿವಾಗುವ ವರೆಗೆ ಲಿಂಗಾಯತ ಮತ್ತು ವೀರಶೈವ ಪದಗಳನ್ನು ಏಕಾರ್ಥದ ಪದಗಳಂತೆಯೆ ಬಳಸಿದ್ದಾರೆ. ಜನಮನದಲ್ಲಿಂದು ಈ ರೂಢಿಯೇ ಅಚ್ಚೊತ್ತಿದೆ. ಬಸಣ್ಣನೇ ಧರ್ಮಗುರು, ವಚನವೇ ಧರ್ಮಗ್ರಂಥ ಎಂಬುದು ಜನಮಾನಸದಲ್ಲಿ ಅಚ್ಚೊತ್ತಿದಾಗ ಈ ವೀರಶೈವ ಎಂಬುದು ಸಹಜವಾಗಿಯೆ ಮಾಯವಾಗುತ್ತದೆ.

"ಮಾಹೇಶ್ವರ ದೀಕ್ಷೆ' ಪಡೆದವರಿಗೆ ದೀಕ್ಷಾ ಸಮಯದಲ್ಲಿ ಕೆಲವು ವಸ್ತುಗಳನ್ನು ಕೊಡುವ ಪದ್ಧತಿ ಇತ್ತು. ... ಮಾಹೇಶ್ವರನಿಗೆ ಬಲದ ಕೈಯಲ್ಲೊಂದು ಬೆತ್ತ, ಎಡದ ಹೆಗಲಿಗೊಂದು ಕ್ಯಾವಿ ಬಣ್ಣದ ಜೋಳಿಗೆ, ಜೋಳಿಗೆಯಲ್ಲಿ ಧರ್ಮಗ್ರಂಥದ ಕಟ್ಟು. ಇವಿಷ್ಟನ್ನು ಕೊಟ್ಟು ಲೋಕಸೇವೆಗಾಗಿ ಕಳುಹಿಸಿಕೊಡುತ್ತಿದ್ದರು. ತನ್ನ ಆನಿಕೆಗಾಗಿ, ಸಂರಕ್ಷಣೆಗಾಗಿ ಬೆತ್ತದ ಉಪಯೋಗ, ಜನಸೇವೆಯಿಂದ ಬಂದ ಅಂದಂದಿನ ಪ್ರಸಾದ ರಕ್ಷಣೆಗಾಗಿ ಜೋಳಿಗೆ, ಆತ್ಮರಕ್ಷಣೆಗಾಗಿ 'ಧರ್ಮಗ್ರಂಥ'ದ ಕಟ್ಟು. ಜನತೆಯನ್ನು ಯಾವ ರೀತಿಯಿಂದ ಮಾರ್ಗದರ್ಶನ ಮಾಡಬೇಕು; ತನ್ನ ಆಚರಣೆಯನ್ನು ಎಂತು ಇಟ್ಟುಕೊಳ್ಳಬೇಕು; ಜೀವಾತ್ಮ ಪರಮಾತ್ಮರ ಸಂಬಂಧವನ್ನು ಹೇಗೆ ಕಲ್ಪಿಸಿಕೊಳ್ಳಬೇಕು; ಲಿಂಗಾಂಗಸಾಮರಸ್ಯ, ಷಟ್‌ಸ್ಥಲದ ಸಾರ, ಅಷ್ಟಾವರಣದ ಗುಟ್ಟು, ಸಕಲ ಶಾಸ್ತ್ರ-ತತ್ತ್ವನೀತಿ- ವಿಚಾರ ಇವುಗಳನ್ನೆಲ್ಲ ಸುಲಭದಲ್ಲಿ ಅರಿತುಕೊಳ್ಳುವ ದಾರಿ ಯಾವುದು- ಇವೆಲ್ಲ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಈ ಧರ್ಮಗ್ರಂಥದ ಕಟ್ಟು ನಿರಾಭಾರಿ ವೀರಶೈವ ಮಾಹೇಶ್ವರನಿಗೆ ಸಹಾಯವಾಗುತ್ತದೆ. ಅವನ ಮುಕ್ತಿಗೆ ದಾರಿ ಈ ಗ್ರಂಥ. .." ಎಂದು ಉತ್ತಂಗಿ ಚನ್ನಪ್ಪನವರು ತಿಳಿಸಿದ್ದಾರೆ. ಹೀಗೆ ಹೇಳುವಾಗ

ಅವರು ಲಿಂಗಾಯತ ಪದ ಬಳಸದೆ ವೀರಶೈವ ಪದ ಬಳಸಿದ್ದಾರೆ. ಲಿಂಗಾಯತವು ವೀರಶೈವವಾಗುವ ಸಂದರ್ಭದಲ್ಲಿ ಇಷ್ಟಲಿಂಗ ಮತ್ತು ವಚನಗಳ ಜೊತೆಗೇ ಲಿಂಗಾಯತ ಧರ್ಮದಲ್ಲಿ ಇಲ್ಲದ ಮಠಗಳು, ಮಂದಿರಗಳು, ಸ್ಥಾವರಲಿಂಗ, ಶೈವಾಗಮಗಳು, ಪುರಾಣಗಳು, ಸಿದ್ಧಾಂತ ಶಿಖಾಮಣಿ ಮತ್ತು ವೇದಗಳಲ್ಲದೆ ಹೋಮ, ಹವನ, ಯಜ್ಞ, ಯಾಗಗಳು ಕೂಡ ನುಸುಳಿ ಲಿಂಗಾಯತರ ಸಂಪ್ರದಾಯಗಳಾದವು ಎಂಬುದನ್ನು ಮರೆಯಬಾರದು.

"ಆ ಧರ್ಮಗ್ರಂಥದ ಕಟ್ಟಿನಲ್ಲಿ 1) ಬಸವಣ್ಣನವರ 'ಷಟ್‌ಸ್ಥಲದ ವಚನಗಳು' 2) ಪ್ರಭುದೇವರ 'ಮಂತ್ರಗೋಪ್ಯ' 3) ಚನ್ನಬಸವಣ್ಣನವರ 'ಕರಣಹಸಿಗೆ' ಈ ಮೂರು ಗ್ರಂಥಗಳು ಇರುತ್ತಿದ್ದವು. ಇವುಗಳು ಲಿಂಗಾಯತರಿಗೆ ಅತ್ಯಂತ ಮಹತ್ವದ ಗ್ರಂಥಗಳು." ಎಂದು ಹೇಳುವಾಗ ಉತ್ತಂಗಿ ಚನ್ನಪ್ಪನವರು ಲಿಂಗಾಯತ ಪದ ಬಳಸಿದ್ದು ಗಮನಾರ್ಹವಾಗಿದೆ. ಗಂಗೋತ್ರಿಯಲ್ಲಿ ಗಂಗಾನದಿಯ ನೀರು ಸ್ವಚ್ಛವಾಗಿಯೇ ಇರುತ್ತದೆ. ಆದರೆ ಕಾಶಿಯನ್ನು ತಲುಪಿದ ಸಂದರ್ಭದಲ್ಲಿ ಎಂಥ ರೂಪವನ್ನು ಪಡೆಯುತ್ತದೆ? ಸ್ವತಂತ್ರಧರ್ಮವಾದ ಲಿಂಗಾಯತವು ಇಂದು ಹಿಂದೂಧರ್ಮದ ಒಂದು ಜಾತಿಯಾಗಿ ಪರಿಣಮಿಸಿದ್ದು ಐತಿಹಾಸಿಕ ವಿಪರ್ಯಾಸವೇ ಸರಿ. ಕಾಯಕದ ಮಹತ್ವವನ್ನು ಸಾರುತ್ತ ಸಂಸಾರ ಪ್ರಧಾನವಾದ ಲಿಂಗಾಯತ ಧರ್ಮಕ್ಕೆ ವಿವಿಧ ಕಾಯಕ ಸಮಾಜಗಳ ಪ್ರತಿನಿಧಿಗಳಾದ 770 ಅಮರಗಣಂಗಳ ಸಮೂಹ ನಾಯಕತ್ವ ಒದಗಿಸಿದ್ದ ಬಸವಣ್ಣನೇ ಧರ್ಮಗುರು, ಕನ್ನಡವೇ ಧರ್ಮಭಾಷೆ, ವಚನಗಳೇ ಧರ್ಮಗ್ರಂಥ, ಇಷ್ಟಲಿಂಗವೇ ಧರ್ಮತತ್ತ್ವಲಾಂಛನ. ಬಸವಣ್ಣನವರ ಜನನ ಮತ್ತು ಬಾಲ್ಯಕ್ಕೆ ಸಂಬಂಧಿಸಿದ ಇಂಗಳೇಶ್ವರ, ಬಾಗೇವಾಡಿ, ವಚನ ರಚನೆ ಮಾಡಿದ ಶರಣರ ಕಾಯಕ ಸ್ಥಳವಾದ ಬಸವಕಲ್ಯಾಣ, ಬಸವಣ್ಣನವರ ವಿದ್ಯಾರ್ಜನೆ ಮತ್ತು ಐಕ್ಯಸ್ಥಳವಾದ ಕೂಡಲಸಂಗಮ ಹಾಗೂ ವಚನರಕ್ಷಣೆಯಾದ ಉಳವಿ ಮುಂತಾದವು ಧಾರ್ಮಿಕ ಕ್ಷೇತ್ರಗಳಾಗಿ ಮತ್ತು ಶರಣ ಚಿಂತನ ಕೇಂದ್ರಗಳಾಗಿ ಬೆಳೆಯುವುದು ಅವಶ್ಯವಾಗಿದೆ.

"ಈ ಮೂರು ಗ್ರಂಥಗಳ ತಾಡ ಓಲೆಯ ಒಂದು ಕಟ್ಟನ್ನು ಮಾಹೇಶ್ವರ ದೀಕ್ಷೆ ಪಡೆಯುವವರಿಗೆ ಕೊಡುವ ಪದ್ಧತಿಯು ಲಿಂಗಾಯತರಲ್ಲಿ 15ನೇ ಶತಮಾನದ ವರೆಗೆ ನಡೆದುಬಂತು. ವಿಜಯನಗರದ ಪ್ರೌಢದೇವರಾಯ ಅರಸನ ಕಾಲಕ್ಕೆ ಪ್ರಸಿದ್ಧರಾದ ನೂರೊಂದು ವೀರಶೈವ ವಿರಕ್ತರು 'ಶೂನ್ಯಸಂಪಾದನೆ' ಎಂಬ ನಾಲ್ಕನೆಯ ಗ್ರಂಥವೊಂದನ್ನು ಈ ಮೂರರ ಕಟ್ಟಿನೊಂದಿಗೆ ಕೂಡಿಸಿ ಮಾಹೇಶ್ವರ ದೀಕ್ಷೆ ಪಡೆದವರಿಗೆ ಕೊಡುವ ಪದ್ಧತಿಯನ್ನು ರೂಢಿಯಲ್ಲಿ ತಂದರು. ಈ ನಾಲ್ಕನೆಯ ಗ್ರಂಥವು ಅನುಭವ ಮಂಟಪದಲ್ಲಿ ಪ್ರಸಿದ್ಧರಾದ ಅನೇಕ ಶಿವಶರಣ- ಶರಣೆಯರ ವಚನಗಳ ಸುಸಂಬದ್ಧ ಜೋಡಣೆಯಾಗಿದೆ, ಸಂಗ್ರಹವಾಗಿದೆ. ನನ್ನ ದೃಷ್ಟಿಯಲ್ಲಿ ಈ ನಾಲ್ಕು ಗ್ರಂಥಗಳನ್ನೊಳಗೊಂಡ ಒಂದು ಬೃಹತ್ ಗ್ರಂಥವು ವೀರಶೈವ ಧರ್ಮದ ಕೈಪಿಡಿಯಾಗಿದೆ. ಇದಕ್ಕೆ ವೀರಶೈವ ಧರ್ಮದ 'ಬೈಬಲ್' ಎಂದು ಕರೆಯಲಡ್ಡಿಯಿಲ್ಲ."

ಎಂದು ಉತ್ತಂಗಿ ಚನ್ನಪ್ಪನವರು ತಿಳಿಸುವ ಮೂಲಕ ವಿವಿಧ ಶರಣರ ವಚನಗಳು ಲಿಂಗಾಯತ ಧರ್ಮಗ್ರಂಥದಲ್ಲಿ ಸೇರಬೇಕೆಂಬುದನ್ನು ಸೂಚಿಸಿದ್ದಾರೆ.

ವೈಷ್ಣವ ಅವಧೂತರಿಗೆ ಸಂತರು ಎನ್ನುತ್ತಿದ್ದರು. ನೂರೊಂದು ವಿರಕ್ತರು ಶೈವ ಅವಧೂತ ಸಂಪ್ರದಾಯದವರಾಗಿದ್ದು ಅವರನ್ನು ಶಾಂತರು ಎಂದು ಕರೆಯಲಾಗುತ್ತಿತ್ತು. ಈ ಶಾಂತರಿಗೂ ಬಸವಧರ್ಮವಾದ ಲಿಂಗಾಯತಕ್ಕೂ ನೇರ ಸಂಬಂಧವಿಲ್ಲ. ಮೊದಲನೆಯ ಶೂನ್ಯ ಸಂಪಾದನೆಯ ಕಾಲ ನಿರ್ದಿಷ್ಟವಾಗಿಲ್ಲ; ಮಿಕ್ಕ ಶೂನ್ಯ ಸಂಪಾದನೆಗಳು ತೋಂಟದ ಸಿದ್ಧಲಿಂಗಯತಿಗಳ ಎಡಬಲದಲ್ಲಿ ಹುಟ್ಟಿವೆ ಎಂದು ತಿಳಿದುಬರುವುದಾಗಿ ಡಾ. ಎಂ.ಎಂ. ಕಲಬುರ್ಗಿ ಅವರು ಹೇಳುತ್ತಾರೆ. ಮಾಹೇಶ್ವರ ದೀಕ್ಷೆ ಕೊಡುವ ಸಂದರ್ಭದಲ್ಲಿ ಈ ಮೂರೂ ಕಟ್ಟುಗಳನ್ನು ಕೊಡಲಾಗುತ್ತಿತ್ತೆಂದು 18ನೇ ಶತಮಾನದ 'ನಿರಂಜನವಂಶ ರತ್ನಾಕರ' ಗ್ರಂಥದಲ್ಲಿ ಬರೆದಿರುವುದಾಗಿ ಅವರು ತಿಳಿಸುತ್ತಾರೆ.

12ನೇ ಶತಮಾನದಲ್ಲಿ ಬಸವಣ್ಣನವರ ಕಾಲಕ್ಕೆ ನಡೆದ ವಚನ ಚಳವಳಿಯಲ್ಲಿ 'ಒಡೆಯರು' ಮತ್ತು 'ಜಂಗಮರು' ಎಂದು ಕರೆಯಿಸಿಕೊಳ್ಳುವವರು ಶರಣತತ್ತ್ವವನ್ನು ಜನಮನಕ್ಕೆ ಮುಟ್ಟಿಸುವವರಾಗಿದ್ದರು. ಅದು ಲಿಂಗಾಯತ ಧರ್ಮದ ಆರಂಭದ ಘಟ್ಟವಾಗಿದ್ದರಿಂದ ಚಳವಳಿಯಲ್ಲಿನ ಬಸವ ಮುಂತಾದ ಪ್ರಬುದ್ಧರ ವಚನಗಳೇ ಹೊಸ ಮಾನವೀಯ ತತ್ತ್ವದ ಪ್ರತಿನಿಧಿಗಳಾಗಿದ್ದವು. ಆ ಕ್ರಮವನ್ನೇ ನಾಥ, ಕಾಳಾಮುಖ ಮಠಗಳನ್ನು ಸೇರಿದ ಜಂಗಮರು ಬಸವಧರ್ಮದಲ್ಲಿ ಇಲ್ಲದ ಸ್ವಾಮಿಗಳಾಗಿ ಪರಿವರ್ತನೆಯಾದ ನಂತರ ಮುಂದುವರಿಸಿದರು. ಲಿಂಗಾಯತ ಧರ್ಮಗ್ರಂಥವನ್ನು ದೀಕ್ಷಾ ಸಂದರ್ಭದಲ್ಲಿ ಕೊಡುವ ಈ ಕ್ರಮ ಒಂದು ನಿಷ್ಕ್ರಿಯ ಸಂಪ್ರದಾಯವಾಗಿ ಮುಂದುವರಿದದ್ದನ್ನು ಉತ್ತಂಗಿ ಚನ್ನಪ್ಪನವರು ಗಮನಿಸಿದ್ದು, ಅದನ್ನು ಡಾ. ಎಸ್. ಆರ್. ಗುಂಜಾಳ ಅವರು ದಾಖಲಿಸಿದ್ದಾರೆ. ಬಸವ ಸೇವಾ ಪ್ರತಿಷ್ಠಾನದವರು ಈಗಾಗಲೇ ಪ್ರಕಟವಾಗಿರುವ ಬಸವಣ್ಣನವರು ವಚನಗಳನ್ನು, ಅಲ್ಲಪ್ರಭುಗಳ 'ಮಂತ್ರಗೋಪ್ಯ'ವನ್ನು ಮತ್ತು ಚನ್ನಬಸವಣ್ಣನವರ 'ಕರಣಹಸಿಗೆ'ಯನ್ನು ಕೂಡಿಸಿ ಲಿಂಗಾಯತ ಧರ್ಮಗ್ರಂಥವನ್ನು ಪ್ರಕಟಿಸಿದ್ದಾರೆ.

ಪ್ರೌಢದೇವರಾಯನ ಕಾಲದ ನೂರೊಂದು ವಿರಕ್ತರ ಸಂದರ್ಭದಲ್ಲಿ ರಚನೆಯಾದ ಶೂನ್ಯಸಂಪಾದನೆಯನ್ನು ಕೂಡ ಮೇಲೆ ತಿಳಿಸಿದ ಮೂರೂ ಕಟ್ಟುಗಳ ಜೊತೆ ದೀಕ್ಷಾ ಸಂದರ್ಭದಲ್ಲಿ ಕೊಡುವ ಪದ್ಧತಿ ರೂಢಿಗತವಾಯಿತು ಎಂದು ಉತ್ತಂಗಿ ಚನ್ನಪ್ಪನವರು ತಿಳಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಈ ಬೆಳವಣಿಗೆಯ ಜಾಡಿನಲ್ಲಿ ಮತ್ತು ಸಿಖ್ಖರ 'ಗುರು ಗ್ರಂಥಸಾಹೀಬ್' ಮಾದರಿಯಲ್ಲಿ ನಿಖರವಾದ ಲಿಂಗಾಯತ ಅಥವಾ ಬಸವಧರ್ಮಗ್ರಂಥ ರಚನೆಯಲ್ಲಿ ತೊಡಗುವುದು ಇಂದಿನ ಅವಶ್ಯಕತೆಯಾಗಿದೆ. ಇಲ್ಲಿಯ ವರೆಗೆ ಈ ಬಗ್ಗೆ ಚಿಂತಿಸದ ಮಠಾಧೀಶರು ಇಂದು ಒಂದಾಗಿ ಸರ್ವಶರಣರ ಪ್ರಾತಿನಿಧಿಕ ವಚನಗಳನ್ನು ಸಂಪಾದಿಸಿ ಬಸವಣ್ಣನವರ ವಚನಗಳ ಆಶಯಗಳಿಗೆ ಚ್ಯುತಿಬರದಂತೆ ಈ ಮೂರೂ ಕಟ್ಟುಗಳ ಜೊತೆ ಸೇರಿಸಿ ವಿಸ್ತೃತ ಗುರುವಚನ– ಲಿಂಗಾಯತ

ಧರ್ಮಗ್ರಂಥವನ್ನು ತರುವುದರ ಮೂಲಕ ಲಿಂಗಾಯತರಿಗೆ ಮತ್ತು ಸರ್ವಸಮಾಜಗಳ ಜನರಿಗೆ ಧರ್ಮಮಾರ್ಗವನ್ನು ನಿಖರವಾಗಿ ತೋರಿಸಿಕೊಡುವುದು 21ನೇ ಶತಮಾನದ ಚಾರಿತ್ರಿಕ ಜವಾಬ್ದಾರಿಯಾಗಿದೆ.

12ನೇ ಶತಮಾನದ 15 ಸಾವಿರದಷ್ಟು ವಚನಗಳಲ್ಲಿ ಪ್ರಾತಿನಿಧಿಕ ವಚನಗಳ ಆಯ್ಕೆ ಮಾಡಿ ಅವುಗಳನ್ನು ತಾತ್ತ್ವಿಕ ಹಿನ್ನೆಲೆಯಲ್ಲಿ ತರ್ಕಬದ್ಧವಾಗಿ ಮತ್ತು ಅನುಕ್ರಮವಾಗಿ ಜೋಡಿಸಿ ಮೂಲಕಟ್ಟುಗಳಿಗೆ ಚ್ಯುತಿ ಬರದಂತೆ ಎಚ್ಚರಿಕೆ ವಹಿಸಿ ಲಿಂಗಾಯತ ಧರ್ಮಗ್ರಂಥದ ಸಂಪಾದನೆ ಮಾಡಿ 21ನೇ ಶತಮಾನವನ್ನು ಸುಪಥದಲ್ಲಿ ಮುನ್ನಡೆಸುವುದು ಅವಶ್ಯವಾಗಿದೆ. ಆದರೆ ಈ ಜವಾಬ್ದಾರಿ ಬಲು ಕಠಿಣಸಾಧ್ಯವಾಗಿದೆ.

ಪ್ರತಿಯೊಬ್ಬ ವಚನಕಾರರು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದಾರೆ. ಆಯ್ದಕ್ಕಿ ಮಾರಯ್ಯನವರು 'ಕಾಯಕವೇ ಕೈಲಾಸ' ಎಂಬ ಬಸವಧರ್ಮದ ಮಹಾವಾಕ್ಯವನ್ನೇ ಕೊಟ್ಟಿದ್ದಾರೆ. ದೇಹಾರವ (ಇಷ್ಟಲಿಂಗ ಪೂಜೆ) ಮಾಡುವಣ್ಣಗಳಿರಾ ಒಂದು ತುತ್ತು ಆಹಾರವನಿಕ್ಕಿರೆ. ದೇಹಾರಕ್ಕೆ ಆಹಾರವೇ ನಿಚ್ಚಣಿಕೆ' ಎಂದು ಅಂಬಿಗರ ಚೌಡಯ್ಯನವರು ಮಾನವೀಯತೆಯೆ ಇಷ್ಟಲಿಂಗ ಪೂಜೆಯ ತಳಹದಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. 'ಹದ ಮಣ್ಣಲ್ಲದೆ ಮಡಕೆಯಾಗಲಾರದು' ಎಂದು ಕುಂಬಾರ ಗುಂಡಯ್ಯನವರ ಪುಣ್ಯಸ್ತ್ರೀ ಕೇತಲದೇವಿ ತಿಳಿಸಿದ್ದಾಳೆ. ಮಾನವ ಪರಿಪೂರ್ಣನಾಗಬೇಕಾದರೆ ತನ್ನ ಮನಸ್ಸನ್ನು ಉದಾತ್ತಗೊಳಿಸಬೇಕು ಎನ್ನುತ್ತಾಳೆ. 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ' ಎಂದು ಆಯ್ದಕ್ಕಿ ಲಕ್ಕಮ್ಮ ಹೇಳುವುದರ ಮೂಲಕ ಐಹಿಕ ಆಸೆಗಳಿಲ್ಲದೆ ಬದುಕುವವರೇ ಶರಣರು ಎಂದು ಸಾರಿದ್ದಾಳೆ. ಅರಸು ಮುಂತಾದ ಧನಾಢ್ಯರು ಆಸೆಬುರುಕರು ಎಂದು ಹೇಳುವ ಧೈರ್ಯ ಪ್ರದರ್ಶಿಸಿದ್ದಾಳೆ. 'ಲಂಚ ವಂಚನಕ್ಕೆ ಕೈಯಾನದ ಭಾಷೆ' ಎಂದು ಕಸಗುಡಿಸುವ ಸತ್ಯಕ್ಕ ಸತ್ಯಶುದ್ಧ ಬದುಕಿನ ದರ್ಶನ ಮಾಡಿಸಿದ್ದಾಳೆ. 'ಕೈಯಲ್ಲಿ ಕನ್ನಡಿ ಇರಲು ತನ್ನ ತಾ ನೋಡಬಾರದೆ?' ಎಂದು ಕನ್ನಡಿ ಕಾಯಕದ ರೇಮಮ್ಮ ಆತ್ಮವಿಮರ್ಶೆಗೆ ಒಳಪಡಿಸುತ್ತಾಳೆ. 'ಶಿವನ ನೆನೆದಡೆ ಭವ ಹಿಂಗೂದೆಂಬ ವಿವರಗೇಡಿಗಳ ಮಾತು ಕೇಳಲಾಗದು' ಎಂದು ಹೇಳುವ ಅಮುಗೆ ದೇವಯ್ಯ ವೈಚಾರಿಕತೆಯಿಂದ ಕೂಡಿದ ಕ್ರಿಯಾಶೀಲ ಬದುಕಿಗೆ ನಾಂದಿ ಹಾಡುತ್ತಾನೆ. 'ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚನ್ನಯ್ಯನವರು ಎಚ್ಚರಿಸುತ್ತಾರೆ. 'ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ ನಾನೇ ಕಳೆಯಬೇಕು' ಎಂದು ತಿಳಿಸುವ ಅಮುಗೆ ರಾಯಮ್ಮ ಸ್ವಪ್ರಯತ್ನದ ಸಾಧನೆ ಕುರಿತು ಸೂಚಿಸುತ್ತಾಳೆ. 'ಅರ್ಥವೆಂಬುದೇ ಪಾಪ ಬೇರೆ ಪಾಪವಿಲ್ಲ' ಎಂದು ಸಾರುವ ಹಾವಿನಾಳ ಕಲ್ಲಯ್ಯನವರು ಬಂಡವಾಳ ಪ್ರಧಾನ ಸಮಾಜವೆಂಬುದು ಪಾಪದ ಸಮಾಜವೆಂಬ ಸತ್ಯವನ್ನು ಕಂಡುಹಿಡಿದು ಮನುಷ್ಯ ಪ್ರಧಾನ ಸಮಾಜದ ಕಡೆಗೆ ಗಮನ ಹರಿಸುವಂತೆ ಮಾಡುತ್ತಾರೆ. 'ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ' ಎಂದು ಪ್ರಶ್ನಿಸುವ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ 'ಮಸಣಮ್ಮ' ಸ್ತ್ರೀವಾದದ ಬೀಜ ಬಿತ್ತುತ್ತಾಳೆ. 'ಕರಣಂಗಳ ಚೇಷ್ಟೆಗೆ ಮನವೆ

ಬೀಜ' ಎಂಬ ಅಕ್ಕ ಮಹಾದೇವಿಯ ವಾಕ್ಯ ಮಾನವ ದುಃಖದ ಮೂಲವನ್ನು ತೋರಿಸುತ್ತದೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ಜೇಡರ ದಾಸಿಮಯ್ಯ ಅವರು, ಆತ್ಮಸಾಂಗತ್ಯವೆ ಸಂಸಾರಧರ್ಮದ ಮೂಲ ಎಂಬುದನ್ನು ತಿಳಿಹೇಳಿದ್ದಾರೆ. 'ಆನೆ ಕುದುರೆ ಭಂಡಾರವಿರ್ದಡೇನೊ? ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ' ಎಂದು ಮೋಳಿಗೆ ಮಾರಯ್ಯನವರು ಅನಗತ್ಯ ಸಂಪತ್ತನ್ನು ಅಲ್ಲಗಳೆಯುತ್ತಾರೆ. 'ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆ ಬಯಲೆಂಬುದುಂಟೆ?' ಎಂದು ಬೊಂತಾದೇವಿ ಪ್ರಶ್ನಿಸುತ್ತಾಳೆ. 'ಕೊಲ್ಲದಿರ್ಪುದೆ ಧರ್ಮ' ಎಂಬುದು ಸೊಡ್ಡಳ ಬಾಚರಸರ ದೃಢನಿರ್ಧಾರವಾಗಿದೆ. 'ಜೀವ ಹೋದಡೆ ಸಾಯಿ, ಇದಕಾ ದೇವರ ಹಂಗೇಕೆ? ಎಂದು ಲದ್ದೆಯ ಸೋಮಣ್ಣ ಜೈವಿಕ ಪ್ರಕ್ರಿಯೆಯನ್ನು ಸಹಜವಾಗಿಯೇ ಸ್ವೀಕರಿಸಬೇಕೆಂದು ತಿಳಿಸುತ್ತಾನೆ. 'ಒಂದೇ ವಸ್ತು ತನ್ನ ಲೀಲೆಯಿಂದ ಪರಮಾತ್ಮ, ಜೀವಾತ್ಮವಾಯಿತ್ತು' ಎಂದು ಉರಿಲಿಂಗ ಪೆದ್ದಿಗಳು ಅರಹುತ್ತಾರೆ. 'ಆಸೆ ಎಂಬುದು ಭವದ ಬೀಜ, ನಿರಾಸೆ ಎಂಬುದು ನಿತ್ಯ ಮುಕ್ತಿ' ಎಂದು ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ಆತ್ಮಿಕ ಜಗತ್ತಿನ ಮಹತ್ವವನ್ನು ಉಸುರುತ್ತಾಳೆ. ಐಹಿಕ ಆಸೆಗಳು ಮಾನವನ ಅಂತರಾಳದ ತೃಷೆಯನ್ನು ಲೆಕ್ಕಿಸದೆ, ವಸ್ತುಜಗತ್ತಿನ ಮೋಹವನ್ನು ಹೆಚ್ಚಿಸುತ್ತಲೇ ಇರುತ್ತವೆ ಎಂಬುದು ಅವಳ ಅನುಭಾವವಾಗಿದೆ. ಹೀಗೆ 12ನೇ ಶತಮಾನದ ವಚನಕಾರರ ಪ್ರಾತಿನಿಧಿಕ ವಚನಗಳನ್ನು ಗುರುವಚನಧರ್ಮಗ್ರಂಥದಲ್ಲಿ ಅಳವಡಿಸುವುದರ ಮೂಲಕ ಅದನ್ನು ಮೂಲ ಆಶಯಗಳ ಮೇಲೆ ಹೆಚ್ಚಿನ ಬೆಳಕು ಚೆಲ್ಲುವ ವಿಸ್ತೃತ ಧರ್ಮಗ್ರಂಥವಾಗಿಸುವುದು ಈ ಕಾಲದ ಅವಶ್ಯಕತೆಯಾಗಿದೆ.

ಬಸವಧರ್ಮದಲ್ಲಿ ಮಂದಿರಗಳಿಲ್ಲ; ಮೂರ್ತಿಗಳ ಪೂಜೆ ಇಲ್ಲ; ಯಜ್ಞಯಾಗಗಳಿಲ್ಲ, ಶೋಷಣೆ ಇಲ್ಲ; ಅಸಮಾನತೆ ಇಲ್ಲ; ಎಂಥ ಪಾಪಿಯೂ ಹೊಸ ಮನುಷ್ಯನಾಗುವ ಅವಕಾಶವಿದೆ; ಕರ್ಮಸಿದ್ಧಾಂತದಿಂದ ಮುಕ್ತರಾಗುವ ಮಾರ್ಗವಿದೆ; ಸ್ವರ್ಗದ ಆಸೆ ಮತ್ತು ನರಕದ ಭಯವಿಲ್ಲದೆ ಜೀವಕಾರುಣ್ಯದಿಂದ ಬದುಕುವ ಆನಂದತತ್ತ್ವವಿದೆ; ಏಕ ದೇವೋಪಾಸನೆ, ಏಕ ವಿಶ್ವ, ಏಕ ಮಾನವಕುಲದ ಕುರಿತು ಬಸವಧರ್ಮ ಪ್ರತಿಪಾದಿಸುತ್ತದೆ; ಸಕಲಜೀವಾತ್ಮರ ಲೇಸನ್ನು ಬಯಸುತ್ತ ಕ್ರಿಯಾಶೀಲವಾಗುವುದಕ್ಕೆ ನೀಡುವ ಸ್ಫೂರ್ತಿಯೇ ಬಸವಧರ್ಮವಾಗಿದೆ. ಈ ಧರ್ಮ ಎಲ್ಲ ಮಾನವೀಯ ಧರ್ಮಗಳ ಜೊತೆ ಬೆರೆತುಹೋಗುವಂಥದ್ದಾಗಿದೆ. ಇಂಥ ಅತ್ಯಾಧುನಿಕ ಚಿಂತನೆಗಳನ್ನೊಳಗೊಂಡ ಲಿಂಗಾಯತ ಧರ್ಮಗ್ರಂಥ ಇಡೀ ಮಾನವಕುಲದ ಮಹಾಗ್ರಂಥವೇ ಆಗಿದೆ.

ಕರ್ನಾಟಕದಲ್ಲಿನ ಮತ್ತು ಇತರೆ ರಾಜ್ಯಗಳಲ್ಲಿನ ವಿರಕ್ತ ಮಠಗಳು ಇಂದು 'ಮಹಾಮನೆ'ಗಳಾಗಿ ಪರಿವರ್ತನೆಯಾಗುವ ಅವಶ್ಯಕತೆ ಇದೆ. ಇಷ್ಟಲಿಂಗಯೋಗದ 'ಅರಿವಿನ ಮನೆ', ವಚನ ನಿರ್ವಚನದ 'ಅನುಭವಮಂಟಪ', ಜೀವನಶಿಕ್ಷಣದ 'ಕಾಯಕಮನೆ' ಮತ್ತು ಎಲ್ಲರೂ ಒಂದಾಗಿ ಪ್ರಸಾದ ಸೇವಿಸುವ 'ದಾಸೋಹ ಮನೆ'ಗಳನ್ನು

ಈ ಮಹಾಮನೆಗಳು ಒಳಗೊಂಡಿರಬೇಕು. 'ಪರುಷಕಟ್ಟೆ' ಮಂಟಪ ನಿರ್ಮಿಸಬೇಕು. ಅಲ್ಲಿ ಹಗಲುಹೊತ್ತಿನಲ್ಲಾದರೂ ನಿರಂತರವಾಗಿ ವಚನಪಠಣ ನಡೆಯುವ ವ್ಯವಸ್ಥೆಯಾಗಬೇಕು. ವಚನಗಳೇ ನಮ್ಮ ಧರ್ಮಗುರು ಎಂದು ಭಾವಿಸಿ ಪ್ರತಿವರ್ಷ ಗುರುವಚನ ಧರ್ಮಗ್ರಂಥಕ್ಕೆ ಪಟ್ಟಾಭಿಷೇಕ ನಡೆಯುವ ಮತ್ತು ಆ ಸಂದರ್ಭದಲ್ಲಿ ಸಾಮೂಹಿಕವಾಗಿ ಧರ್ಮಗ್ರಂಥಗಳನ್ನು ಹೊತ್ತುಕೊಂಡು ಮೆರವಣಿಗೆ ಹೊರಡಿಸುವುದರ ಮೂಲಕ ವಚನಗಳ ಮಹತ್ವವನ್ನು ಸಾರಬೇಕು. ಹತಾತ್ಮ ಶರಣರ ಸ್ಮರಣೋತ್ಸವ ಆಚರಿಸಬೇಕು.

ಬಸವ ಸೇವಾ ಪ್ರತಿಷ್ಠಾನದ ಬಸವಗಿರಿಯಲ್ಲಿನ ಪರುಷಕಟ್ಟೆಯಲ್ಲಿ ನಿತ್ಯ ವಚನ ಪಠಣ ನಡೆಯುತ್ತಿದೆ. ಪ್ರತಿವರ್ಷ ಚನ್ನಬಸವಣ್ಣನವರ ಸ್ಮರಣೋತ್ಸವದ ಸಂದರ್ಭದಲ್ಲಿ ಬಸವಗಿರಿಯಲ್ಲಿ ಮೂರು ದಿನಗಳ ವಚನ ವಿಜಯೋತ್ಸವ ಜರುಗುವುದು. ಗುರವಚನವೇ ಧರ್ಮಗುರು ಎಂಬ ಶ್ರದ್ಧೆಯೊಂದಿಗೆ ಧರ್ಮಗ್ರಂಥಕ್ಕೆ ಪಟ್ಟಕಟ್ಟುವ ಕಾರ್ಯಕ್ರಮ ಇದೇ ವೇದಿಕೆಯಲ್ಲಿ ನಡೆಯುವುದು.

ಚನ್ನಬಸವಣ್ಣನವರ ಸ್ಮರಣೋತ್ಸವವಾದ ಚನ್ನ ಹುಣ್ಣಿಮೆ (ಭಾರತ ಹುಣ್ಣಿಮೆ)ಯಂದು ವಚನ ವಿಜಯೋತ್ಸವ ಆಚರಿಸಲಾಗುವುದು. ಶರಣರು ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಜೀವದ ಹಂಗುದೊರೆದು ಚನ್ನಬಸವಣ್ಣನವರ ನಾಯಕತ್ವದಲ್ಲಿ ಹಿಂಸ್ರಪ್ರಾಣಿಗಳು ಮತ್ತು ರಕ್ತಹೀರುವ ಜಿಗಣೆಗಳಿಂದ ತುಂಬಿದ್ದ ದುರ್ಗಮ ಕಾಡಿನಲ್ಲಿರುವ ಉಳವಿಯ ವರೆಗೆ ಕಷ್ಟಸಹಿಷ್ಣುಗಳಾಗುತ್ತ ಸಾಗಿ ವಚನ ಸಾಹಿತ್ಯವನ್ನು ರಕ್ಷಿಸುವುದರ ಮೂಲಕ ವಿಜಯ ಸಾಧಿಸಿದುದರ ಸವಿನೆನಪಿಗಾಗಿ ವಚನ ವಿಜಯೋತ್ಸವ ಆಚರಿಸುತ್ತ ಗುರುವಚನ ಲಿಂಗಾಯತ ಧರ್ಮಗ್ರಂಥಕ್ಕೆ ಪಟ್ಟ ಕಟ್ಟುವ ಪರಂಪರೆ ಬೆಳೆಯಬೇಕು. ಜ್ಞಾನಕ್ಕೆ ಪಟ್ಟಕಟ್ಟುವ ಈ ಕಾರ್ಯಕ್ರಮವಿದು ಎಂಬುದನ್ನು ಅರಿತು ಮೂಢನಂಬಿಕೆಗಳಿಂದ ಹೊರಬರಬೇಕು.

ಜ್ಞಾನರೂಪದಲ್ಲಿ ಶರಣರ ತಲೆ ಇರುವುದು ವಚನಗಳಲ್ಲಿ. ವಚನಗಳಿಗೆ ಪಟ್ಟ ಕಟ್ಟುವುದೆಂದರೆ ಧರ್ಮಗುರು ಬಸವಣ್ಣ ಮೊದಲು ಮಾಡಿ ಇಡೀ ಶರಣಸಂಕುಲಕ್ಕೆ ಪಟ್ಟ ಕಟ್ಟಿದಂತೆ. ಅಷ್ಟೇ ಅಲ್ಲದೆ ವಚನಜ್ಞಾನಕ್ಕಾಗಿ ನಮ್ಮ ಮನಸ್ಸನ್ನು ತೆರೆದಿಟ್ಟಂತೆ. ವಚನಗಳಿಗೆ ಪಟ್ಟ ಕಟ್ಟುವ ಮೂಲಕ ನಮ್ಮನ್ನೇ ನಾವು ಗೌರವಿಸಿಕೊಂಡಂತೆ. ಇಡೀ ಮಾನವಕುಲವನ್ನೇ ಗೌರವಿಸಿದಂತೆ. ಮಾನವ ಕುಲದೊಂದಿಗೆ ಇಡೀ ಜೀವಸಂಕುಲ, ದೇವರು ಮತ್ತು ನಾವು ಒಂದಾಗಿ ಬದುಕಿನ ಯಾತ್ರೆಯಲ್ಲಿ ನಡೆದಂತೆ.

ನಾಡಿನ ವಿರಕ್ತ ಮುಂತಾದ ಮಠಾಧೀಶರು ಗುರುವಚನ ಧರ್ಮಗ್ರಂಥಕ್ಕೆ ಭಾರಿ ಪ್ರಚಾರ ಕೊಟ್ಟು 'ಲಿಂಗಾಯತ ಧರ್ಮ ಜಾತ್ಯತೀತವಾದ ಸ್ವತಂತ್ರ ಧರ್ಮ' ಎಂಬುದನ್ನು ಸಾರಲೇ ಬೇಕಾಗಿದೆ. ಒಂದುವೇಳೆ ಈ ಕಾರ್ಯ ತುರ್ತಾಗಿ ಆಗದಿದ್ದರೆ ಲಿಂಗಾಯತವು ಜಾತಿವಾದಿ ವೈದಿಕ ಧರ್ಮದ ಒಂದು ಜಾತಿಯಾಗಿ ಉಳಿಯುತ್ತ ಮುಂದಿನ ದಶಕಗಳಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಸಾಮಾಜಿಕ ನ್ಯಾಯದ ಪರುಷಕಟ್ಟೆ

ಬಸವಧರ್ಮವು ಕಾಯಕಜೀವಿಗಳ ಧರ್ಮ, ಸಾಮಾಜಿಕ ನ್ಯಾಯದ ಧರ್ಮ, ಮಾನವ ಹಕ್ಕುಗಳ ಧರ್ಮ, ಸ್ತ್ರೀ-ಪುರುಷ ಸಮಾನತೆಯ ಧರ್ಮ, ಜಾತ್ಯತೀತ ಧರ್ಮ, ದಲಿತರ ಮತ್ತು ಒಟ್ಟಾರೆ ಬಡವರ ಹಕ್ಕುಗಳ ಪ್ರತಿಪಾದನೆ ಮಾಡುವ ಧರ್ಮ, ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ಹೊಡೆದೋಡಿಸುವ ಧರ್ಮ, ಹುಟ್ಟು, ಜ್ಞಾನ, ಸಂಪತ್ತು ಮತ್ತು ಅಧಿಕಾರದ ಕಾರಣದಿಂದ ಬರುವ ಅಹಂಕಾರದಿಂದ ಮುಕ್ತಗೊಳಿಸುವ ಧರ್ಮ, ಸಾಮಾಜಿಕ, ಆರ್ಥಿಕ ಮತ್ತು ಮನುವಾದಿ ಸಂಸ್ಕೃತಿಯ ಸಂಕೋಲೆಗಳಿಂದ ದುಡಿಯುವ ಜನರನ್ನು ವಿಮೋಚನೆಗೊಳಿಸುವ ಧರ್ಮ.

ವಿಶ್ವದ ಪ್ರಥಮ ಸಾಮಾಜಿಕ ನ್ಯಾಯದ ಕಟ್ಟೆಯಾಗಿರುವ ಪರುಷಕಟ್ಟೆಯು ಇಂಥ ಬಸವಧರ್ಮದ ತಳಹದಿಯಾಗಿದೆ.

ಬಸವಣ್ಣನವರು ಪ್ರತಿದಿನ ದೊರೆ ಬಿಜ್ಜಳನ ಆಸ್ಥಾನಕ್ಕೆ ಸರಿಯಾದ ಸಮಯಕ್ಕೆ ಹೋಗುವ ಒಂದು ಗಂಟೆ ಮೊದಲು ದಾರಿ ಮಧ್ಯದ ಪರುಷಕಟ್ಟೆಯ ಮೇಲೆ ಬಂದು ಕುಳಿತು ಜನರ ಅಹವಾಲುಗಳನ್ನು ಕೇಳುತ್ತಿದ್ದರು. ಅವರ ಸಮಸ್ಯೆಗಳ ಪರಿಹಾರಕ್ಕಾಗಿ ದೊರೆ ಬಿಜ್ಜಳನ ಜೊತೆ ಚರ್ಚಿಸಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಬಸವಣ್ಣನವರು ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪರುಷಮಣಿ ಎಂದು ಜನ ಹರ್ಷೋದ್ಗಾರ ತೆಗೆದದ್ದರಿಂದಲೇ ಈ ಸಾಮಾಜಿಕ ನ್ಯಾಯದಕಟ್ಟೆಗೆ "ಪರುಷಕಟ್ಟೆ" ಎಂದು ಕರೆಯಲಾಯಿತು. ಬಸವಣ್ಣನವರು ಜನರ ಆಶಯಗಳಿಗೆ ಸ್ಪಂದಿಸಿದ್ದರಿಂದಲೇ ಕಲ್ಯಾಣ ಸಮೃದ್ಧ ನಾಡಾಯಿತು."ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ" ಎಂದು ಹೇಳುವಷ್ಟು ಸ್ವಾವಲಂಬನೆ ಸಾಧಿಸಿತು. ಊರ ಮುಂದೆ ಹಾಲ ಹಳ್ಳ ಹರಿಯುವಂತೆ ಅಭಿವೃದ್ಧಿಯ ಪಥದಲ್ಲಿ ಸಾಗಿತು. ಮಹೋನ್ನತ ವ್ಯಕ್ತಿಗಳು ತಮ್ಮಅರಿವಿನ ಬೀಜಗಳನ್ನು ಜನಮನದಲ್ಲಿ ಬಿತ್ತುತ್ತಾರೆ. ಆಗ ಅವು ಸಾಮಾಜಿಕ ಪರಿವರ್ತನೆಗೆ ಕಾರಣವಾಗುತ್ತವೆ ಎಂಬುದಕ್ಕೆ ಬಸವಣ್ಣನವರು ಸಾಕ್ಷಿಯಾಗಿದ್ದಾರೆ.

ಅವೈದಿಕ ಶಿವಸಂಸ್ಕೃತಿಯ ಗಣವ್ಯವಸ್ಥೆ, ಮಹಾವೀರನ ಅಹಿಂಸಾಭಾವ, ಭಗವಾನ ಬುದ್ಧನ ಸಮೂಹ ಚಿಂತನ ಕ್ರಮ, ಪ್ಲೇಟೋನ ಚರ್ಚಾ ಪದ್ಧತಿ, ಉಪನಿಷತ್ತಿನ

ಉದಾತ್ತಭಾವ, ಏಸುಕ್ರಿಸ್ತನ ಪ್ರೇಮಭಾವ, ಪೈಗಂಬರರ ಸಾಮಾಜಿಕಪ್ರಜ್ಞೆ ಮತ್ತು 10ನೇ ಶತಮಾನದ ಮಹಾಕವಿ ಪಂಪನ 'ಮನುಷ್ಯಜಾತಿತಾನೊಂದೆ ವಲಂ' ಎಂಬ ನಿಲವು ಬಸವಣ್ಣನವರ ವ್ಯಕ್ತಿತ್ವದಲ್ಲಿ ಮೇಳವಿಸಿದ್ದರಿಂದಲೇ ಅವರಿಗೆ ಮಹೋನ್ನತವಾದುದನ್ನು ಸಾಧಿಸಲು ಸಾಧ್ಯವಾಯಿತು. ಇಂಥ ವಿಶ್ವಗುರುವನ್ನು ಪಡೆದ ನಾವೇ ಧನ್ಯರು. ಜಗಜ್ಯೋತಿ ಬಸವಣ್ಣನವರು ಮಾನವಕುಲದ ಸಾಧನೆಗಳ ಮೂಲಮಂತ್ರವಾಗಿದ್ದಾರೆ. ತಮ್ಮ ಜೀವಿತಾವಧಿಯಲ್ಲಿಯೇ ಅವುಗಳ ಪ್ರಯೋಗ ನಡೆಸಿ ಯಶಸ್ಸನ್ನು ಸಾಧಿಸಿದ್ದಾರೆ. ಕಾಯಕ ಜೀವಿಗಳನ್ನು ವಿಶ್ವದಲ್ಲಿ ಮೊದಲ ಬಾರಿಗೆ ಸಂಘಟಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಈ ಕಾಯಕಜೀವಿಗಳಲ್ಲಿನ ಜಾತಿ ಪ್ರಜ್ಞೆಯನ್ನು ಕಳೆದು ಅವರನ್ನೆಲ್ಲ ದುಡಿಯುವ ವರ್ಗವಾಗಿ ಕಂಡ ಮೊದಲ ಹೋರಾಟಗಾರರಾಗಿ ಬಸವಣ್ಣನವರು ಎದ್ದು ಕಾಣುತ್ತಾರೆ.

'ಶರಣಸಂಕುಲ' ಎಂಬ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದವಿಲ್ಲದ ಸಮಾಜವನ್ನು ಮೊದಲ ಬಾರಿಗೆ ನಿರ್ಮಿಸಿದ ಕೀರ್ತಿಯನ್ನು ಅವರು ಹೊಂದಿದ್ದಾರೆ. ಈ ನವಸಮಾಜದ ಸದಸ್ಯರಾಗಿದ್ದ ಶರಣರು ಕಾಯಕಜೀವಿಗಳಾಗಿದ್ದರು. ತಮ್ಮ ಕಾಯಕದಿಂದ ಬಂದದ್ದನ್ನು 'ದೇವರ ಪ್ರಸಾದ' ಎಂದು ಸ್ವೀಕರಿಸುತ್ತಿದ್ದರು. ಸ್ವೀಕರಿಸಿದ್ದನ್ನು ಹಿತಮಿತವಾಗಿ ಬಳಸುತ್ತ ಉಳಿಸಿ, ಉಳಿಸಿ ಶರಣಸಂಕುಲದ ಶಿವನಿಧಿ ಎಂಬ ಸಾಮಾಜಿಕ ನಿಧಿಗೆ ದಾಸೋಹಂಭಾವದಿಂದ ಅರ್ಪಿಸುತ್ತಿದ್ದರು. ಹೀಗೆ ಬಸವಣ್ಣನವರು ಬಡತನ ಮತ್ತು ಶ್ರೀಮಂತಿಕೆ ಇಲ್ಲದ ವಿನೂತನ ಸರ್ವಸಮತ್ವದ ಸಮಾಜದ ಸೃಷ್ಟಿ ಮಾಡಿದ್ದರು. ವಸ್ತುಮೋಹ ತಿರಸ್ಕರಿಸಿ ಬಡತನವನ್ನು ಸ್ವೀಕರಿಸಿದವರ ಶ್ರೀಮಂತ ಸಮಾಜವಾಗಿತ್ತು ಈ ಶರಣಸಂಕುಲ.

ನಿಸರ್ಗ ನಿಯಮವಾಗಿರುವ ಕಾಯಕದ ಪ್ರಜ್ಞೆ, ನಮ್ಮ ಶರೀರ ಮತ್ತು ಗಳಿಕೆ ಮೊದಲು ಮಾಡಿ ಇಡೀ ವಿಶ್ವವು ಏಕದೇವನ ಪ್ರಸಾದವೆಂಬ ಅರಿವು ಮತ್ತು ಬಂದದ್ದನ್ನು ಸಮಾಜಕ್ಕೆ ಹಂಚಬೇಕೆಂಬ ದಾಸೋಹಂಭಾವದಿಂದ ಕೂಡಿದ ನವಮಾನವನನ್ನು ಸೃಷ್ಟಿಸುವುದು ಬಸವಣ್ಣನವರ ಉದ್ದೇಶವಾಗಿತ್ತು. ಈ ಉದ್ದೇಶಕ್ಕಾಗಿಯೇ ಅವರು ಸಾಮಾಜಿಕ ನ್ಯಾಯದ ಪರುಷಕಟ್ಟೆ, ಇಷ್ಟಲಿಂಗಯೋಗದ ಮೂಲಕ ತಮ್ಮೊಳಗಿನ ಮಹತ್ವವನ್ನು ಅರಿತುಕೊಳ್ಳುವ ಸ್ಥಾನವಾದ ಅರಿವಿನ ಮನೆ, ಸರ್ವಜನರ ಪ್ರಸಾದ ನಿಲಯವಾದ ದಾಸೋಹಮನೆ, ವಿವಿಧ ಕಾಯಕಜೀವಿಗಳಾದ 770 ಪ್ರತಿನಿಧಿಗಳನ್ನು ಅಮರಗಣಂಗಳೆಂದು ನೇಮಿಸಿ ವಿಶ್ವದ ಮೊದಲ ಸಮಾಜೋಧಾರ್ಮಿಕ ಸಂಸತ್ ಎನಿಸಿದ ಅನುಭವ ಮಂಟಪ, ಮಾನವಹಕ್ಕುಗಳಿಂದ ಕೂಡಿದ ವಿಶ್ವದ ಮೊದಲ ಸಂವಿಧಾನ ಎಂದು ಕರೆಯಿಸಿಕೊಳ್ಳುವ ವಚನಸಂವಿಧಾನ, ದಲಿತರು, ಮಹಿಳೆಯರು, ವಿವಿಧ ಕಾಯಕಜೀವಿಗಳು, ವಯಸ್ಕರು ಮತ್ತು ಹೊರನಾಡುಗಳಿಂದ ಬಂದವರಿಗಾಗಿ ವಯಸ್ಕರ ಶಿಕ್ಷಣವ್ಯವಸ್ಥೆ ಮುಂತಾದವುಗಳ ಹರಿಕಾರರಾದ ಬಸವಣ್ಣನವರ ಚಿಂತನೆಗಳನ್ನು ವಿಶ್ವಕ್ಕೆ ಪರಿಚಯಿಸುವ ಮಹಾ ಉದ್ದೇಶವನ್ನು ನಾವಿಂದು ಹೊಂದಲೇ ಬೇಕಾಗಿದೆ. 21ನೇ ಶತಮಾನವನ್ನು ಬಸವಣ್ಣನವರ ಶತಮಾನವನ್ನಾಗಿಸಬೇಕಾಗಿದೆ.

ಮೇಲೆ ತಿಳಿಸಿದ ಹಾಗೆ ಬಸವಣ್ಣನವರು ಮಾಡಿದ ಮಾನವಘನತೆಯ ಎಲ್ಲ ಪ್ರಯೋಗಗಳು ಜಗತ್ತಿನ ಮೂಲೆ ಮೂಲೆಯಲ್ಲಿ ನಡೆಯಬೇಕಿದೆ. ಯುದ್ಧ, ಹಿಂಸೆ ಮತ್ತು ಶೋಷಣೆಗಳಿಲ್ಲದೆ ಸರ್ವಸಮತ್ವದಿಂದ ಕೂಡಿದ ಹೊಸ ಜಗತ್ತಿನ ಸೃಷ್ಟಿಯಾಗಬೇಕೆಂಬ ಬೃಹತ್ ಆಶಯದೊಂದಿಗೆ ನಾವೆಲ್ಲ ಕ್ರಿಯಾಶೀಲವಾಗಬೇಕಿದೆ.

ಬಸವಾದಿ ಶರಣರು ಸಮಗಾರ ಹರಳಯ್ಯನವರ ಮಗ ಶೀಲವಂತ ಹಾಗೂ ಮಧುವರಸರ ಮಗಳು ಲಾವಣ್ಯಳ ಮದುವೆ ಮಾಡಿಸುವುದರ ಮೂಲಕ ಜಾತಿ ನಿರ್ಮೂಲನಕ್ಕೆ ನಾಂದಿಹಾಡಿದರು. ಈ ಮದುವೆ ಧರ್ಮಶಾಸ್ತ್ರಕ್ಕೆ ವಿರುದ್ಧ ಎಂದು ಸಿಡಿದೆದ್ದ ಸನಾತನವಾದಿಗಳು ರಾಜ ಬಿಜ್ಜಳನ ಮೇಲೆ ಒತ್ತಡ ಹೇರಿ ಶರಣರ ಮೇಲೆ ದಾಳಿ ಮಾಡಿಸಿದರು. ಈ ದಾಳಿಯ ಸಂದರ್ಭದಲ್ಲಿ ಸಹಸ್ರಾರು ಶರಣರು ಹುತಾತ್ಮರಾದರು ಮತ್ತು ಬೃಹತ್ ಪ್ರಮಾಣದಲ್ಲಿ ವಚನಕಟ್ಟುಗಳು ಬೆಂಕಿಗೆ ಆಹುತಿಯಾದವು.

ಆಸ್ತಿಪಾಸ್ತಿಯನ್ನು ಕಡೆಗಣಿಸಿ, ಕುಟುಂಬದ ಸದಸ್ಯರಿಂದ ಬೇರ್ಪಟ್ಟು ಚೆಲ್ಲಾಪಿಲ್ಲಿಯಾದ ಶರಣರು ಜೀವದ ಹಂಗು ತೊರೆದು ವಚನ ಸಂರಕ್ಷಣೆಗಾಗಿ ದೃಢಸಂಕಲ್ಪ ಮಾಡಿದರು. ಮುಂಬರುವ ಜನಸಮುದಾಯ ಆನಂದಮಯವಾದ ಸುಂದರ ಸಮಾಜ ನಿರ್ಮಾಣ ಮಾಡಲು ಸಹಾಯಕವಾಗಲೆಂಬ ಮಹದಾಸೆಯೊಂದಿಗೆ ವಚನಗಳ ಕಟ್ಟುಗಳನ್ನು ಹೊತ್ತು ದುರ್ಗಮ ತಾಣವಾದ ಉಳವಿಯ ಕಡೆಗೆ ಸಾಗಿದರು. ಮಾರ್ಗ ಮಧ್ಯೆ ಅನೇಕ ಶರಣ ಶರಣೆಯರು ಹುತಾತ್ಮರಾದರು. ಹವಾಮಾನದ ವೈಪರೀತ್ಯದಿಂದಾಗಿ ಉಳವಿ ತಲುಪಿದವರಲ್ಲಿ ಕೂಡ ಅನೇಕರು ಲಿಂಗೈಕ್ಯರಾದರು. ಇಷ್ಟೊಂದು ಕಷ್ಟಕಾರ್ಪಣ್ಯಗಳಿಂದ ಜನಹಿತ ಸಾಹಿತ್ಯವನ್ನು ರಕ್ಷಿಸಿದ ಇನ್ನೊಂದು ಉದಾಹರಣೆ ಜಗತ್ತಿನಲ್ಲಿ ಇಲ್ಲ.

ವಚನ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವಿರಳ ಜ್ಞಾನಿ ಚನ್ನಬಸವಣ್ಣನವರು ವಚನ ಸಂರಕ್ಷಣೆಯ ನೇತೃತ್ವ ವಹಿಸಿ ಕೊನೆಯವರೆಗೂ ಜೀವಸವೆಸಿ ಲಿಂಗೈಕ್ಯರಾದ ದಿನವನ್ನು ಭಾರತ ಹುಣ್ಣಿಮೆ ಸಂದರ್ಭದಲ್ಲಿ ಆಚರಿಸಲಾಗುತಿದೆ. ಈ ಹಿನ್ನೆಲೆಯಲ್ಲಿಯೇ ಶರಣ ಸಂಸ್ಕೃತಿಯವರು ಈ ಹುಣ್ಣಿಮೆಯನ್ನು ಚನ್ನಹುಣ್ಣಿಮೆ ಎಂದು ಆಚರಿಸುತ್ತಾರೆ. ಶರಣರು ಹುತಾತ್ಮರಾಗಿ ವಚನ ಸಾಹಿತ್ಯವನ್ನು ಉಳಿಸಿದರು. ಈ ವಚನ ಸಾಹಿತ್ಯ ಇಂದಿಗೂ ಜನಸಮುದಾಯದ ವಿಜಯದ ಆಶಯಗಳನ್ನು ಹೊತ್ತು ನಿಂತಿದೆ. ಈ ಕಾರಣದಿಂದಲೇ ಬೀದರಿನ ಬಸವ ಸೇವಾ ಪ್ರತಿಷ್ಠಾನದವರು ಈ ಚನ್ನಹುಣ್ಣಿಮೆಯನ್ನು ವಚನ ವಿಜಯೋತ್ಸವದ ದಿನವಾಗಿ ಆಚರಿಸುತ್ತಾರೆ. ವಚನಗಳು ಇಡೀ ಮಾನವಕುಲದ ಸರ್ವಸ್ವವಾಗಿರುವುದರಿಂದ ಗುರುವಚನಕ್ಕೇ ಪಟ್ಟ ಕಟ್ಟುತ್ತಾರೆ. ವಚನ ವಿಜಯೋತ್ಸವವು ದುಡಿಯುವ ಜನರ, ಬಡವರ, ಅಸಹಾಯಕರ, ಮಹಿಳೆಯರ, ಶರಣರ ತತ್ತ್ವಗಳಲ್ಲಿ ನಂಬಿಕೆ ಇಟ್ಟವರ ಮತ್ತು ನೋವುಂಡ ಜಾತಿಗಳ ವಿಜಯೋತ್ಸವವಾಗಿದೆ.

ವಚನಸಂವಿಧಾನ ಶರಣಸಂಕುಲದ ಆತ್ಮನಾದ. ಸರ್ವಸಮತ್ವವನ್ನು ಸಾರುವ ಇಷ್ಟಲಿಂಗ ತತ್ತ್ವದ ಆಗರ. ನಮ್ಮ ಅರಿವನ್ನು ವಿಸ್ತರಿಸುತ್ತ ಅನುಭಾವದ ಬೆಳಕನ್ನು ನೀಡುವ ಜ್ಯೋತಿರ್ಲಿಂಗ. ನಮ್ಮನ್ನು ನಾವು ಅರಿತುಕೊಳ್ಳಲು ಇರುವ ಜ್ಞಾನಗನ್ನಡಿ. ಜೀವಿತಾವಧಿಯಲ್ಲೇ ಮುಕ್ತಿ ಸಾಧಿಸುವ ಪಥದಲ್ಲಿ ಮುನ್ನಡೆಸುವ ದೇವಸ್ವರೂಪ. ಸಕಲಜೀವಾತ್ಮರಿಗೆ ಲೇಸನೇ ಬಯಸುವಂಥ ಪ್ರಜ್ಞೆಯ ಪ್ರತೀಕ. ಮಾನವೀಯತೆಯ ಸಾಗರ. ನಮ್ಮೊಳಗಿನ ದೇವರಜೊತೆ ಮಾತನಾಡಲು ಕಲಿಸುವ ಗುರುದೇವ. 'ಅರಿವೇಗುರು; ಗುರುವೇದೇವರು' ಎಂಬ ಸತ್ಯದ ಸಾಕಾರರೂಪ. 'ಒಬ್ಬನೇದೇವರು; ಒಂದೇ ವಿಶ್ವ; ಒಂದೇ ಮಾನವಕುಲ' ಎಂದು ಸಾರುವ ಧೀರವಾಣಿ. ವಚನವೇ ಉಸಿರಾಗಿಸಿಕೊಂಡವರ ಕಾಮಧೇನು, ಕಲ್ಪವೃಕ್ಷ ಮತ್ತು ಪರುಷಮಣಿ. ಬಸವಾದಿ ಪ್ರಮಥರ ಅನುಭಾವ ಮತ್ತು ಇಷ್ಟಲಿಂಗದ ಅರಿವಿನ ಭಂಡಾರವೇ ವಚನ. ನಡೆ ನುಡಿ ಸಿದ್ಧಾಂತವನ್ನು ಮೈಗೂಡಿಸಿಕೊಳ್ಳುವುದಕ್ಕಾಗಿ ವಚನಪಠಣ ಮಾಡುವವರೇ ವಚನಭಂಡಾರಿಗಳು. ಸರ್ವಜೀವದಯಾಭಾವವೇ ಈ ಭಂಡಾರದ ಬೀಗದ ಕೈ. ಗುರುವಚನಕ್ಕೆ ಪಟ್ಟಕಟ್ಟುವುದೆಂದರೆ, ನಮ್ಮೊಳಗಿನ ಘನವು ಸಕಲಜೀವಾತ್ಮರೊಳಗೆ ಇದೆ ಎಂಬುದನ್ನು ಲೋಕಕ್ಕೆ ತಿಳಿಸುವುದರ ಮೂಲಕ ಆ ಘನಕ್ಕೇ ಪಟ್ಟಕಟ್ಟಿದಂತೆ.

ಈ ಲೋಕ ಬದುಕಲೆಂದು ಬಯಸಿ ಹುತಾತ್ಮರಾದವರು ನಮ್ಮ ಶರಣರು. ತಮ್ಮ ಜೀವವನ್ನೇ ಕೊಟ್ಟು ವಚನಗಳು ಸದಾಜೀವಂತವಾಗಿರುವಂತೆ ಮಾಡಿದವರು ನಮ್ಮ ಶರಣರು. ಮುಂದಿನ ಜನಾಂಗ ವಚನಗಳ ಆಶಯವನ್ನು ಈಡೇರಿಸುತ್ತದೆ ಎಂಬ ನಂಬಿಕೆಯೊಂದಿಗೆ ಲಿಂಗೈಕ್ಯರಾದವರು. ಬಸವ ಸೇವಾ ಪ್ರತಿಷ್ಠಾನದವರು ನಿರ್ಮಿಸಬೇಕೆಂದಿರುವ ಪರುಷಕಟ್ಟೆ ವೈಭವದ ಸಂಕೇತವಾಗಬಾರದು. ಶರಣರ ತ್ಯಾಗ ಮತ್ತು ಬಲಿದಾನಗಳನ್ನು ನಮ್ಮ ಪೀಳಿಗೆಗೆ ನಿರಂತರವಾಗಿ ಜ್ಞಾಪಿಸುವುದರ ಸಂಕೇತವಾಗಬೇಕು.

○

ಲೋಹಿಯಾ ಪ್ರಕಾಶನ

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1.	ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15
*2.	ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15
*3.	ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15
*4.	ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30
*5.	ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60
*6.	ಅನಾಥ ಪಕ್ಷಿಯ ಕಲರವ	ವೀರಭದ್ರ	125
*7.	ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45
*8.	ಹಣದಿ	ಶಿವಕುಮಾರ ನಾಗವಾರ	60
*9.	ಪಟ್ಟಾ	ಚಿತ್ರಶೇಖರ ಕಂಠಿ	45
*10.	ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45
*11.	ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50
*12.	ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75
*13.	ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30
*14.	ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30
*15.	ತಪ್ಪಂಡ	ಡಾ. ಬಸವರಾಜ ಸಾದರ	45
*16.	ಹುಡುಕಾಟ	ಅಬ್ಬಾಸ್ ಮೇಲಿನಮನಿ	60
*17.	ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40
*18.	ದೇಣಿಯಾ	ಕೃಷ್ಣ ನಾಯಕ್	50
*19.	ಮೀಯುವ ಆಟ	ಡಾ. ಎಚ್. ನಾಗವೇಣಿ	60
*20.	ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35
21.	ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	40
*22.	ಸದ್ಯಕಿದು ಹುಚ್ಚುರ ಸಂತಿ	ಹಸನ್ ನಯೀಂ ಸುರಕೋಡ	50
*23.	ಮೋಹನ ದಾಸ	ಆರ್. ಪಿ. ಹೆಗಡೆ	50
*24.	ಬೇರುಗಳು	ವೆಂಕಟೇಶ ಮಾಚಕನೂರ	50
25.	ತೂತು ಬೊಟ್ಟು	ಕಲಿಗಣನಾಥ ಗುಡದೂರು	60
26.	ಕಣಜ	ಡಾ. ಬೆಸಗರಹಳ್ಳಿ ರಾಮಣ್ಣ ಸಮಗ್ರ ಕಥನ ಸಾಹಿತ್ಯ	450
27.	ಸಮಗ್ರ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	150

ಕಾವ್ಯ

*28.	ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60
*29.	ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30
30.	ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75
*31.	ತಮಾಷಾ	ವಿಕ್ರಮ ವಿಸಾಜಿ	45
*32.	ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45
*33.	ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75
*34.	ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35
*35.	ಗಾಂಧೀಗಿಡ	ಸತೀಶ್ ಕುಲಕರ್ಣಿ	35
*36.	ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35
*37.	ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50
*38.	ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75
*39.	ಅವ್ವ	ಡಾ. ಸರಜೂ ಕಾಟ್ಕರ್	60
40.	ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35

*41.	ಸುನೀತ ಸಂಪದ	ಚೆನ್ನವೀರ ಕಣವಿ	100
*42.	ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50
*43.	ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30
44.	ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75
*45.	ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35
*46.	ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40
*47.	ಬಾಗಿಲಾಚೆಯ ಮೌನ	ರೂಪ ಹಾಸನ	50
48.	ಕಂಪನಿ ಸವಾಲ್	ಸತೀಶ ಕುಲಕರ್ಣಿ	50
*49.	ನೂರು ಗೋರಿಯ ದೀಪ	ಡಾ. ವಿನಯಾ	35
*50.	ಉರಿವ ಒಲೆಗಳ ಮುಂದೆ	ಆರ್. ನಿರ್ಮಲಾ	25
*51.	ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35
*52.	ದರುಶನ	ಸವಿತಾ ನಾಗಭೂಷಣ	40
53.	ಲೋಹದ ಕಣ್ಣು	ಡಾ. ಎಚ್. ಎಲ್. ಪುಷ್ಪ	50
*54.	ಪುಟಾಣಿ ಕೆಂಪು ಶೂ	ಛಾಯಾ ಭಗವತಿ	30
55.	ಕಡಲಿಗೆಷ್ಟೊಂದು ಬಾಗಿಲು	ರೂಪ ಹಾಸನ	50
56.	ರಜಿಯಾ ಅವರ ಕವಿತೆಗಳು	ಡಿ. ಬಿ. ರಜಿಯಾ	50
57.	ವರನಂದಿ ಪ್ರತಿಮೆ	ಜ್ಯೋತಿ ಗುರುಪ್ರಸಾದ್	50
58.	ಬಯಲು ಬಾನಿನಲ್ಲಿ	ಆಚಾರ್ಯ ರೂಪಚಂದ್ರ ಅನು : ಡಾ. ಪಂಚಾಕ್ಷರಿ ಹಿರೇಮಠ	40
59.	ಸತೀಶ್ ಸಮಗ್ರ ಕವಿತೆಗಳು	ಸತೀಶ್ ಕುಲಕರ್ಣಿ	200

ಕಾದಂಬರಿ

*60.	ಮಾಂಡೋವಿ	ರವಿ ಬೆಳಗೆರೆ	60
*61.	ಶಾಮಣ್ಣ	ಕುಂ. ವೀರಭದ್ರಪ್ಪ	175
*62.	ಗಾಂಧಿ ಬಂದ	ಎಚ್. ನಾಗವೇಣಿ	175
63.	ಬದುಕು	ಗೀತಾ ನಾಗಭೂಷಣ	216
64.	ಹುತ್ತ	ಬಾಳಾಸಾಹೇಬ ಲೋಕಾಪುರ	100
*65.	ಲೋಟಸ್ ಪಾಂಡ್	ತಾರಾಭಟ್	50
*66.	ಚಾಕ್ರಿ ನಿಂಬಜ್ಜ	ಬ್ರಹ್ಮದೇವ್ ಹದಳಗಿ	30
*67.	ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30/
*68.	ಕೆರೂರುನಾಮಾ	ಚಂದ್ರಕಾಂತ ಕುಸನೂರ	60
*69.	ಅತಂತ್ರ	ಗುರುರಾಜ ಮಾರ್ಪಳ್ಳಿ	50
*70.	ಜನ್ನತ್ ಮೊಹಲ್ಲಾ	ಅಬ್ಬಾಸ್ ಮೇಲಿನಮನಿ	100
71.	ಬಿಡುಗಡೆ	ಜಿ. ಬಾಲಚಂದ್ರನ್ ಅನು : ಕೆ.ಕೆ. ನಾಯರ್	350
72.	ಕರ್ಫ್ಯೂ	ಮೂಲ: ವಿಭೂತಿ ನಾರಾಯಣರಾಯ್ ಅನು: ಹಸನ್ ನಯೀಂ ಸುರಕೋಡ	50

ಪ್ರವಾಸ ಕಥನ

73.	ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	60
*74.	ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60
*75.	ನಾ ಕಂಡ ಬ್ರಝಿಲ್	ಡಾ. ಸಿ. ನಾಗಭೂಷಣ	60
76.	ಥೇಮ್ಸ್‌ದಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	50
77.	ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60
*78.	ಕುಲು ಕಣಿವೆಯಲ್ಲಿ	ಜಿ.ಪಿ. ಬಸವರಾಜು	60
79.	ಗಾಂಧಿ-ಕೃಷ್ಣರ ನಾಡಿನಲ್ಲಿ	ವೆಂಕಟೇಶ ಮಾಚಕನೂರ	75
80.	ಮರಳುಗಾಡಿನ ಬೆಡಗು	ವೆಂಕಟೇಶ ಮಾಚಕನೂರ	75

ವೈಚಾರಿಕ ಮತ್ತು ಇತರೆ

81.	ಲೋಹಿಯಾ	ಹಸನ್‌ನಯೀಂ ಸುರಕೋಡ	120
*82.	ಸರಳಸಿದ್ಧರಾಮ ಚರಿತೆ	ಡಾ. ಎಲ್. ಬಸವರಾಜು	60
*83.	ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60
*84.	ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90
*85.	ಅಮೃತ ಮತ್ತು ವಿಷ	ರಂಜಾನ್ ದರ್ಗಾ	75
*86.	ಶತಮಾನ	ಮೊಗಳ್ಳಿ ಗಣೇಶ	50
*87.	ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎಸ್. ಜಗದೀಶ ಕೊಪ್ಪ	25
*88.	ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12
*89.	ಬುದ್ಧ ಚರಿತೆ	ಡಾ. ಎಲ್. ಬಸವರಾಜು	180
*90.	ಸೌಂದರನಂದ	ಡಾ. ಎಲ್. ಬಸವರಾಜು	150
*91.	ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100
*92.	ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ವೀರ್ ಸಿಂಗ್	25
*93.	ಅಲ್ಲಮ್ಮನ ವಚನ ಚಂದ್ರಿಕೆ	ಡಾ. ಎಲ್. ಬಸವರಾಜು	250
*94.	ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50
95.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯ ಪೋಳ	75
*96.	ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100
*97.	ಬಗೆ	ಡಾ. ಸಬಿಹಾ ಭೂಮಿಗೌಡ	60
*98.	ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300
*99.	ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125
100.	ಬಸವಪ್ರಜ್ಞೆ	ರಂಜಾನ್ ದರ್ಗಾ	15
101.	ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60
*102.	ಗುಣಗೌರವ	ಜಿ. ಎಚ್. ನಾಯಕ	75
*103.	ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75
*104.	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100
*105.	ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60
*106.	ಸಾಕ್ಷಿ	ಡಾ. ಸರಜೂ ಕಾಟ್ಕರ್	50
107.	ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30
*108.	ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45
*109.	ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50
*110.	ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100
*111.	ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75
*112.	ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100
*113.	ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125
*114.	ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	150
115.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15
*116.	ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20
*117.	ನಮ್ಮೊಡನೆ ನಮ್ಮನುಡಿ	ಡಾ. ಕೆ. ವಿ. ನಾರಾಯಣ	50
*118.	ಅನೇಕ	ಡಿ. ಎಸ್. ನಾಗಭೂಷಣ	125
119.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30
*120.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	100
*121.	ಅಯೋಧ್ಯೆ-ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25
*122.	ಮನೆಯೊಡೆಯನಿದ್ದಾನೋ	ಎಸ್.ಜಿ. ಮೈಸೂರು ಮಠ	150
123.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25
124.	ಅರಿವಿನ ನಡೆ	ಡಾ. ಕವಿತಾ ರೈ	50

125.	ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40
126.	ಕರ್ನಾಟಕ ಏಕೀಕರಣ	ಕೋ. ಚೆನ್ನಬಸಪ್ಪ	60
*127.	ಮರಳಿ ಬರಲಿದೆ ಸಮಾಜವಾದ	ಡಿ. ಎಸ್. ನಾಗಭೂಷಣ	60
128.	ಬಸವ ಧರ್ಮದ ವಿಶ್ವ ಸಂದೇಶ	ರಂಜಾನ್ ದರ್ಗಾ	15
*129.	ರೈತ ಭಾರತ : ಅವಸಾನದ ಅಂಚಿನಲ್ಲಿ	ಡಿ.ಎಸ್. ನಾಗಭೂಷಣ	20
*130.	ಆ ಗಣರಾಜ್ಯ – ಈ ಕರ್ನಾಟಕ	ಡಿ.ಎಸ್. ನಾಗಭೂಷಣ	60
131.	ಪಡುವಣದ ಕಡಲು	ಸುನಂದಾ ಪ್ರಕಾಶ ಕಡಮೆ	45
132.	ಇಸ್ಲಾಂ : ಹುಟ್ಟು ಮತ್ತು ವಿಕಾಸ	ಅನು: ಹಸನ್ ನಯೀಂ ಸುರಕೋಡ	125
133.	ವಸಿಷ್ಠರು ಮತ್ತು ವಾಲ್ಮೀಕಿಯರು	ಡಿ.ಎಸ್. ನಾಗಭೂಷಣ	150
134.	ಕೋಮು ಗಲಭೆಗಳು ಹಾಗೂ ಭಾರತದ ಪೋಲೀಸರು	ಅನು: ಹಸನ್ ನಯೀಂ ಸುರಕೋಡ	60
135.	ರಂಗಕೋಗಿಲೆ ಜುಬೇದಾಬಾಯಿ	ವೀಣಾ ಕುಲಹರ್ಣಿ	45
*136.	ಪ್ರತಿಚಿಂತನೆ	ಹಸನ್ ನಯೀಂ ಸುರಕೋಡ	150
137.	ಇಲ್ಲದ ತೀರದಲ್ಲಿ	ಅರವಿಂದ ಚೊಕ್ಕಾಡಿ	60
138.	ಕರ್ಪೂರಿ ಠಾಕೂರ್ ಹಾಗೂ ಸಮಾಜವಾದ	ಹಸನ್ ನಯೀಂ ಸುರಕೋಡ	150
*139.	ಮೂರನೆಯ ಇರವು	ಅರವಿಂದ ಚೊಕ್ಕಾಡಿ	40
*140.	ರಾಜಕೀಯದ ಮಧ್ಯೆ ಬಿಡುವು	ಎಂ.ಪಿ. ಪ್ರಕಾಶ್	100
*141.	ಕೌದಿ ಕಂಬಳಿ	ವೆಂಕಟೇಶ ಮಾಚಕನೂರ	50
*142.	ನಾನು ಪಾಟೀಲ ಪುಟ್ಟಪ್ಪ	ಡಾ. ಸರಜೂ ಕಾಟ್ಕರ್	200
143.	ಬೆಳಗು (ನಾಟಕ)	ಡಾ. ಬಸವಪ್ರಭು ಪಾಟೀಲ ಬೆಟ್ಟದೂರು	40
144.	ಎರಡು ಕಿರು ನಾಟಕಗಳು	ಎಸ್. ಮಾಲತಿ	25
145.	ಹೊಸ ದಿಕ್ಕು	ಎಸ್. ಮಾಲತಿ	75
146.	ನೀಲಗಂಗಯ್ಯ ಪೂಜಾರ್	ಬಿ. ಪೀರ್‌ಬಾಷ	60
147.	ಲೋಹಿಯಾ : ವ್ಯಕ್ತಿ-ವಿಚಾರ-ವಿಮರ್ಶೆ	ಸಂ. : ಡಿ.ಎಸ್. ನಾಗಭೂಷಣ	150
148.	ನೆನಪುಗಳು : ಚಂಪಾ ಲಿಮಯೆ	ಅನು: ಡಾ. ಸರಜೂ ಕಾಟ್ಕರ್, ಪ್ರೊ. ಎ.ಬಿ. ಘಾಟಗೆ	60
149.	ಆತ್ಮಕಥೆ : ಮಧುಲಿಮಯೆ	ಅನು : ಡಾ. ಸರಜೂ ಕಾಟ್ಕರ್	180
150.	ಭಾರತದಲ್ಲಿ ಕೋಮುದ್ವೇಷ	ಡಾ. ಕೋ. ಚೆನ್ನಬಸಪ್ಪ	100
151.	ನಡೆ ನುಡಿ ಸಿದ್ಧಾಂತ	ರಂಜಾನ್ ದರ್ಗಾ	25
152.	ಒಲವು ನಮ್ಮ ಬದುಕು	ಸುದೇಶ ದೊಡ್ಡಪಾಳ್ಯ	50
153.	ಸತ್ಯದ ಹುಡುಕಾಟ	ನಿರೂಪಣೆ : ಎಂ.ಕೆ. ವಿರೂಪಾಕ್ಷಪ್ಪ	180
154.	ಹೂ ಮನಸ್ಸಿನ ಹೋರಾಟಗಾರ ಹಾಗೂ ಇತರ ಲೇಖನಗಳು	ಸವಿತಾ ನಾಗಭೂಷಣ	125
155.	ಅರ್ಥನೀತಿ	ಡಾ. ಹ. ಸೋಮಶೇಖರ	75
156.	ಇವರು ನಮ್ಮವರು	ನಾಡೋಜ ಡಾ. ಪಾಟೀಲ ಪುಟ್ಟಪ್ಪ	60
157.	ಸೌಹಾರ್ದ ಸೌರಭ	ರಂಜಾನ್ ದರ್ಗಾ	50
158.	ನಾವು ನಮ್ಮ ಜನರು	ನಾಡೋಜ ಡಾ. ಪಾಟೀಲ ಪುಟ್ಟಪ್ಪ	60
159.	ಕೆಂಡಸಂಪಿಗೆ ನೆನಪು	ಹೇಮಾ ವೆಂಕಟ್	50
160.	ಜೋಳ ಜೋಳೇಶ್ವರ	ವೆಂಕಟೇಶ ಮಾಚಕನೂರ	75
161.	ಅಮೂರ್ತತೆ ಮತ್ತು ಇತರ ಲೇಖನಗಳು	ಬಿ.ಸಿ. ದೇಸಾಯಿ	75
162.	ಇಸ್ಲಾಮೀ ಜಗತ್ತು ಮತ್ತು ಮುಸ್ಲಿಮರ ಸಮಸ್ಯೆಗಳು	ಮೂಲ: ಡಾ. ಅಸ್ಗರ್ ಅಲಿ ಎಂಜಿನಿಯ ಅನು: ಹಸನ್ ನಯೀಂ ಸುರಕೋಡ	75
163.	ಗೊಂದಲಿಗ್ಯಾ	ಎ.ಎಂ. ಮದರಿ	125
164.	ಜಯದೇವಿತಾಯಿ ಲಿಗಾಡೆ	ಡಾ. ರಾಮಕೃಷ್ಣ ಮರಾಠೆ	45
165.	ಮಹಾಕ್ರಾಂತಿ (ನಾಟಕ)	ಡಾ. ಜಿ.ಎನ್. ಮಲ್ಲಿಕಾರ್ಜುನಪ್ಪ	50
166.	ಜಾತಿ ವ್ಯವಸ್ಥೆಗೆ ಸವಾಲಾದ ಶರಣರು	ರಂಜಾನ್‌ದರ್ಗಾ	30

* ಪ್ರತಿಗಳು ಮುಗಿದಿವೆ



ಮಧುವರಸರ ಸ್ವಗತ

ಬೆಳಗಾದರೆ ನಿನ್ನ ಮದುವೆಯ ಸಂಭ್ರಮ ಮಗಳೆ
ರಾತ್ರಿಯೇ ಶುರುವಾಗಿದೆಯಲ್ಲಾ ಹಾರವರ ರಗಳೆ.

ಬಿಜ್ಜಳನ ಶಸ್ತ್ರಗಳಿಗೆ ಶಾಸ್ತ್ರಗಳ ಸಾಣೆ ಹಿಡಿಯುವರು
ಸೈನಿಕರು ಸೇರಿ ಕಂಡಕಂಡಲ್ಲಿ ಶರಣರ ಕಡಿಯುವರು.

ಜಾತಿ ವಿಜಾತಿಗಳೆಲ್ಲ ಅಳಿದು ಉಳಿಯಲಿ ಮಾನವತೆ
ಈ ಕಾರ್ಯ ಧರ್ಮಬಾಹಿರ ಎನ್ನುವುದು ದಾನವತೆ.

ಮಗಳೆ ಮನುವಿನ ಕುಲದಲ್ಲಿ ಜನಿಸಿದರೂ ನಾನು
ಬಸವರಸರ ಭಕ್ತಿಪಥವನೇ ಹಿಡಿದು ಸಾಗಿದೆ ನೀನು.

ಕುಲದ ಕತ್ತಲೆಯಿಂದೆಳೆದ ನೀ ಸಮತೆಯ ಬೆಳಕು
ಈ ದಾರಿ ನಾ ಹಿಡಿಯದಿದ್ದರೆ ಬದುಕೆಲ್ಲ ಕೊಳಕು.

ಬ್ರಹ್ಮನ ಬಾಯಲ್ಲಿ ಕುಳಿತು ಕೊಳೆಯುತ್ತಿದ್ದೆವು ನಾವು
ಉಳಿಯುತ್ತಿದ್ದೆವು ಅರಿವಿಲ್ಲದೆ, ಬರುವವರೆಗೆ ಸಾವು.

ಮಹಾಮನೆ ಅರಮನೆಗಳ ಮಧ್ಯದ ಅಂತರ ನೋಡು
ಇದು ದಯೆಯ ಬೀಡು, ಅದು ಅಮಾನುಷರ ಕಾಡು.

ಈ ಮದುವೆ ನಡುಗಿಸಿದೆ ವೇದಶಾಸ್ತ್ರ, ಅರಮನೆಯನ್ನು
ನಾಳೆ ಖತ್ತಲರಾತ್ರಿ, ಕಾಣಬಹುದು ಜವನ ಮನೆಯನ್ನು.

ಅಷ್ಟಾವರಣ ಸಂಪನ್ನೆ ದಿಟ್ಟೆ ನೀನು; ಬೆರಗಾದೆ ನಾನು
ರಕ್ಷಾವರಣಗಳೇ ಇಲ್ಲದ ಸ್ಥಿತಿಯಲ್ಲಿ ಸಿದ್ಧಳಾದೆ ನೀನು.

ಈ ಮದುವೆ ಹಡೆಯುವುದು ಕೀಳಿಲ್ಲದ ಬದುಕನ್ನು
ಶರಣರೆಲ್ಲ ಸಿದ್ಧರಾದರು ಎದುರಿಸಲು ಬರುವುದನ್ನು.

ಹರಳಯ್ಯ, ಚನ್ನಯ್ಯ, ಕಕ್ಕಯ್ಯ, ನಾಗಿದೇವ ಕುಲಜರು
ಜಾತಿ ಕುಲಗೋತ್ರಗಳಲ್ಲಿ ಸಿಕ್ಕವರೇ ಹೊಲೆ ಮಾದಿಗರು.

ಎಂಥ ದುಗುಡ ಸಂಭ್ರಮ, ಎಂಥ ಅಚಲ ನಿರ್ಧಾರ!
ಶರಣಸಂಕುಲದ ಸಂಕಲ್ಪವೇ ಮಾನವತೆಗೆಲ್ಲ ಆಧಾರ.

–ರಂಜಾನ್ ದರ್ಗಾ

ಲೋಹಿಯಾ ಪ್ರಕಾಶನ, ಬಳ್ಳಾರಿ
₹ 30
ISBN 818773143-5
9788187731436